# ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ

(ಖಾಸಗಿ ಪ್ರಸಾರಕ್ಕಾಗಿ)

ಮಾಘ–ಫಾಲ್ಗುಣ

ಸಂಪುಟ 3 ಸಂಚಿಕೆ 1

ಸಂಪಾದಕರು : ಮನೋರಮಾ. ಬಿ.ಎನ್
ವೆಬ್‌ಸೈಟ್ ವಿನ್ಯಾಸ : ಮಹೇಶ್ ಎಳ್ಯಡ್ಕ,
ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು.
ವಿತರಣಾ ಮುಖ್ಯಸ್ಥ : ವಿಷ್ಣುಪ್ರಸಾದ್ ನಿಡ್ದಾಜೆ
ಕಛೇರಿ ನಿರ್ವಹಣೆ : ರಾಜ್‌ಗೋಪಾಲ್.ಬಿ.ಎನ್
ಪ್ರಕಾಶನ : 'ಸಾನಿಧ್ಯ', ಮಡಿಕೇರಿ
ಮುಖಪುಟ ವಿನ್ಯಾಸ : ಸುನೀಲ ಕುಲಕರ್ಣಿ
ಪುಟ ವಿನ್ಯಾಸ : ರಾಜೀವ ಹೆಗಡೆ
ಮುದ್ರಣ : ಅಕ್ಷರೋದ್ಯಮ, ಮಂಗಳೂರು

## ಈ ಸಂಚಿಕೆಯಲ್ಲಿ .....



ಮಂಜೀರ ........ 4
ರಂಗ ಭ್ರಮರಿ: ಹೀಗೊಂದು ಸ್ವಗತ ........ 6
ಪರಿಭ್ರಮಣ: ಉಡುಪಿ........ 7
ಅಕ್ಷರ ಭ್ರಮರಿ: 'ಭರತನಾಟ್ಯ'ದ ದಿಗ್ದರ್ಶನ........ 10
ನರ್ತನ ಸುರಭಿ: ಪಾರಿಭಾಷಿಕ ಪದ ಪರಿಚಯ........ 11
ಲಲಿತ ಲಹರಿ:
1. ನೃತ್ತಹಾಸಿನಿ: ಡಿ.ವಿ.ಜಿ........ 12
2. ನರ್ತಿಸಿದಳು ಸ್ವರ ಸುರನಾರಿ– ಕುವೆಂಪು........ 16
ಒಳನೋಟ ........ 13
ಹಸ್ತ ಮಯೂರಿ: ಸೂಚೀಹಸ್ತ ........ 17
ದೀವಟಿಗೆ : 1. ಯಕ್ಷಗಾನದಲ್ಲೀಗ ಸ್ತ್ರೀಯರ ಬಳೆಗಳ ಸದ್ದು........ 20
2. ನೃತ್ಯರೂಪಕದ ರಂಗ ಸಾಧ್ಯತೆಗಳಿಗೊಂದು ಕನ್ನಡಿ... 22
3. ಯಕ್ಷಗಾನ ಶಿಕ್ಷಣ ಮತ್ತು ಶಿಕ್ಷಣದಲ್ಲಿ ಯಕ್ಷಗಾನ.... 25
4. ಅಲರಿಪುವಿನ ಹೊಸ ಸಾಧ್ಯತೆ ........ 27
ದರ್ಶನ ಭ್ರಮರಿ : ಮಂಟಪ ಪ್ರಭಾಕರ ಉಪಾಧ್ಯಾಯ........ 28
ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ; ರುಕ್ಮಿಣಿ ........ 36
ನಿಮ್ಮ ಬರೆಹ ನಮ್ಮ ಓದು ........ 42
ನುಡಿ–ನಮನ–ಅಂಜಲಿ : ಕೆರೆಮನೆ ಶಂಭು ಹೆಗಡೆ ........ 44





## ಮಂಜೀರ

ಜೆರಾಕ್ಸ್ ಪ್ರತಿಯಾಗಿ ನಮ್ಮ ಕೈಗಳಲ್ಲಿ ಕಣ್ಣು ತೆರೆದಿತ್ತು ಮೊದಲ ತಿಂಗಳ ನೂಪುರ ಭ್ರಮರಿ. ಅಂದು ಫೆಬ್ರವರಿ 10, 2007. ಅದೇ ತಿಂಗಳ ಶಿವರಾತ್ರಿಯ ಹೊತ್ತಿಗೆ ನರ್ತನ ಜಗತ್ತಿನ ಸಾಧ್ಯತೆಗಳನ್ನು ಬಿಡುಗಣ್ಣುಗಳಿಂದ ನೋಡಿ. ಕ್ರಮೇಣ ಪಿಡಿಎಫ್ ಪ್ರತಿಯಾಗಿ, ನಂತರ ಮುದ್ರಿತಗೊಳ್ಳುವ ಹೊತ್ತಿಗೆ ಒಂದು ವರ್ಷ ಸಂದಿದ್ದವು.

ಮತ್ತದೇ ಫೆಬ್ರವರಿ, 10ನೇ ದಿನ. ವರುಷ ತುಂಬಿದ ಸಂಭ್ರಮಕ್ಕೆ ಸಾಕ್ಷಿ ಯಾದದ್ದು 2008. ಅಂಬೆಗಾಲಿಕ್ಕಿ ಬಂದ ಹಾದಿಯನ್ನು ಒಮ್ಮೆ ಹಿಂತಿರುಗಿ ನೋಡುವ ಪ್ರಯತ್ನ– ಮಡಿಕೇರಿಯ ಭಾರತೀಯ ವಿದ್ಯಾ ಭವನದಲ್ಲಿ. ಜೊತೆಗೊಂದು ಓದುಗರ, ಬಳಗದ ಹಾರ್ದಿಕ ಸಮ್ಮಿಲನ. ಕಾರ್ಯಕ್ರಮ ಮುಗಿಯುವ ವೇಳೆಗೆ ವೆಬ್‌ಸೈಟ್ ಎಂಬ ಅಂಗಿ ತೊಟ್ಟ ಕಿಶೋರಿಗೆ ಅಭಿನಂದನೆಗಳ ಮಹಾಪೂರ ಬೆನ್ನುತಟ್ಟಿ ಹರಸಿತ್ತು.

ಸದಭಿರುಚಿಯ ಸಾಧನೆಗೆ ತೊಡಕುಗಳು ಹಲವಾರು. ಆದರೂ ನಂತರದ ಪಯಣಕ್ಕೆ ಹೊಸ ಮಿತ್ರರು, ಹೊಸ ಬಳಗ ಜೊತೆಯಾಗಿ ನಿಂತು ಕೈಜೋಡಿಸಿದ್ದರು. ಆತ್ಮೀಯತೆಯಿಂದ ಬರಮಾಡಿಕೊಂಡವರು ಪರಸ್ಪರ ಕೊಡುಕೊಳ್ಳುವಿಕೆಯ ಅಗತ್ಯ, ಅನಿವಾರ್ಯತೆಗಳಿಗೆ ಸ್ಪಂದಿಸಿದರು. ಮೂದಲಿಕೆ, ಅನಗತ್ಯ ಸಲಹೆಗಳು, ಸ್ವಹಿತಾಸಕ್ತಿಗಳಿಗೆ ಬಳಸಿಕೊಳ್ಳುವ ಹುನ್ನಾರ, ತಪ್ಪು ತಿಳಿವಳಿಕೆ, ಔಪಚಾರಿಕ ಮನ್ನಣೆಗಳ ಪ್ರಪಾತವನ್ನು ದಾಟಿ ಹೋಗುವಲ್ಲಿ ಮನಸು ಮನಸ್ಸಿಗೆ ಸೇತು ಕೂಡಿಸಿದವರು ಕನಸಿನ ವ್ಯಾಪ್ತಿಯನ್ನು ಹಿರಿದುಗೊಳಿಸಿದರು. ಉದಾಸೀನವೋ, ನಿರ್ಲಕ್ಷ್ಯವೋ– ಒಟ್ಟಿನಲ್ಲಿ ಪ್ರತಿಕ್ರಿಯಿಸುವವರ ಕೊರತೆಯ ನಡುವೆಯೂ ಅರಿವಿನ ಕಿಚ್ಚಿಗೆ ಎಣ್ಣೆ ಎರೆಯುತ್ತಲೇ ಬಂದ ಹಲವರು ಬೆಂಗಾವಲಾಗಿ ನಿಂತರು. ಅವರಲ್ಲೆರೂ ಸ್ಮರಣೀಯರು.

ಅನುಭವವು ಸವಿಯಲ್ಲ. ಅದರ ನೆನಪೇ ಸವಿಯು...

ಕೆಲವು ತಪ್ಪುಗಳಿರಬಹುದು, ಒಪ್ಪುಗಳಿರಬಹುದು. ತರ್ಕ–ವಿತರ್ಕ, ವಾದ, ಟೀಕೆ–ಟಿಪ್ಪಣಿಗಳಿರಬಹುದು. ಹೀಗೆ, ಬೆಳವಣಿಗೆಯ ಹಾದಿಗೆ ಬೇಕಾದ ಹೊಸ ದಿಕ್ಕನ್ನು ಹುಡುಕಿಕೊಳ್ಳುವಲ್ಲಿ ಭಿನ್ನತೆಯ ನಡುವೆಯೂ ಭಾವನೆಗಳು ಬೆಸೆದಿತ್ತು. ಕಟ್ಟಿದ ಕನಸುಗಳ ಕದಡುವಿಕೆ ಮತ್ತು ಕಣ್ಣೀರಿನ ಬೆಲೆ ತೆರಬೇಕಾಗಿ ಬಂದಾಗಲೂ, ಸಿದ್ಧಾಂತಗಳಿಗೆ ರಾಜಿ ಮಾಡಿಕೊಳ್ಳದೇ ಇದ್ದ ನೆಮ್ಮದಿ ಸಮಾಧಾನ ನೀಡಿತ್ತು. ಎಷ್ಟೋ ಬಾರಿ ನಾವಾಗೇ ಕಟ್ಟಿಕೊಂಡ ಭ್ರಮೆಗಳು ಕಳಚಿ ಬೀಳುವವರೆಗೂ, ಬಿದ್ದ ಭ್ರಮೆಗಳು ಭರವಸೆಯ ಕುಡಿಗಳಾಗಿ ಚಿಗುರೊಡೆಯುವವರೆಗೂ ಸಾಕಷ್ಟು ಏಳುಬೀಳು, ನೋವು ನಲಿವುಗಳನ್ನು ಕಂಡುಕೊಂಡಳು ನೂಪುರ ಭ್ರಮರಿ.

ಹೌದು, ಈ 2009ರ ಫೆಬ್ರವರಿಗೆ ಎರಡು ವಸಂತ ಕಳೆದು ಮೂರನೇ ಸಂವತ್ಸರಕ್ಕೆ ಕಾಲಿಡುವ ಸಂಭ್ರಮ !

ಕಲೆಯ ಕುರಿತಾಗಿ ಈಗಾಗಲೇ ಹಲವು ಸದಭಿರುಚಿಯ ಗುರಿ, ಉದ್ದೇಶಗಳನ್ನಿಟ್ಟುಕೊಂಡು ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿರುವ ಪತ್ರಿಕೆಗಳಿವೆ. ಅವುಗಳ ಸಾಲಿನಲ್ಲಿ ನೂಪುರವನ್ನು ನೋಡುವ ಆಲೋಚನೆಯಿದೆ, ಆದರೆ ಅವುಗಳೆಲ್ಲವನ್ನು ಹಿಂದಿಕ್ಕಿ ಪ್ರಭುತ್ವ ಸಾಧಿಸಬೇಕೆಂಬ ಹಟ ಹೊತ್ತು ಹೊರಟದ್ದಲ್ಲ ನೂಪುರದ ಪಯಣ.

ಇಂದಿನ ಕಾಲಕ್ಕೆ ಆರೋಗ್ಯಕರ ಸ್ಪರ್ಧೆಯ ಹಿಂದೆಯೂ ಒಂದಷ್ಟು ಮೇಲಾಟಗಳು ಸಾಮಾನ್ಯ. ಆದ್ದರಿಂದ ಪ್ರಾರಂಭಗೊಂಡ ಹಂತದಿಂದಲೂ ಭ್ರಮರಿಯ ಈವರೆಗಿನ ಬೆಳವಣಿಗೆಯುದ್ದಕ್ಕೂ ಇದ್ದದ್ದು– ತನ್ನನ್ನು ತಾನು ಮೀರಿ ಬೆಳೆಯಬೇಕೆನ್ನುವ ಹಂಬಲ. ಆ ಹಂಬಲದಲ್ಲೇ ಭವಿಷ್ಯಕ್ಕೆ ಭರವಸೆಯ ಗೋಪುರವನ್ನು ಕಟ್ಟುತ್ತಿದ್ದೇವೆ. ಕಲೆಯ ಕನವರಿಕೆಯಲ್ಲಿ ಕೈಮರವಾಗುವ ಪುಟ್ಟ ಸ್ವಾರ್ಥ.

ಸೃಜನಶೀಲ ಆಯಾಮದಲ್ಲಿ ವಿನ್ಯಾಸ, ಬರೆಹ, ಶೈಲಿ ಎಲ್ಲದರಲ್ಲೂ ಪರಿಣಾಮಕಾರಿಯಾಗಿ ಬೆಳೆಯುತ್ತಾ, ಹೂರಣದೊಂದಿಗೆ ಆವರಣವನ್ನು ಹಿಗ್ಗಿಸಿಕೊಂಡು ಹೋಗುವ ಸಂಕಲ್ಪ ; ವಿಶಾಲ ವೈವಿಧ್ಯಮಯ ನರ್ತನ ಜಗತ್ತನ್ನು ಕಂಡುಕೊಳ್ಳುವ ರೀತಿ ಅಷ್ಟು ಸುಲಭವಲ್ಲವಾದರೂ ಕಲೆಯ ವಿವಿಧ ಆಯಾಮಗಳತ್ತ, ಜೊತೆಗೆ ನಮ್ಮೊಳಗಿನ ಪ್ರಜ್ಞೆಯನ್ನು ಎಚ್ಚರಿಸುತ್ತಾ ಸಾಗುವ ನಿಲುವು. ಏಕಕಾಲಕ್ಕೇ ಗುರುಹಿರಿಯರನ್ನೂ, ಕಲಾವಿದರನ್ನೂ, ಅಭ್ಯಾಸಿಗಳನ್ನೂ, ಎಳೆಯರನ್ನು ಮತ್ತು ಸಮಕಾಲೀನ ಮನಸ್ಸುಗಳನ್ನು ತಲುಪಬೇಕೆಂಬ ನಿತ್ಯ ಒಲವಿನಲ್ಲಿರುವ ಭ್ರಮರಿಗೆ ಆಯಾಯ ಕಾಲದ ಅಗತ್ಯಗಳನ್ನು ಪೂರೈಸುವುದು ಸವಾಲಿನ ವಿಷಯವೇ ಹೌದು.

ಗುರಿಯನ್ನು ಮುಟ್ಟುವ ತೃಪ್ತಿಗಿಂತಲೂ ಅದನ್ನು ತಲುಪುವ ಹಾದಿಯಲ್ಲಿನ ಪಯಣವೇ ರೋಮಾಂಚಕ ಮತ್ತು ಸವಾಲಿನ ಜೀವನಾನುಭವ.

ಈ ದಿಸೆಯಲ್ಲಿ ಕಲೆಯ ಮತ್ತು ಅದರೊಂದಿಗಿನ ಜೀವನಪ್ರೀತಿಯನ್ನು ಪೋಷಿಸುವ ಮತ್ತು ನಿತ್ಯ ನವೀಕರಿಸಿಕೊಳ್ಳುವ ದೃಷ್ಟಿಯಿಂದ ಮುನ್ನಡೆದರಷ್ಟೇ, ನಮ್ಮ ಕಾರ್ಯಗಳು ಜೀವನಮುಖಿಯೆನಿಸಿಕೊಳ್ಳುತ್ತವೆ. ಬದಲಾವಣೆಯ ಕಾಲಘಟ್ಟಕ್ಕೆ ಪೂರಕವಾಗಿ ನಡೆಯಬೇಕೆಂಬ ಉದ್ದೇಶಗಳನ್ನಿಟ್ಟು ನಡೆದರೆ ; ಕಲೆಯು ಕೇವಲ ಸಾಂಪ್ರದಾಯಿಕ, ಸಾಂಸ್ಕೃತಿಕ ಅಗತ್ಯಗಳನ್ನಷ್ಟೇ ಪೂರೈಸುವುದಕ್ಕೆ ಸೀಮಿತವಾಗದೆ ಸಾಮಾಜಿಕ ಅಗತ್ಯ ಮತ್ತು ಪ್ರಜ್ಞೆಯನ್ನು ಪೂರೈಸಿಕೊಂಡು, ಪ್ರಸ್ತುತವೆನಿಸುತ್ತದೆ. ಪರಂಪರೆಯ ಜೊತೆಗೆ ವಿನೂತನ ನಡೆಯನ್ನು ಮುಕ್ತವಾಗಿ ಒಪ್ಪಿ, ತಿದ್ದಿ ನಡೆಯುವ, ಅದರೊಂದಿಗೆ ಚಲನಶೀಲತೆ ಮತ್ತು ಗುಣಮಟ್ಟದ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಮನಸ್ಥಿತಿ ಇರುವವರೆಗೆ ಕಲೆಯ ಕಡೆಗೆ ನೋಡುವ ಪ್ರತೀ ದೃಷ್ಟಿಯೂ ಹೊಸತೆನಿಸುತ್ತದೆ.

ಕಲೆ ಎಲ್ಲರಿಗೂ ಅರ್ಥವಾಗಬಲ್ಲ ವಿಶ್ವಭಾಷೆ. ಆದರೆ ಕಲೆಯ ವ್ಯಾಕರಣ ಒಂದಷ್ಟು ತಾಂತ್ರಿಕ. ಆದ್ದರಿಂದಲೇ ನಿರ್ದಿಷ್ಟ ವರ್ಗಕ್ಕೆ ಸೀಮಿತ ಎಂಬ ಭಾವನೆ ಎಲ್ಲೋ ಗುರು ಕಲಾವಿದ ಪ್ರೇಕ್ಷಕರಾದಿಯಾಗಿ ಆಳದಲ್ಲಿ ಬೇರೂರಿದೆ. ಆದರೂ ಸರಳೀಕರಿಸಿಕೊಳ್ಳುವ ಹಸಿವು. ಅದಷ್ಟು ಸುಲಭವಲ್ಲದಿದ್ದರೂ ಆಸಕ್ತ ಕಲಾರಸಿಕರ, ಪ್ರೇಕ್ಷಕರ ಬಳಿಗೊಯ್ದು ಮುಟ್ಟಿಸಬೇಕೆಂಬ ಹಟ. ಅದೇ ಕನಸು ಕಂಗಳ ಜಾತ್ರೆ ಪ್ರತೀಕ್ಷಣಕ್ಕೂ ನನಸಿನ ರಥವೇರಬೇಕೆಂಬ ಅದಮ್ಯ ಆಸೆ. ಇಂತಹ ಆಸೆಯ ಮೂಟೆ ಹೊತ್ತ ಬಳಗ ಪ್ರತೀ ಸಂಚಿಕೆಯ ಪ್ರಸವಕ್ಕೂ ಆಗ ತಾನೇ ಹುಟ್ಟಿದ ಮಗುವಿನ ಅಳುವನ್ನು ಸಮಧಾನಿಸುವ ಹೊಸ ತಾಯಿಯಾಗುತ್ತಿರುವುದು, ಆರೈಕೆ ಬೇಡುವ ಕಂದಮ್ಮನಿಗೆ ಇರುವ ಅನುಕೂಲಗಳ ನಡುವೆಯೇ ಸಾರ್ಥಕ್ಯ ಕಾಣಿಸುವ ಪ್ರಯತ್ನ ಮಾಡುತ್ತಿರುವುದು ನಿಜಕ್ಕೂ ಧನ್ಯತೆಯ ಕ್ಷಣ.

ಕಿರಿಯವಳೆನ್ನುತ್ತಲೇ ತನ್ನ ವ್ಯಾಪ್ತಿ ಸಾಧ್ಯತೆಗಳನ್ನು ಹಿಗ್ಗಿಸಿಕೊಳ್ಳುವ ಹಂತದಲ್ಲಿರುವ ನೂಪುರ ಭ್ರಮರಿಯ ಅಂಗಳ, ಮೂರು ವರ್ಷದ ಸಂಭ್ರಮಕ್ಕೆ ಮತ್ತಷ್ಟು ತುಂಬಿದೆ. ಒಳ್ಳೆಯ ಲೇಖನಗಳು, ಚಿಂತನ–ಮಂಥನಗಳು ಭ್ರಮರಿಯ ಮಡಿಲನ್ನು ಸಮೃದ್ಧವಾಗಿಸಿದೆ. ನಾಟ್ಯ ಜಗತ್ತಿನ ವಿಸ್ಮಯ ಗಳಿಗೆ 'ಸಾಥ್' ಕೊಟ್ಟು ನುಡಿದವರ ಅಂತರಂಗದ ದನಿಯಿದೆ. ಇನ್ನು ಬೇಕಿರುವುದು ನಿಮ್ಮ ಬೆಂಬಲ, ಪ್ರೋತ್ಸಾಹ, ಆಶೀರ್ವಾದ. ಅದಿರುವವರೆಗೂ ತುಡಿತ–ಮಿಡಿತಗಳ ಈ ಪಯಣ ನಿರಂತರ.

**ಪ್ರೀತಿಯಿಂದ,**

**✍ ಸಂಪಾದಕರು**





ರಂಗ-ಭ್ರಮರಿ

### ಹೀಗೊಂದು ಸ್ವಗತ...

# ಹೆಜ್ಜೆಯ ಅನುರಣಿಸುವ ಗೆಜ್ಜೆ ನಾ...

● ಅನುಶ್ರೀ ಬಂಡಾಡಿ, ಮಂಗಳೂರು.

**ನೂ**ಪುರ ಭ್ರಮರಿಯ ನಲ್ಮೆಯ ಓದುಗರಿಗೆಲ್ಲಾ ಆತ್ಮೀಯ ನಮಸ್ಕಾರ.

ನಾನ್ಯಾರೆಂದು ತಿಳೀತಾ?

ನನ್ನ ಹೆಸರು ಕೇಳಿದಾಕ್ಷಣ ಆ ನನ್ನ ಚಿತ್ರ ನಿಮ್ಮ ಕಣ್ಣಮುಂದೆ ಬರುವುದು ನಿಶ್ಚಿತ. ನಾಟ್ಯದ ಒಂದು ಪ್ರಮುಖ ಅಂಗವೇ ಆಗಿರುವ ಈ ನಿಮ್ಮ 'ಗೆಜ್ಜೆ'ಯ ಪ್ರತ್ಯೇಕ ಪರಿಚಯ ಬೇಕಿಲ್ಲ ತಾನೇ? ಆದರೂ ನನ್ನ ಬಗೆಗೊಂದಿಷ್ಟು ಅಂತರಾಳದ ಮಾತುಗಳು...

ನಿಜಕ್ಕೂ ಹೆಮ್ಮೆಯೆನಿಸುತ್ತದೆ ನೃತ್ಯಗಾರರು ಲಯಬದ್ಧವಾಗಿ ಹೆಜ್ಜೆ ಹಾಕುತಿರೆ ನಾನು ಅದಕ್ಕೆ ಧ್ವನಿಯಾಗುವೆ. ನಾನಿದ್ದರೇ ತಾನೇ ನೃತ್ಯವದು ಸೊಗ 'ಸಾಗುವುದು"..? ನೃತ್ಯದ ಆ ಸಾರ್ಥಕತೆಗೆ ಕಾರಣವಾದಾಗ ನಾನು ಧನ್ಯ!

ಭರತನಾಟ್ಯದ ರಂಗಪ್ರವೇಶವಾಗುವ ಮೊದಲಿಗೇ ನನ್ನ ಹೆಸರಿದೆ. "ಗೆಜ್ಜೆಪೂಜೆ"– ಆಲಿಸುವಾಗಲೇ ಅದೇನೋ ಖುಷಿ ನೀಡುವ ಮಾತು. ಈಗ ಮಾತ್ರ ಯಾವ್ಯಾವುದೋ ದ್ವಂದ್ವಾರ್ಥದ ಕಾರಣದಿಂದ ಆ ಹೆಸರು ಅಷ್ಟಾಗಿ ಬಳಕೆಯಲ್ಲಿಲ್ಲದಿರುವುದು ವಿಷಾದನೀಯ. ಅದಿರಲಿ, ಈ ಗೆಜ್ಜೆಪೂಜೆಯಾಗದೇ ಯಾರೂ ರಂಗದ ಮೇಲೆ ಗೆಜ್ಜೆ ಕಟ್ಟಿ ನರ್ತಿಸುವಂತಿಲ್ಲ. ಆ ಸಮಾರಂಭವದು ಅದೆಷ್ಟು ವೈಭವೋಪೇತವೆನ್ನುತ್ತೀರಿ! ನೃತ್ಯ ಕಲಿತು ಮೊದಲ ಬಾರಿಗೆ ಅದನ್ನು ಪ್ರದರ್ಶಿಸುವ ಆ ನೃತ್ಯಗಾರರ ಅದಮ್ಯ ಉತ್ಸಾಹದಲ್ಲಿ ನಾನೂ ಲೀನವಾಗುತ್ತೇನೆ.

ನನ್ನನ್ನು ಕಾಲಿಗೆ ಕಟ್ಟಿಕೊಂಡಾಗ ಅವರಲ್ಲಿ ಅದೊಂದು ಅಪೂರ್ವ ಚೈತನ್ಯ ಸಮ್ಮಿಳಿತವಾಗುತ್ತದೆ. ನನ್ನ ನಾದವೇ ಹೆಜ್ಜೆಯ ನಂತರದ ಹೆಜ್ಜೆಗೆ ಸ್ಫೂರ್ತಿ ನೀಡುತ್ತದೆ. ಸುಮಧುರ ಹಿನ್ನಲೆ ಸಂಗೀತಕ್ಕೆ ಮತ್ತಷ್ಟು ಕಾಂತಿ ನನ್ನಿಂದ ದೊರೆಯುತ್ತದೆಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ನೃತ್ಯಗಾರರು ಸರಿಯಾಗಿ ತಾಳಬದ್ಧವಾಗಿ ಹೆಜ್ಜೆ ಹಾಕಿದರೇನೇ ಅದು ಸೊಗಸು. ಆದರೆ, ಒಂದು ವೇಳೆ ತಪ್ಪು–ತಪ್ಪಾಗಿ ಹೆಜ್ಜೆ ಹಾಕಿದರೋ ತಕ್ಷಣ ನನಗೆ ತಿಳಿಯುತ್ತದಾದರೂ ಏನೂ ಮಾಡುವಂತಿಲ್ಲ. ಆಗ ನೃತ್ಯದ ಸೊಗಸೆಲ್ಲಾ ಮಾಯ!

ನನ್ನ ಇತಿಹಾಸ ನೃತ್ಯದಷ್ಟೇ ಹಳೆಯದು. ಅಂದಿನಿಂದ ಇಂದಿನವರೆವಿಗೂ ನೃತ್ಯದೊಂದಿಗೆ ಸದಾ ನಾನಿದ್ದೇನೆ. ಕೇವಲ ಭರತನಾಟ್ಯ ಮಾತ್ರವಲ್ಲ, ಕಥಕ್, ಕೂಚಿಪುಡಿ, ಯಕ್ಷಗಾನ, ಜಾನಪದ– ಹೀಗೆ ತರಹೇವಾರಿ ಕಲಾಪ್ರಕಾರಗಳಲ್ಲಿ ನಾನು ಇರಲೇಬೇಕು. ನನ್ನ ವ್ಯಾಪ್ತಿಯದು ಬಹು ವಿಶಾಲ.

ಇನ್ನು, ನನ್ನ ಹೆಸರನ್ನಿರಿಸಿ ನಡೆಯುತ್ತಿರುವ, ಮುನ್ನುಗ್ಗುತ್ತಿರುವ ಈ ಚೆಂದದ ಪತ್ರಿಕೆಯ ಬಗ್ಗೆ ಅದೆಷ್ಟು ಹೇಳಿದರೂ ಕಡಿಮೆಯೇ! ನಾಟ್ಯ–ನೃತ್ಯಗಳಿಗಾಗಿಯೇ ಮೀಸಲಿರಿಸಿ ಅದರ ಕೀರ್ತಿಯನ್ನು ಮತ್ತಷ್ಟು ಪಸರಿಸುತ್ತಿರುವ 'ನೂಪುರ ಭ್ರಮರಿ'ಗೆ ಈ ಮೂಲಕ ನನ್ನ ಮನದಾಳದ ನಮನ.

**(ಲೇಖಕರು ದ್ವಿತೀಯ ಬಿಎಸ್ಸಿ ವಿದ್ಯಾರ್ಥಿ, ಆಕಾಶವಾಣಿ ಉದ್ಘೋಷಕರು)**


# ಪರಿಭ್ರಮಣ...

***ನೂಪುರ ಭ್ರಮರಿಯು ಮೂರನೇ ವರ್ಷದ ಸಂಭ್ರಮವನ್ನು ಆಚರಿಸಿಕೊಳ್ಳುವ ಈ ಹೊತ್ತಿಗೆ, ಕರಾವಳಿಯ ಸಾಂಸ್ಕೃತಿಕ ರಾಜಧಾನಿಯೆಂದು ಹೆಸರು ಪಡೆದುಕೊಳ್ಳುತ್ತಿರುವ ಉಡುಪಿಯ ನೃತ್ಯ ಶಿಕ್ಷಣ ತರಬೇತಿ ಸಂಸ್ಥೆಗಳ ಮತ್ತು ಕಲಾವಿದರ ಪರಿಚಯ- ಪರಿಭ್ರಮಣವನ್ನು ಮಾಡಿಕೊಳ್ಳೋಣವೇ?***

● **ಎನ್.ರಾಮ ಭಟ್,ಉಡುಪಿ**

## ಶ್ರೀ ರಾಧಾಕೃಷ್ಣ ನೃತ್ಯ ನಿಕೇತನ :

ಈ ಸಂಸ್ಥೆಯು ಕಳೆದ ಎರಡು ದಶಕಗಳಿಂದ ಆಸಕ್ತ ವಿದ್ಯಾರ್ಥಿಗಳಿಗೆ ಭರತನಾಟ್ಯ, ಕೂಚುಪುಡಿ ಹಾಗೂ ಆಂಧ್ರ ಶೈಲಿಯ ನೃತ್ಯದ ತರಬೇತಿಯನ್ನು ನೀಡುತ್ತಿದ್ದು, ಭಾರತದಾದ್ಯಂತ ಮಾತ್ರವಲ್ಲದೆ ಹೊರದೇಶಗಳಲ್ಲೂ ನೃತ್ಯ ಕಾರ್ಯಕ್ರಮವನ್ನಿತ್ತಿದೆ. ಈ ಸಂಸ್ಥೆಯನ್ನು ನಾಟ್ಯಕಲಾ ಪ್ರಪೂರ್ಣ, ನೃತ್ಯಕಲಾಸಿಂಧು, ನೃತ್ಯಕಲಾ ಭೂಷಣ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಮುಂತಾದ ಪ್ರಶಸ್ತಿ-ಬಿರುದುಗಳಿಂದ ಪುರಸ್ಕೃತರಾದ ನಾಟ್ಯಾಚಾರ್ಯ ದಿ.ರಾಧಾಕೃಷ್ಣ ತಂತ್ರಿಯವರು ಸ್ಥಾಪಿಸಿದ್ದು, ಅವರ ತರುವಾಯ ಪುತ್ರಿ ವಿದುಷಿ ಶ್ರೀಮತಿ ವೀಣಾ ಎಂ. ಸಾಮಗ ಮುನ್ನಡೆಸುತ್ತಿದ್ದಾರೆ.



ಇಲ್ಲಿನ ವಿದ್ಯಾರ್ಥಿಗಳೆಲ್ಲರೂ ಭರತನಾಟ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಶೇಕಡಾ ನೂರು ಫಲಿತಾಂಶದೊಂದಿಗೆ ಉತ್ತಮ ಅಂಕ ಗಳಿಸಿ ಸಂಸ್ಥೆಗೆ ಕೀರ್ತಿ ತಂದಿದ್ದು, ಕೂಚುಪುಡಿ ಪರೀಕ್ಷೆಗಳಲ್ಲಿ ಹಾಜರಾದ ವಿದ್ಯಾರ್ಥಿಗಳು ರಾಜ್ಯಕ್ಕೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದು ಸಂಸ್ಥೆಯ ಕೀರ್ತಿ ಪತಾಕೆ ಎತ್ತಿ ಹಿಡಿದಿದ್ದಾರೆ. ಇವರು ರೂಪಿಸಿದ ದಶಾವತಾರ, ಕೃಷ್ಣ ದರ್ಶನ, ನವಗ್ರಹ ಸ್ತುತಿ, ವಿಶ್ವರೂಪ ದರ್ಶನ, ಅರ್ಧನಾರೀಶ್ವರ, ವಂದೇ ಮಾತರಂ, ಸೂರ್ಯ ನಮಸ್ಕಾರ ಇತ್ಯಾದಿ ನೃತ್ಯ ರೂಪಕಗಳು ಪ್ರಖ್ಯಾತಿಗೊಂಡಿವೆ. ಪ್ರತಿ ವರ್ಷ ಚಿಣ್ಣರ ನೃತ್ಯೋತ್ಸವ, ಯುವ ನೃತ್ಯೋತ್ಸವ, ನೃತ್ಯಾರ್ಪಣ ಮೊದಲಾದ ಕಾರ್ಯಕ್ರಮಗಳು ಜನ-ಮನಗೆದ್ದಿದೆ. ಅಲ್ಲದೆ, ಉಡುಪಿಯಲ್ಲಿ ಕಳೆದ ಆರು ವರ್ಷಗಳಿಂದ ಭರತಮುನಿ ಜಯಂತ್ಯುತ್ಸವವನ್ನು ವೈಭವದಿಂದ ಆಚರಿಸುತ್ತಾ ನೃತ್ಯ ಪ್ರೇಮಿಗಳ ಪ್ರಶಂಸೆಗೆ ಪಾತ್ರವಾಗಿದೆ.

**ಹೆಜ್ಜೆ-ಗೆಜ್ಜೆ, ಮಣಿಪಾಲ:** ಈ ಸಂಸ್ಥೆಯು ಕಳೆದ 16 ವರ್ಷಗಳಿಂದ ಎಳೆಯರಲ್ಲಿರುವ ಕಲಾ ಪ್ರತಿಭೆಯನ್ನು ಉಳಿಸಿ, ಬೆಳೆಸುವ ಸಲುವಾಗಿ ವಿದುಷಿ ಯಶಾ ರಾಮಕೃಷ್ಣರವರ ನಿರ್ದೇಶನದಲ್ಲಿ ಶ್ರಮಿಸುತ್ತಿರುವ ಕಲಾ ಸಂಸ್ಥೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದು, ಉನ್ನತ ಮಟ್ಟದ ಹಲವಾರು ನೃತ್ಯ ಕಾರ್ಯಕ್ರಮಗಳನ್ನು ಪ್ರತಿಷ್ಠಿತ ವೇದಿಕೆಗಳಲ್ಲಿ ನಡೆಸಿಕೊಟ್ಟಿರುವ ಹೆಜ್ಜೆ-ಗೆಜ್ಜೆಯು ಉಡುಪಿಯ ಶ್ರಿ ಪಲಿಮಾರು ಮಠದ ಪರ್ಯಾಯಾವಧಿಯಲ್ಲಿ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಂದ ಭರತ ಪ್ರಶಸ್ತಿಯನ್ನು ಪಡೆದಿರುತ್ತದೆ. ಸಂಸ್ಥೆಯ ವಿದ್ಯಾರ್ಥಿಗಳು ಈಗಾಗಲೇ ಭರತನಾಟ್ಯದಲ್ಲಿ ರಾಜ್ಯ ಮಟ್ಟದ ಹಲವಾರು ಬಹುಮಾನಗಳನ್ನು, ಶಿಷ್ಯ ವೇತನವನ್ನು ಪಡೆದುದಲ್ಲದೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ 9 ಪ್ರತಿಷ್ಠಿತ ಪ್ರಶಸ್ತಿಗಳನ್ನು ಗಳಿಸಿದ್ದಾರೆ.







ಸಂಸ್ಥೆಯು ಉಡುಪಿಯ ರಾಜಾಂಗಣದಲ್ಲಿ ಈಗಾಗಲೇ 'ನೃತ್ಯವಾಹಿನಿ' ಹಾಗೂ 'ನಾಟ್ಯಾರಾಧನ' ಶಾಸ್ತ್ರೀಯ ನೃತ್ಯ ಸರಣಿ ಕಾರ್ಯಕ್ರಮಗಳನ್ನು ನೆರವೇರಿಸಿ, ಉದಯೋನ್ಮುಖ ಕಲಾವಿದರನ್ನು ಪರಿಚಯಿಸಿರುತ್ತದೆ. ಉಡುಪಿಯಲ್ಲಿ ದಿ.ಪದ್ಮಿನಿ ರಾವ್‌ರವರ ನೇತೃತ್ವದಲ್ಲಿ ನೃತ್ಯ ಅಭಿನಯದ ಮೇಲೆ ಒಂದು ದಿನದ ಕಾರ್ಯಾಗಾರವನ್ನು, ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಭರತನಾಟ್ಯ ಸ್ಪರ್ಧೆಯನ್ನು ಹಮ್ಮಿಕೊಂಡಿತ್ತಲ್ಲದೆ ಹಿರಿಯ/ಕಿರಿಯ ನೃತ್ಯ ಶಿಕ್ಷಕರಿಗೆ, ಹಿನ್ನೆಲೆ ಗಾಯಕರಿಗೆ, ವರ್ಣಾಲಂಕಾರ ಕಲಾವಿದರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ವಿದುಷಿ ಯಶಾ ರಾಮಕೃಷ್ಣರವರ ಪುತ್ರಿ ಹಾಗೂ ಸಂಸ್ಥೆಯ ವಿದ್ಯಾರ್ಥಿನಿ ಕು. ದೀಕ್ಷಾಳಿಗೆ ಮೈಸೂರಿನ ನೃತ್ಯ ಕಲಾ ಪರಿಷತ್‌ನಿಂದ ನೃತ್ಯ ಕಲಾ ಸಿಂಧು" ಪ್ರಶಸ್ತಿ, ಈ-ಟಿವಿಯ 'ಎದೆ ತುಂಬಿ ಹಾಡುವೆನು' ಪ್ರಶಸ್ತಿ ಲಭಿಸಿರುತ್ತದೆ.

**ನೃತ್ಯ ನಿಕೇತನ, ಕೊಡವೂರು:** ಉಡುಪಿ ತಾಲೂಕಿನ ಗ್ರಾಮೀಣ ಪ್ರದೇಶವಾದ ಕೊಡವೂರಿನಲ್ಲಿರುವ ನೃತ್ಯ ನಿಕೇತನವು ಕಳೆದ 16 ವರ್ಷಗಳಿಂದ ಅನೇಕ ನೃತ್ಯ ಕಲಾವಿದರನ್ನು ರೂಪಿಸಿದ ಕೀರ್ತಿ ಪಡೆದಿದ್ದು, ಇದರ ಅನೇಕ ಶಾಖೆಗಳು ಉಡುಪಿಯ ವಿವಿಧೆಡೆಗಳಲ್ಲಿ ಸಾಂಪ್ರದಾಯಿಕ ಭರತನಾಟ್ಯವನ್ನು ಕಲಿಸುತ್ತಿದ್ದು, ನೃತ್ಯ ಕಲಿಯಬಯಸುವ ಆಸಕ್ತ ಮಕ್ಕಳಿಗೆ ವರದಾನವಾಗಿದೆ. ನೃತ್ಯ ಗುರುಗಳಾದ ವಿದುಷಿ ಶ್ರೀಮತಿ ಲಕ್ಷ್ಮೀ ಗುರುರಾಜ್, ವಿದ್ವಾನ್ ಸುಧೀರ್ ರಾವ್ ಕೊಡವೂರು, ವಿದುಷಿ ಶ್ರೀಮತಿ ಮಾನಸಿ ಸುಧೀರ್ ಇವರು ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಪಂಚವಟಿ, ಭಸ್ಮಾಸುರ ಮೋಹಿನಿ, ಭಕ್ತ ಪ್ರಹ್ಲಾದ, ಶ್ರೀಕೃಷ್ಣಂ ವಂದೇ ಜಗದ್ಗುರುಂ, ಹರಿಹರ ಮಹಾತ್ಮೆ, ಭೂ ಕೈಲಾಸ ಮುಂತಾದ ನೃತ್ಯ ರೂಪಕಗಳನ್ನು ದೇಶದ ಉದ್ದಗಲಕ್ಕೂ ನೀಡಿ ರಸಿಕರ ಮೆಚ್ಚುಗೆ ಗಳಿಸಿದ್ದಾರೆ.



ಈ ಸಂಸ್ಥೆಯು ನೃತ್ಯೋತ್ಸವ ಹಾಗೂ ಶ್ರೀ ಪೇಜಾವರ ಮಠದ ಪರ್ಯಾಯ ಕಾಲದಲ್ಲಿ 2 ವರ್ಷಗಳ ಕಾಲ 'ನೃತ್ಯ ಸೌರಭ' ಶಾಸ್ತ್ರೀಯ ನೃತ್ಯ ಸರಣಿ ಹಾಗೂ ಶ್ರೀ ಅದಮಾರು ಮಠದ ಪರ್ಯಾಯ ಕಾಲದಲ್ಲಿ 2 ವರ್ಷಗಳ ಕಾಲ ನೃತ್ಯ ಕೌಸ್ತುಭ ಶಾಸ್ತ್ರೀಯ ನೃತ್ಯ ಸರಣಿಯನ್ನು ಆಯೋಜಿಸಿದ್ದು, ಸುಮಾರು ಮುನ್ನೂರಕ್ಕೂ ಮಿಕ್ಕಿದ ಕಲಾವಿದರನ್ನು ಪರಿಚಯಿಸಿದೆ. ಉಡುಪಿಯಲ್ಲಿ 'ವಿಶ್ವರೂಪ' ಎನ್ನುವ ರಾಷ್ಟ್ರೀಯ ನೃತ್ಯೋತ್ಸವ ಮತ್ತು ಅಖಿಲ ಕರ್ನಾಟಕ ನೃತ್ಯ ಕಲಾವಿದರ ಸಮ್ಮೇಳನ ವನ್ನು ಸಂಯೋಜಿಸಿದ ಕೀರ್ತಿಯು ಈ ಸಂಸ್ಥೆಗೆ ಸಲ್ಲುತ್ತದೆ. ಅಮೆರಿಕದ ಮತ್ತು ಫ್ರಾನ್ಸ್‌ನ ರಂಗ ಕಲಾವಿದರಿಗೆ ಭರತ ನಾಟ್ಯದ ಪ್ರಾಥಮಿಕ ಶಿಕ್ಷಣವನ್ನು ನೀಡಿದ ಕೀರ್ತಿಯೂ ಈ ಸಂಸ್ಥೆಗೆ ಸಲ್ಲುತ್ತದೆ.

**ಶಾರದಾ ನೃತ್ಯಾಲಯ:** ಉಡುಪಿ ನಗರ ಸಮೀಪದ ಮಾರ್ಪಳ್ಳಿ ಗ್ರಾಮ ಪರಿಸರದಲ್ಲಿ ಕ್ರಿಯಾಶೀಲವಾಗಿರುವ ಈ ನೃತ್ಯ ಸಂಸ್ಥೆ ಹತ್ತು ವರ್ಷಗಳಿಂದ ನೃತ್ಯಾಸಕ್ತರಿಗೆ ನೃತ್ಯ ಶಿಕ್ಷಣವನ್ನು ನೀಡುತ್ತಿದೆ. ಈ ಸಂಸ್ಥೆಯ ನೃತ್ಯ ನಿರ್ದೇಶಕಿ ಶ್ರೀಮತಿ ಪಾವನಾ ರಾಜೇಂದ್ರ ಇವರು ನೃತ್ಯ ಗುರು ದಿ.ಶ್ರೀ ರಾಧಾಕೃಷ್ಣ ತಂತ್ರಿ ಮತ್ತು ಕರ್ನಾಟಕ ಕಲಾ ತಿಲಕ ಡಾ. ವಸುಂಧರಾ ದೊರೆಸ್ವಾಮಿಯವರಲ್ಲಿ ನೃತ್ಯಶಿಕ್ಷಣವನ್ನೂ, ವಿದ್ವಾನ್ ಪಿ.ಮಧೂರು ಬಾಲಸುಬ್ರಮಣ್ಯಂ ಇವರಲ್ಲಿ ಸಂಗೀತ ಶಿಕ್ಷಣವನ್ನೂ ಪಡೆದಿರುತ್ತಾರೆ.

**ಕಲಾನಿಧಿ** : ಉಡುಪಿಯ ಕುಂಜಿಬೆಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾಸಂಸ್ಥೆ. ಕಳೆದ ಹತ್ತು ವರ್ಷಗಳಿಂದ ನೃತ್ಯ ಕಲಾವಿದೆ ವಿದುಷಿ ಪ್ರವೀಣಾ ಮೋಹನ್ ಹಾಗೂ ವಿದುಷಿ ಪ್ರತಿಮಾ ಕಿರಣ್ ಸಹೋದರಿಯರು ಈ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಇಲ್ಲಿ ಸುಮಾರು 40ರಿಂದ 45 ಮಂದಿ ವಿದ್ಯಾರ್ಥಿಗಳು ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಸ್ವತ: ಚಿತ್ರಕಲಾವಿದೆಯೂ ಆಗಿರುವ ವಿದುಷಿ ಪ್ರವೀಣಾ ಮೋಹನ್ ತಮ್ಮ ಪತಿ ಛಾಯಾಚಿತ್ರ ಪತ್ರಿಕೋದ್ಯಮಿ ಆಸ್ಟ್ರೋ ಮೋಹನ್ ಜೊತೆಯಲ್ಲಿ ಅನೇಕ ಚಿತ್ರಕಲಾ ಪ್ರದರ್ಶನ ನೀಡಿದ್ದಾರೆ.



**ಶ್ರೀದೇವಿ ನಾಟ್ಯಾಂಜಲಿ, ಬ್ರಹ್ಮಾವರ:** ಈ ಸಂಸ್ಥೆ ಕಳೆದ ಹತ್ತು ವರ್ಷಗಳಿಂದ ಉಡುಪಿ ಜಿಲ್ಲೆ ಬ್ರಹ್ಮಾವರದಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ ನಾಟ್ಯ ತರಬೇತಿಯನ್ನು ನೀಡುತ್ತಿದೆ. ಈ ಸಂಸ್ಥೆಯನ್ನು 1998ರಲ್ಲಿ ಕಲಾವಿದೆ ವಿದುಷಿ ಶ್ರೀಮತಿ ಶ್ರದ್ಧಾರವರು ಸ್ಥಾಪಿಸಿದ್ದು, ಪ್ರಸ್ತುತ ಅವರ ತಂಗಿ ವಿದುಷಿ ಶ್ರೀಮತಿ ಶ್ರೀದೇವಿ ರಾಘವೇಂದ್ರ ಅವರ ನಿರ್ದೇಶನದಲ್ಲಿ ಮುನ್ನಡೆಯುತ್ತಿದ್ದು, ಸುಮಾರು 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೃತ್ಯಾಭ್ಯಾಸ ಮಾಡುತ್ತಿದ್ದಾರೆ.

ಶ್ರೀದೇವಿ ರಾಘವೇಂದ್ರ ಅವರು ತನ್ನ 5ನೇ ವರ್ಷದಲ್ಲಿ ಸುರತ್ಕಲ್‌ನ ಶ್ರೀ ಚಂದ್ರಶೇಖರ ನಾವಡರಲ್ಲಿ ಭರತನಾಟ್ಯದ ಪ್ರಾಥಮಿಕ ಪಾಠವನ್ನು ಕಲಿತು, ಮುಂದೆ ಉಡುಪಿಯ ಭರತನಾಟ್ಯ ಕಲಾವಿಮರ್ಶಕರಾದ ಶ್ರೀ ನಾರಾಯಣ ಭಟ್ಟರ ಮತ್ತು ಕುಂದಾಪುರದ ಶ್ರೀನಿವಾಸ ಆಚಾರ್ಯರ ಮಾರ್ಗದರ್ಶನದಲ್ಲಿ ಮುನ್ನಡೆದರು.

ಮುಂದೆ ಮೈಸೂರಿನಲ್ಲಿ ಕರ್ನಾಟಕ ಕಲಾತಿಲಕ ಮೈಸೂರಿನ ಡಾ.ವಸುಂಧರಾ ದೊರೈಸ್ವಾಮಿಯವರಲ್ಲಿ ಪಂದನೂರು ಶೈಲಿಯ ನಾಟ್ಯಾಭ್ಯಾಸವನ್ನು ಮಾಡಿ ಭರತನಾಟ್ಯ ವಿದ್ವತ್ ಪರೀಕ್ಷೆಯಲ್ಲಿ ಮೈಸೂರು ವಿಭಾಗಕ್ಕೆ ಪ್ರಥಮ ಸ್ಥಾನದೊಂದಿಗೆ ತೇರ್ಗಡೆ ಹೊಂದಿದರು. ಪ್ರಸ್ತುತ ಶ್ರೀದೇವಿ ಅವರು ವಿವಾಹಾನಂತರ ಪತಿ ಶ್ರೀ ರಾಘವೇಂದ್ರ ತುಂಗರೊಡನೆ ಅಮೆರಿಕದ ನ್ಯೂಜೆರ್ಸಿಯಲ್ಲಿ ವಾಸವಾಗಿದ್ದು, ಅವರ ಶಿಷ್ಯೆಯರು ಈ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ.

ಇವರಷ್ಟೇ ಅಲ್ಲದೆ ಉಚ್ಚಿಲದ ಮಹಾಲಕ್ಷ್ಮೀ ದೇವಸ್ಥಾನ ಬಳಿಯ ನೃತ್ಯನಿಕೇತನದ **ವಿದುಷಿ ಮಂಗಳಾ**, ಅಮ್ಮುಂಜೆಯ ಭ್ರಮರೀ ನಾಟ್ಯಾಲಯದ **ವಿದ್ವಾನ್ ಭವಾನಿ ಶಂಕರ**, ಉಡುಪಿಯ **ಸ್ವಾತಿ ಭಟ್** ಮುಂತಾದವರು ನೃತ್ಯ ದಾಸೋಹದ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದ್ದಾರೆ.

**(ಲೇಖಕರು ಕಲಾಸಕ್ತರು, ಬರಹಗಾರರು)** ■





## ಭರತನಾಟ್ಯ ದಿಗ್ದರ್ಶನ

‘ಒಬ್ಬ ಲೇಖಕ ಅಥವಾ ಸಾಹಿತಿಯ ಕೈ ಮತ್ತೊಬ್ಬರ, ಇನ್ನೊಬ್ಬ ಲೇಖಕ-ಸಾಹಿತಿಯ ಜೇಬಿನಲ್ಲಿರುತ್ತದೆ’- ಸಾಹಿತ್ಯ ಜಗತ್ತಿನ ಸಾರ್ವಕಾಲಿಕ ವ್ಯಂಗ್ಯ! ಕನ್ನಡದಲ್ಲಿ ಉಪಲಬ್ದವಿರುವ ಅದೆಷ್ಟೋ ಭರತನಾಟ್ಯ ಸಂಬಂಧಿತ ಪುಸ್ತಕಗಳು ಈ ಮಾತಿಗೆ ಹೊರತಲ್ಲ. ಹಾಗಾಗಿ ಭರತನಾಟ್ಯ ಸಂಬಂಧಿತ ಹಲವು ಪುಸ್ತಕಗಳಲ್ಲಿ ಕಣ್ಣಾಡಿಸಿದರೂ ಸಂಶೋಧನೆಯಿಲ್ಲದ ಒಂದೇ ಬಗೆಯ ವರ್ಣನೆ, ಮಾಹಿತಿ ಸರ್ವೇ ಸಾಮಾನ್ಯ.

ಆದರೆ 1981 ರಲ್ಲಿ ಹೊರಬಂದ ಒಂದು ಕನ್ನಡ ಗ್ರಂಥ ಇಂದಿಗೂ ಇವೆಲ್ಲವುಗಳಿಗಿಂತಲೂ ಭಿನ್ನವೆನಿಸಿ ಸಾಕಷ್ಟು ಓದುಗರಿಗೆ ಚಿಂತನಪ್ರದವಾದ ಮಾಹಿತಿಗಳನ್ನು ನೀಡುತ್ತಾ, ಹಲವು ಪ್ರಬಂಧಗಳಿಗೆ, ಪಠ್ಯಪುಸ್ತಕಗಳಿಗೆ, ಲೇಖನಗಳಿಗೆ ಆಕರವಾಗಿ ದಶಕಗಳಿಂದಲೂ ಮನ್ನಣೆಗೆ ಪಾತ್ರವಾಗಿದೆ. ನೃತ್ಯದ ಕುರಿತಂತೆ ಬರೆದ ಪುಸ್ತಕಗಳ ಪೈಕಿ ಸಂಶೋಧನಾ ರುಚಿಯ ಸಾಂಗತ್ಯ ಹೆಚ್ಚಿರುವುದು ಈ ಪುಸ್ತಕದಲ್ಲೇ ಎಂದರೆ ತಪ್ಪೇನಿಲ್ಲ. ಹಾಗಾಗಿ ಈ ಪುಸ್ತಕವೊಂದು ಸಮೃದ್ಧ ಜೇಬು!

ಅದುವೇ ನೃತ್ಯ ವಿದ್ವಾಂಸ ವಿ. ಎಸ್. ಕೌಶಿಕ್ ಅವರು ಬರೆದ **ಭರತನಾಟ್ಯ ದಿಗ್ದರ್ಶನ**. ಹೆಸರೇ ತಿಳಿಸುವಂತೆ ಭರತನಾಟ್ಯದ ದಶ ದಿಕ್ಕುಗಳ ದರ್ಶನವೂ ಇಲ್ಲಿ ಲಭ್ಯ. ಬೆಂಗಳೂರಿನ ಸನಾತನ ಕಲಾಕ್ಷೇತ್ರದಿಂದ ಪ್ರಕಾಶಿತಗೊಂಡ ಪುಸ್ತಕವಿದು. ಅನ್ಯ ನಾಟ್ಯಗ್ರಂಥಗಳಲ್ಲಿ ಮೇಲುನೋಟಕ್ಕೆ ಕಾಣಸಿಗದ ಸಾಕಷ್ಟು ತಾಂತ್ರಿಕ ವಿಷಯಗಳು ಇಲ್ಲಿ ದರ್ಶಿತವಾಗುವುದೇ ಈ ಪುಸ್ತಕದ ಹೆಮ್ಮೆ. ಉದಾ : ರಂಗಮಂದಿರ, ನರ್ತನ ಯೋಜನೆ, ಬೆಳಕಿನ ಪ್ರಸರಣ ಮತ್ತು ಒಂದಷ್ಟು ನೃತ್ಯಕಲೆಯ ಕುರಿತಂತೆ ವರ್ತಮಾನದ ಮತ್ತು ಭವಿಷ್ಯತ್ತಿನ ಹಲವು ಸವಾಲು, ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ವಿದ್ವತ್‌ಪೂರ್ಣ ಪ್ರಬಂಧಗಳು.

ಭೂಮಿಕೆ, ನರ್ತನದ ಅವಸ್ಥಾತ್ರಯ, ನೃತ್ತ, ನೃತ್ಯ, ನಾಟ್ಯ, ಅಭಿನಯ, ಮುದ್ರೆಗಳು, ಪ್ರಚಲಿತ ನೃತ್ಯ ಪ್ರಕಾರಗಳು, ಭರತನಾಟ್ಯದ ಆನುಪೂರ್ವಿ, ಭರತನಾಟ್ಯದ ಕಾರ್ಯಕ್ರಮ ಯೋಜನೆ, ನಾಟ್ಯ-ಯೋಗ ಸಮನ್ವಯ, ಅಲರಿಪು, ಜತಿಸ್ವರ, ಶಬ್ದ, ವರ್ಣ, ಲಾಸ್ಯಾಭಿನಯ ಸಾಹಿತ್ಯ, ಪಲ್ಲವಿ, ಲಘುನೃತ್ಯಗಳು, ತಿಲ್ಲಾನ, ರಂಗಮಂದಿರದ ವರ್ಣ ಸಂಯೋಜನೆ, ಉಪಸಂಹಾರ ಎಂಬ 20 ಅಧ್ಯಾಯಗಳು ಸಂಶೋಧನಾರೂಪದ ಮಾಹಿತಿ, ಲೇಖನಗಳು ಶ್ಲೋಕ, ಸಂದರ್ಭ, ಆಕರಗಳೊಂದಿಗೆ ಇಲ್ಲಿವೆ.

ನಾಟ್ಯದ ವಿವಿಧ ಅಂಶಗಳನ್ನು ಮತ್ತು ಅದರೊಂದಿಗೆ ವೇದ, ಯೋಗ, ಉಪನಿಷತ್ತು, ವ್ಯಾಕರಣ, ಕೋಶ, ಸೂತ್ರ, ತಂತ್ರ, ಸಂಹಿತೆ, ಶಿಲ್ಪ, ಪುರಾಣ, ಭಾಗವತ, ಭಗವದ್ಗೀತೆ, ಸಹಸ್ರನಾಮ, ಸಂಗೀತ ಕೃತಿ, ಜನಪದ, ಸಾಹಿತ್ಯ, ನಾಟಕ, ಚರಿತ್ರೆಗಳ ಸಂಬಂಧವನ್ನು ಪೂರಕವಾದ ಸುಂದರ ಚಿತ್ರಗಳ ಸಹಿತ ವಿವರವಾಗಿ ಅವಲೋಕಿಸಲಾಗಿದೆ. ಹಾಗಾಗಿ ನೃತ್ಯಾಭ್ಯಾಸಿಗಳಿಗೆ, ಆಸಕ್ತರಿಗೆ ಓದಲು ಮಾರ್ಗ ದರ್ಶಿಸಲೇಬೇಕಾದ ಸುಂದರ ಸಮನ್ವಯ ಪೂರ್ಣ ಗ್ರಂಥ.

# ನರ್ತನ ಸುರಭಿ

# ಪಾರಿಭಾಷಿಕ ಪದ ಪರಿಚಯ

● ವೈಷ್ಣವಿ.ಎನ್

**ನೃತ್ಯ, ನಾಟ್ಯದಲ್ಲಿ ಬಳಕೆಯಾಗುವ ಅದೆಷ್ಟೋ ಶಬ್ದಗಳ ಪರಿಚಯ ವಿದ್ಯಾರ್ಥಿಗಳಿಗೋ, ಪ್ರೇಕ್ಷಕರಿಗೋ ಇಲ್ಲದೆ ನೃತ್ಯ-ನಾಟ್ಯಗಳ ಆಮೂಲಾಗ್ರ ಸಂಗತಿಯನ್ನು, ಸಂದರ್ಭವನ್ನು ತಿಳಿಯುವಲ್ಲಿ ಅಸಮರ್ಥರಾಗುವುದಿದೆ. ನೃತ್ಯ ಪ್ರದರ್ಶನಗಳ ಸಂದರ್ಭದಲ್ಲೋ, ಅಥವಾ ವಿಮರ್ಶೆಯನ್ನು ಓದುವಾಗಲೋ ಇಂತಹ ಸಾಧ್ಯತೆಗಳು ಹೆಚ್ಚು. ಹೀಗಾಗಿ ಜನಸಾಮಾನ್ಯರ ನಾಡಿಮಿಡಿತವಾಗುವ ನೃತ್ಯವು ಕ್ರಮೇಣ ಹುಳಿ ದ್ರಾಕ್ಷಿಯೆನಿಸಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ ದುಡಿಯುತ್ತಿರುವ ನೂಪುರಭ್ರಮರಿಯ ಪ್ರಯತ್ನಕ್ಕೆ ವೈಷ್ಣವಿಯವರು ಮತ್ತೊಮ್ಮೆ ಕೈಜೋಡಿಸಿದ್ದಾರೆ. ಈ ಸಂಚಿಕೆಯಿಂದ ಅವರ ಅಂಕಣ ನರ್ತನ ಸುರಭಿಯಲ್ಲಿ ಭರತನಾಟ್ಯದ ಕೆಲವು ಪಾರಿಭಾಷಿಕ ಶಬ್ದಗಳನ್ನು ಪರಿಚಯ ಮಾಡಿಕೊಳ್ಳೋಣವೇ?**

**(ಸೂಚಿಯುನ್ನು ಕೊಡಲಾಗಿದ್ದು ವಿವರಿಸಲಾಗುವ ಶಬ್ದಗಳು ಗ್ರಂಥಗಳಿಂದ ಉದ್ಧರಿಸಲ್ಪಟ್ಟವಾಗಿರುತ್ತವೆ.)**

**(ಅಭಿನಯ ದರ್ಪಣ : ಅ.ದ ; ನಾಟ್ಯಶಾಸ್ತ್ರ : ನಾ.ಶಾ)**

**ಅಂಕುರ (ನಾ.ಶಾ) :** ಹಸ್ತವಿನ್ಯಾಸಗಳಿಂದ ಅಭಿನಯ ಮಾಡುವಂಥದ್ದು. ಆಂಗಿಕಾಭಿನಯದಲ್ಲಿ ಇದೊಂದು ಕ್ರಮ. ವಾಕ್ಯದ ಒಳಾರ್ಥ ಮತ್ತು ಅದರ ಮನೋಭಾವಗಳನ್ನು ಪ್ರಕಟಗೊಳಿಸುವ ವಾಕ್ಯಾರ್ಥಾಭಿಯವೆಂಬ ವಿಷಯದಲ್ಲಿ ಇದೂ ಒಂದು ಮಾಧ್ಯಮ.

**ಅಂಗ (ನಾ.ಶಾ) :** ತಲೆ, ಕೈ, ಸೊಂಟ, ಎದೆ, ಪಕ್ಕೆ, ಕಾಲು ಇವು ಆರು ಅಂಗಗಳು. ಮಾನವನ ದೇಹಭಾಗಳು. ನೃತ್ಯಕಾರ್ಯದಲ್ಲಿ ಪ್ರಧಾನವಾಗಿರುವಂಥದ್ದು. ಇದನ್ನು ಉಪಯೋಗಿಸಿಯೇ ನೃತ್ಯವನ್ನು ಕೈಗೊಳ್ಳಲಾಗುತ್ತದೆ. ಆಂಗಿಕಾಭಿನಯಕ್ಕೆ ಇವೇ ಆಧಾರ.

**ಅಂಗಭ್ರಮರಿ (ಅ.ದ) :** ಹನ್ನೆರಡು ಅಂಗುಲಗಳ ಅಂತರದಲ್ಲಿ ಪಾದಗಳನ್ನಿಟ್ಟು ದೇಹವನ್ನು ಚಕ್ರಾಕಾರವಾಗಿ ಸುತ್ತುವುದು.

**ಅಂಗಶುದ್ಧ (ನಾ.ಶಾ) :** ಆಂಗಿಕಾಭಿನಯಕ್ಕೆ ಅಗತ್ಯವಾದ ದೇಹದ ಭಾಗಗಳು ಖಚಿತವಾಗಿ ನಿರೂಪಿಸಲ್ಪಟ್ಟಿದ್ದರೆ ಅಂಗಶುದ್ಧವಿದೆ ಎಂದರ್ಥ.

**ಅಂಗಾಹಾರ (ನಾ.ಶಾ) :** ದೇಹದ ಅಂಗಾಂಗಗಳನ್ನು ವಿಶಿಷ್ಟ ಸ್ಥಾನಗಳಲ್ಲಿ ಚಲಿಸುವುದು. ಆರರಿಂದ ಒಂಭತ್ತು ಕರಣಗಳು ಸೇರಿದರೆ ಒಂದು ಅಂಗಾಹಾರವಾಗುತ್ತದೆ. ಮುಖ್ಯವಾಗಿ 32 ಪ್ರಕಾರದ ಅಂಗಾಹಾರಗಳಿವೆ.





**ಅಗ್ರಗ (ನಾ.ಶಾ) :** ಇದೊಂದು ಪಾದ ಕ್ರಮ. ವೇಗವಾಗಿ ಕಾಲ್ಬೆರಳನ್ನು ಮುಂದಿಟ್ಟು ನಡೆಯುವುದು.

**ಅಗ್ರತಲ ಸಂಚರ (ನಾ.ಶಾ) :** ಇದೊಂದು ಪಾದ ಕ್ರಮ. ಹಿಮ್ಮಡಿಯನ್ನು ಮೇಲಕ್ಕೆತ್ತಿ ಅಂಗುಷ್ಠವನ್ನು ಸೇರಿಸಿದಂತೆ ಬೆರಳುಗಳನು ಬಗ್ಗಿಸುವುದು. ನೆಲಕ್ಕೆ ಅಪ್ಪಳಿಸಲು, ಗಾಯವಾದಾಗ ನಡೆಯಲು ಎಂಬುದಾಗಿ ಉಪಯೋಗಿಸುವುದು.

**ಅಂಚಿತ (ನಾ.ಶಾ) :** ಗ್ರೀವಾ ಮತ್ತು ಶಿರೋ ಭೇದ ಅಂದರೆ ಕುತ್ತಿಗೆಯನ್ನು ಮತ್ತು ತಲೆಯನ್ನು ಚಲಿಸುವ ರೀತಿಗಳಲ್ಲಿ ಒಂದು ಬಗೆ. ಗಲ್ಲಿಗೇರಿಸುವ ಅಭಿನಯ, ಮೇಲಕ್ಕೆ ನೋಡಲು, ಜ್ವರ, ಕೂದಲನ್ನು ಸರಿಪಡಿಸುವಾಗ ಇದರ ಬಳಕೆಯಾಗುತ್ತದೆ.

**ಅಂಚಿತ (ನಾ.ಶಾ) :** ಇದೊಂದು ಪಾದ ಕ್ರಮ. ಹಿಮ್ಮಡಿಯನ್ನು ನೆಲದ ಮೇಲೂರಿ, ಕಾಲಿನ ಮುಂಭಾಗ ಮತ್ತು ಕಾಲ್ಬೆರಳುಗಳನ್ನು ಮೇಲಕ್ಕೆತ್ತುವುದು. ಕಾಲಿನ ಮುಂಭಾಗಕ್ಕೆ ಗಾಯವಾದಾಗ ನಡೆಯುವ ಸಂದರ್ಭದಲ್ಲಿ ಇಂತಹ ಪಾದಸ್ಥಾನ ಬಳಕೆಯಾಗುತ್ತದೆ.

**ಅಂಜಲಿ (ನಾ.ಶಾ, ಅ.ದ) :** ಸಂಯುತ ಹಸ್ತ ಪ್ರಕಾರದಲ್ಲಿ ಅಂದರೆ ಎರಡೂ ಹಸ್ತಗಳನ್ನು ಉಪಯೋಗಿಸಿ ಮಾಡುವ ಮುದ್ರೆಗಳ ಪೈಕಿ ಮೊದಲನೇಯದು. ಇದರ ಲಕ್ಷಣ ತಲೆಯ ಮೇಲೆ ಹಸ್ತಗಳನ್ನು ಜೋಡಿಸಿ ನಮಸ್ಕರಿಸುವುದು.

**(ಮುಂದುವರೆಯುವುದು.......... )**

# ನೃತ್ತಹಾಸಿನಿ

ನೃತ್ತಹಾಸಿನೀ–ಮತ್ತಕಾಶಿನೀ ।
ಚಿತ್ತಜ್ಯೋತ್ಸವ–ಪ್ರತ್ಯವೇಕ್ಷಿಣೀ ॥

ರನ್ನದಿಂಬಿನಾ–ಕೆನ್ನೆಗೆಂಪನು ।
ಹೊನ್ನಿನೆಸಕದಾ–ನುಣ್ಣಮೆಯ್ಯನು ॥
ಕನ್ನೆ ನನ್ನಿಯಾ–ಕಣ್ಣ ಸನ್ನೆಯಂ ।
ಬಲ್ಲನೇನವಂ– ಚೆನ್ನಕೇಶವಂ ॥

ಕನ್ಯಕಾಮಿಣೀ–ಪುಣ್ಯಕಾಮಿನೀ ।
ಸ್ವರ್ಣಕಿಂಕಿಣೀ– ಶಿಂಜಿತಸ್ವನೀ ॥
ಪೂರ್ಣಸುಖಮಯಂ– ತೂರ್ಣಕರುಣೆಯಿಂ ।
ನಿನ್ನ ವರಿಸುವಂ–ಚೆನ್ನಕೇಶವಂ ॥



● ಡಿ.ವಿ.ಜಿ.
(ಅನ್ತಃಪುರ ಗೀತೆಗಳು)



# ಒಳನೋಟ

* ದಿನಾಂಕ 29 ಡಿಸೆಂಬರ್– ದರ್ಶಿನಿ ಮಂಜುನಾಥ್ ಅವರ 'ನೃತ್ಯದಿಶಾ' ಸಂಸ್ಥೆಯ ಉದ್ಘಾಟನೆ ಮತ್ತು ಸಂಸ್ಥೆಯ ವಿದ್ಯಾರ್ಥಿ ಗಳಿಂದ 'ನೃತ್ಯ ವಂದನ' ಕಾರ್ಯಕ್ರಮ ಗುರು ಪದ್ಮಿನಿ ರಾವ್ ಅವರಿಗೆ ಅರ್ಪಣೆ– ಬೆಂಗಳೂರಿನ ನಯನಾ ಸಭಾಂಗಣದಲ್ಲಿ.

* 7 ಜನವರಿ– ಚೆನ್ನೈಯ ಸಂಗೀತ ಅಕಾಡೆಮಿಯಲ್ಲಿ, 15 ಜನವರಿಯಂದು ಬೆಂಗಳೂರಿನ ಕಿಂಕಿಣಿ ನೃತ್ಯೋತ್ಸವದಲ್ಲಿ, 31 ಜನವರಿಯಂದು ಬೆಂಗಳೂರಿನ ದೇವಗಿರಿ ಶ್ರೀನಿವಾಸ ದೇವಸ್ಥಾನದಲ್ಲಿ ಇತ್ತೀಚೆಗಷ್ಟೇ ಚೆನ್ನೈಯ ಶ್ರೀಕೃಷ್ಣ ಗಾನಸಭಾದ ನೃತ್ಯೋತ್ಸವದಲ್ಲಿ ಪುರಸ್ಕೃತ ರಾದ ಖ್ಯಾತ ನೃತ್ಯ ದಂಪತಿ ಶ್ರೀಧರ್ ಮತ್ತು ಅನುರಾಧಾ ಶ್ರೀಧರ್ ಅವರಿಂದ ಮಹಾಭಾರತ ನೃತ್ಯ ಪ್ರಸ್ತುತಿ.

* ಜನವರಿ 4ರಿಂದ ಫೆಬ್ರವರಿ 4ರವರೆಗೆ ಮಂಗಳೂರಿನಲ್ಲಿ ಕರಾವಳಿ ಉತ್ಸವ. ಮೂರು ಪ್ರತಿಷ್ಠಿತ ವೇದಿಕೆಗಳಲ್ಲಿ ದಿನಂಪ್ರತಿ ಜರುಗುವ ವಿವಿಧ ಬಗೆಯ ಕಾರ್ಯಕ್ರಮಗಳ ಸಾಂಸ್ಕೃತಿಕ ಜಾತ್ರೆ.

* 4 ಜನವರಿ– ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲಾ ಶಾಸ್ತ್ರೀಯ ನೃತ್ಯ ಕಲಾವಿದರ ಸಂಘಟನೆ ಯಾದ ಕರಾವಳಿ ನೃತ್ಯಕಲಾ ಪರಿಷತ್ತಿನ ವತಿಯಿಂದ ಶ್ರೀಕೃಷ್ಣ ಕಲ್ಯಾಣ ಮಂಟಪದಲ್ಲಿ ಭರತಮುನಿ ಜಯಂತಿ ಕಾರ್ಯಕ್ರಮ. ಮೈಸೂರಿನ ನೃತ್ಯಾಲಯ ಟ್ರಸ್ಟ್ ನ ಡಾ.ತುಳಸಿ ರಾಮಚಂದ್ರ ಅವರಿಂದ ಭರತ

**ನರ್ತನ ಜಗತ್ತಿನ ಒಳನೋಟಗಳನ್ನು ಕಟ್ಟಿಕೊಡುವ ಕೆಲಸದಲ್ಲಿ, ಅದರ ಆಳ ವಿಸ್ತಾರಗಳನ್ನು ಅರಿಯುವಲ್ಲಿ ಕಾರ್ಯಕ್ರಮ, ಪ್ರಯತ್ನಗಳೂ ಬಹುಮುಖ್ಯ. ಇದು ನಮ್ಮನ್ನು ಸಮಕಾಲೀನ ಜಗತ್ತಿನೊಂದಿಗೆ ಸ್ಪಂದಿಸುವಂತೆ ಮಾಡುತ್ತದೆ, ಜೊತೆಗೆ ನಮ್ಮ ನಡುವಿನ ಗುರು–ಕಲಾವಿದ–ಕಲಾಪ್ರೇಮಿಗಳನ್ನು ಅವರ ಪ್ರಯತ್ನ–ಪ್ರತಿಭೆಗಳನ್ನು ಅರಿಯಲೂ ಸಹಕಾರಿಯಾಗುತ್ತದೆ. ಇದೊಂದು ನಿಟ್ಟಿನಲ್ಲಿ ಪ್ರೋತ್ಸಾಹವೂ ಹೌದು. ಅದಕ್ಕಾಗಿಯೇ ಹಿನ್ನೋಟ–ಮುನ್ನೋಟಗಳ ಈ 'ಒಳನೋಟ'.**

**ಆದ್ದರಿಂದ ಓದುಗರ ಅನಿಸಿಕೆಯಂತೆ ಪತ್ರಿಕೆ ಹೊರಬರುವ ಹೊತ್ತಿಗೆ ಆ ವರೆಗಿನ ಪ್ರತೀ ಎರಡು ತಿಂಗಳುಗಳ ಕಾರ್ಯಕ್ರಮ ಪರಿವಿಡಿಯನ್ನು ಇನ್ನು ಮುಂದೆ ನೀಡಲಾಗುವುದು. ವಿವರಗಳನ್ನು ಕಳಿಸಿ ಕೊಡುವವರು ಪತ್ರಿಕೆಯ ನಿಷ್ಠ ಓದುಗರೂ, ಸದಸ್ಯರೂ ಆಗಿದ್ದು, ಸ್ಪಂದಿಸುವವರಾಗಿದ್ದರೆ ಒಳ್ಳೆಯದು. ನಿಮ್ಮ ಸಂಸ್ಥೆಯ ಅಥವಾ ಪ್ರದೇಶದ ಕಾರ್ಯಕ್ರಮದ ವಿವರಗಳನ್ನು ಪ್ರತೀ ತಿಂಗಳ ಮೊದಲ ವಾರದ ಒಳಗಾಗಿ ಕಳಿಸಿಕೊಡಬಹುದು. ವಿಶಿಷ್ಟ ಕಾರ್ಯಕ್ರಮಗಳೆನಿಸಿದರೆ ಅದನ್ನು ದೀವಟಿಗೆ ಅಂಕಣಕ್ಕೆ ಬಳಸಿಕೊಳ್ಳಲಾಗುವುದು.**





ಮುನಿಗೆ ನುಡಿನಮನ, ಕಲೋಪಾಸಕರಿಂದ ಪುಷ್ಪಾರ್ಚನೆ–ನೃತ್ಯಾರ್ಪಣ. ನಾಟ್ಯಾಚಾರ್ಯರುಗಳಾದ ಜಯಲಕ್ಷ್ಮಿ ಆಳ್ವ, ಕೆ.ಬಿ. ಮಾಧವರಾವ್, ಉಳ್ಳಾಲ ಮೋಹನ್ ಕುಮಾರ್, ಕುದ್ಕಾಡಿ ವಿಶ್ವನಾಥ ರೈ, ಬಿ. ಪ್ರೇಮನಾಥ, ಮಾಸ್ಟರ್ ವಿಠಲ್ ಅವರಿಗೆ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರಿಂದ ಸನ್ಮಾನ; ನೃತ್ಯವಿದುಷಿಯರಿಂದ ನೃತ್ಯೋಪಾಸನೆ.

* 7 ರಿಂದ 12 ಜನವರಿ ವರೆಗೆ ಆಳ್ವಾಸ್ ವಿರಾಸತ್: ಖ್ಯಾತಿವೆತ್ತ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ; ಶೋಭಾವನ, ಮೂಡಬಿದಿರೆಯಲ್ಲಿ. ಈ ಬಾರಿಯ ಆಳ್ವಾಸ್ ಪ್ರಶಸ್ತಿ ಪಂಡಿತ್ ಹರಿಪ್ರಸಾದ್ ಚೌರಾಸಿಯಾ ಅವರಿಗೆ.

* 7 ಜನವರಿ– ನಾಗಪುರದ ಎನ್‌ಎಡಿಪಿ ಆಡಿಟೋರಿಯಂನಲ್ಲಿ ವೈಜಯಂತಿ ಕಾಶಿ ಮತ್ತು ತಂಡದ 'ಜನನೀ ಜನ್ಮ ಭೂಮಿಶ್ಚ' ನೃತ್ಯ ನುಡಿಚಿತ್ರ.

* 10 ಜನವರಿ– ರವೀಂದ್ರ ಕಲಾಮಂಟಪ, ಎಂಜಿಎಂ ಕಾಲೇಜು ಉಡುಪಿಯಲ್ಲಿ ಉದ್ಯಾವರ ಮಾಧವ ಆಚಾರ್ಯ ವಿರಚಿತ 'ಅಂಬೆ' ಏಕವ್ಯಕ್ತಿ ರಂಗ ಪ್ರಯೋಗ ಡಾ.ವಸುಂಧರಾ ದೊರೈಸ್ವಾಮಿ ಅವರಿಂದ.

* 11 ಜನವರಿ– ಪುತ್ತೂರಿನ ಮೂಕಾಂಬಿಕಾ ನೃತ್ಯ ಕಲಾಶಾಲೆಯ ನೃತ್ಯೋತ್ಸವ.

* 10 ಮತ್ತು 11 ರಂದು ಬೆಂಗಳೂರಿನ ಶಾಂಭವಿ ಸ್ಕೂಲ್ ಆಫ್ ಡ್ಯಾನ್ಸ್ ಮತ್ತು ರಂಗ ತರಂಗದ ಸಹಭಾಗಿತ್ವದಲ್ಲಿ ಕೆಂಗೇರಿಯ ಶಾಂಭವಿ ಡ್ಯಾನ್ಸ್ ಥಿಯೇಟರ್ ನಲ್ಲಿ ಸಂಕ್ರಾಂತಿ ಪ್ರತಿಭಾ ಸಮಾರಂಭದ ಪ್ರಯುಕ್ತ ಎರಡು ವಿಭಾಗಗಳಲ್ಲಿ ಶಾಸ್ತ್ರೀಯ, ಜಾನಪದ, ಸುಗಮ ಸಂಗೀತ ಸ್ಪರ್ಧೆ ಮತ್ತು ಶಾಸ್ತ್ರೀಯ, ಸಮಕಾಲೀನ ಅಥವಾ ಸೃಜನಶೀಲ, ಜಾನಪದ ನೃತ್ಯ ಸ್ಪರ್ಧೆ.

* 11 ಜನವರಿ– ಕಿಂಕಿಣಿ ಉತ್ಸವದ ಅಂಗವಾಗಿ ಬೆಂಗಳೂರಿನ ಎಚ್‌ಎನ್ ಕಲಾಕ್ಷೇತ್ರದಲ್ಲಿ ವೈಜಯಂತಿ ಕಾಶಿ ಅವರಿಂದ 'ಕೂಚುಪುಡಿ ವೈಭವಂ' ಏಕವ್ಯಕ್ತಿ ಪ್ರಯೋಗ.

* 14 ಜನವರಿ– ಮಂಗಳೂರಿನ ಸನಾತನ ನಾಟ್ಯಾಲಯದಿಂದ ಸನಾತನ ನೃತ್ಯೋತ್ಸವ.

* 16 ಜನವರಿ– ಗುಜರಾತ್‌ನ ಅಹಮದಾಬಾದ್‌ನ ಮೊದೇರಾ ಉತ್ಸವದಲ್ಲಿ ವೈಜಯಂತಿ ಕಾಶಿ ಅವರಿಂದ ಸಾಂಪ್ರದಾಯಿಕ ಕೂಚುಪುಡಿ ಪ್ರದರ್ಶನ.

* 16 ಜನವರಿ– ಮೈಸೂರಿನ ಭೂಷಣ್ ಅಕಾಡೆಮಿಯಿಂದ 'ಉದ್ಭವ ಭೂಷಣ' ಪ್ರಶಸ್ತಿ ಸನ್ಮಾನಿತ ಮಂಗಳೂರಿನ ಕು. ಸೌಂದರ್ಯ ಅವರಿಂದ ನೃತ್ಯ ಪ್ರಸ್ತುತಿ, ಜಗನ್ಮೋಹನ ಅರಮನೆಯಲ್ಲಿ.

* 17 ಜನವರಿ– ದೃಷ್ಟಿ ನೃತ್ಯೋತ್ಸವದ ಅಂಗವಾಗಿ ವಿವಿಧ ಕಲಾವಿದರಿಂದ ಭರತನಾಟ್ಯ, ಕಥಕ್, ಏಕವ್ಯಕ್ತಿ ಯಕ್ಷಗಾನ, ಸಮಕಾಲೀನ ನೃತ್ಯ ಮತ್ತು ಕಳರಿಯಪಟ್ಟು ನೃತ್ಯ ಪ್ರದರ್ಶನ ಹಾಗೂ ಕಲಾವಿದರಾದ ಮೈಸೂರು ವಿ.ಸುಬ್ರಮಣ್ಯ ಮತ್ತು ವೈಜಯಂತಿ ಕಾಶಿ ಅವರಿಗೆ ಸನ್ಮಾನ–ಬೆಂಗಳೂರಿನ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ.

* 18 ಜನವರಿ– ಅನನ್ಯ ಸಂಸ್ಥೆಯ ವತಿಯಿಂದ ಭಾವ ಸಂಕ್ರಮಣ ಕಾರ್ಯಕ್ರಮ.

* ಬೆಂಗಳೂರಿನ ಸೇವಾಸದನದಲ್ಲಿ ಭರತನಾಟ್ಯ ಗುರು ಮತ್ತು ಕಲಾವಿದರಾದ ಪ್ರೊ.ಎಂ. ಆರ್ ಕೃಷ್ಣಮೂರ್ತಿ ಅವರಿಂದ ಉಪನ್ಯಾಸ ಮತ್ತು ಅನುಭವ ಸಮಾಲೋಚನೆ.
* 25 ಮತ್ತು 26 ಜನವರಿ – ಶಾಂಭವಿ ಡ್ಯಾನ್ಸ್ ಥಿಯೇಟರ್‌ನಲ್ಲಿ ಬೆಲ್ಲಿ ಅಥವಾ ಓರಿಯಂಟಲ್ ಡ್ಯಾನ್ಸ್ ಕುರಿತಾಗಿ ಸ್ಪೇಯ್ನ್‌ನ ಅಮೋರ್ ಅವರಿಂದ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ.
* 29 ಜನವರಿ–ಮಹಾರಾಷ್ಟ್ರ ಸರ್ಕಾರ, ಸಂಗೀತ ನಾಟಕ ಅಕಾಡೆಮಿಯ ಸಹಯೋಗದಲ್ಲಿ ಸಪ್ತ ರಂಗ ಉತ್ಸವದ ಅಂಗವಾಗಿ ಮುಂಬೈನ ರವೀಂದ್ರ ನಾಟ್ಯ ಮಂಚ್‌ನಲ್ಲಿ ಶಾಂಭವಿ ಡ್ಯಾನ್ಸ್ ಸ್ಕೂಲ್ ವಿದ್ಯಾರ್ಥಿಗಳಿಂದ ಗುರು ವೈಜಯಂತಿ ಕಾಶಿ ನಿರ್ದೇಶನದ 'ವೀರಭಾರತಿ' ಕೂಚುಪುಡಿ ರಂಗ ಪ್ರಸ್ತುತಿ.
* ಫೆಬ್ರವರಿ 9 ರಿಂದ ನಾಲ್ಕು ದಿನಗಳ ಪರ್ಯಂತ ಮಂಗಳೂರಿನ ಅಲೋಶಿಯಸ್ ಕಾಲೇಜಿನಲ್ಲಿ ನಾಟಕೋತ್ಸವ–'ರಂಗರಂಗೋತ್ಸವ'
* 13, 14, 15 ಫೆಬ್ರವರಿ– ಮಂಗಳೂರಿನ ಬಳ್ಳಾಲ್‌ಬಾಗ್‌ನ ಸನಾತನ ನಾಟ್ಯಾಲಯದಲ್ಲಿ ಭರತಮಣಿಸಭಾದ ವತಿಯಿಂದ ಮಂಟಪ ಪ್ರಭಾಕರ ಉಪಾಧ್ಯಾಯರ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನ.
* ಫೆಬ್ರವರಿ 13ರಿಂದ ಮೂರು ದಿನದ ಪರ್ಯಂತ ಸುಳ್ಯದ ಖ್ಯಾತ ರಂಗಕರ್ಮಿ ಜೀವನ್ ರಾಮ್ ಸುಳ್ಯ ಅವರ ಮಾರ್ಗದರ್ಶನದಲ್ಲಿ ರಂಗಮನೆಯಲ್ಲಿ ಮಕ್ಕಳ ನಾಟಕೋತ್ಸವ
* ಫೆಬ್ರವರಿ 20 –ಬೆಂಗಳೂರಿನ ವೈಜಯಂತಿ ಕಾಶಿ ಅವರ ಪುತ್ರಿ, ಶಿಷ್ಯೆ ಪ್ರತೀಕ್ಷಾ ಕಾಶಿ ಅವರ ಕೂಚುಪುಡಿ ರಂಗಪೂಜಾ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ.
* ಫೆಬ್ರವರಿ 21– ಬೆಂಗಳೂರಿನ ಯವನಿಕಾದಲ್ಲಿ ಸಂಜೆ 6 ಗಂಟೆಗೆ ಕಲ್ಪತರು ಕಲಾವಿಹಾರ ಸಂಸ್ಥೆಯ ವಿದುಷಿ ಪದ್ಮಜ ಸುರೇಶ್ ಅವರ ಶಿಷ್ಯೆ,ಕು. ತಾರಿಣಿ ಅವರ ಅರಂಗೇಟ್ರಂ.
* ಕರ್ನಾಟಕ ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವದ ಸಂದರ್ಭದಲ್ಲಿ ಯಕ್ಷಗಾನ ಕಲಾವಿದ ಶ್ರೀ ಮಹಾಬಲ ಹೆಗಡೆ, ಕೆರೆಮನೆ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ರಾಜ್ಯಪಾಲ, ಕುಲಾಧಿಪತಿ ಶ್ರೀ ರಾಮೇಶ್ವರ್ ಠಾಕೂರ್ ಅವರು ನೀಡಿ ಸನ್ಮಾನಿಸಿದರು.
* ಪಂಡಿತ್ ರಾಜಶೇಖರ ಮನ್ಸೂರ್, ನೃತ್ಯ ಕಲಾವಿದೆ ಮಂಜು ಭಾರ್ಗವಿ, ವಸಂತ ಮಾಧವಿ, ಎಸ್.ಶಂಕರ್, ಟಿ. ಆರ್. ರಂಗಸ್ವಾಮಿ, ಶುಭಾ ಹುಯಿಲಗೋಳ, ಸಂಜೀವ ಪೋತದಾರ್, ಕೆ. ಹರಿದಾಸ್, ಭದ್ರಗಿರಿ ಸರ್ವೋತ್ತಮ ದಾಸ್, ಜಯಶ್ರೀ ಅರವಿಂದ್, ಎನ್. ಎಸ್. ಪ್ರಸಾದ್ ಅವರಿಗೆ ಈ ಸಾಲಿನ ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ.





# ಲಲಿತ ಲಹರಿ



**ಶಿಶಿರ ಶೃಂಗಾರಕ್ಕೆ ಕುವೆಂಪು ವಿರಚಿತ 'ಕದರಡಕೆ' ಕವನ ಸಂಕಲದಿಂದಾಯ್ದ ಕವನ ನರ್ತಿಸಿದಳು ಸ್ವರಸುರನಾರಿ.. ಇದೋ ನಿಮ್ಮ ಓದಿಗೆ....**

ನರ್ತಿಸಿದಳು ಸ್ವರಸುರನಾರಿ
ಲಾಸ್ಯವಿನ್ಯಾಸದ ವೈಯಾರಿ
ಕೇಳಿರೆ ಕಿವಿ, ಕಂಡನು ಕವಿ,
ರಸ ಸಂಚಾರಿ!

ಪೀತಾಂಬರದುಡೆ, ಹೂ ತುಂಬಿದ ಜಡೆ,
ದಂತದಿ ಕೈಗಯ್ದಿಹ ಮೈ,
ಗೆಡೆಹಾವಿನ ಹೆಡೆ ಎಣೆಯಾಡುವ ನಡೆ,
ತೈತಕತೈಗುಲಿಯುವ ಕೈ!

ಧಮು ಧುಮು ಧುಮು ಕೇಳ್: ಜಲಪಾತದ ಬೀಳ್!
ಕಾಣ್ ಅದೊ ಗಿರಿಯಿಂದುರುಳ್ವ ಝರಿ!
ಬೆಳ್ಳಂಗೆಡೆವುದು ಬೆಳ್‌ನೆಯ್ಯಂದದಿ,
ಮಂಜಾಗಲ್ ಮಲೆಪಸುರ್‌ದರಿ!


ದೂರದ ಮೊರೆ: ಏನದು? ಕಡಲಿನ ಕರೆ;
ತೆರೆ ತೆರೆ ತೆರೆ ಬಂದುದು ಬಳಿಸಾರಿ
ಸುಳಿ, ನೊರೆ, ತುಂತುರು, ನೀಲ ಅನಂತತೆ:
ಬಂದಪ್ಪಿತು ಸುಖರಸ ಲಯವಾರಿ!

ಕಣ್ ಮುಚ್ಚಿತು ನಿಶೆ, ಕಣ್‌ದೆರೆಯಿತು ಉಷೆ,
ಇಂದ್ರಿಯ ದಿಗಂತದೊಳದೊ ಸೂರ್ಯೋದಯ!
ನೀಲಾಂಬರ ರಮೆ ಮೇಘತಿಲೋತ್ತಮೆ:
ಆಲಿಸು! ನಂದನವನ ಖಗಹೃದಯ!


ಶಿಲೆ ಶಿಲೆ ಶಿಲೆ ಸೇರಿ, ತರು ತರು ತರು ಏರಿ,
ಶೈಲಾರಣ್ಯಧ್ಯಾನವ ತೋರಿ,
ಪರ್ವಿದವದೊ ಪರ್ವತ ಪಂಕ್ತಿ
ರಾಶಿ ರಾಶಿ ದಿಗ್ದಂತಿ!

ಬಂದನುಭವ ಬರುವನುಭವ
ಭವ ಭವ ಭವದನುಭವ ಸಾಗರದಿ
ದೇವಾಸುರೆ ಫಣಿಮಂದಿರೆ
ಮೋಹಿನಿಯೋಲಮೃತದ ಕರದಿ:

ನರ್ತಿಸಿದಳು ಸ್ವರ ಸುರನಾರಿ:
ಲಾಸ್ಯವಿನ್ಯಾಸದ ವೈಯಾರಿ:
ಕೇಳಿರೆ ಕಿವಿ, ಕಂಡನು ಕವಿ,
ರಸ ಸಂಚಾರಿ!



# ಸೂಚೀ ಹಸ್ತ



## ಹಸ್ತ ಮಯೂರಿ

**ಲಕ್ಷಣ:** ತೋರು ಬೆರಳನ್ನು ನಿಡಿದಾಗಿ ಹಿಡಿದು ಉಳಿದ ಬೆರಳನ್ನು ಹೆಬ್ಬೆರಳಿನ ತುದಿಯೊಂದಿಗೆ ಒಂದು ಎಂಬರ್ಥದಲ್ಲಿ ಸೇರಿಸುವುದು. ಸೂಚೀ ಎಂದರೆ ಸೂಜಿ ಎಂದರ್ಥ. ಸೂಚೀಮುಖ ಎನ್ನುವುದು ಇನ್ನೊಂದು ಹೆಸರು. ಸೂಚ್ಯಾಸ್ಯ ನಾಟ್ಯಶಾಸ್ತ್ರ ನೀಡಿದ ಹೆಸರು. ಕಥಕ್ಕಳಿ, ಮಣಿಪುರಿ ಮುಂತಾದ ನೃತ್ಯ ಪದ್ಧತಿಗಳಲ್ಲಿ ಸೂಚೀಮುಖವೆಂದು ಕರೆಯುತ್ತಾರೆ. ಸೂಚಿ ಹಸ್ತದಲ್ಲೇ ಸ್ವಲ್ಪ ಬದಲಾವಣೆಗಳೊಂದಿಗೆ ಅಂದರೆ ಹೆಬ್ಬೆರಳನ್ನು ತೋರುಬೆರಳ ಕೆಳಗಿನ ಮೊದಲ ಗೆರೆಗೆ ಮುಟ್ಟಿಸಿದರೆ ಅದು ಅರ್ಧಸೂಚಿಯೆನಿಸಿಕೊಳ್ಳುತ್ತದೆ. ಅರ್ಧಸೂಚಿಯು ಮೊಳಕೆ ಚಿಗುರು, ಪಕ್ಷಿಯ ಮರಿಗಳು, ದೊಡ್ಡ ಕ್ರಿಮಿಗಳನ್ನು ಸೂಚಿಸುವುದು.

ಒಡಿಸ್ಸಿ ನೃತ್ಯ ಪದ್ಧತಿಯಲ್ಲಿ ಸೂಚೀ ಹಸ್ತಕ್ಕೆ ನಿರ್ದೇಶಿತ ಎಂದು ಕರೆಯುವುದಿದೆ. ಒಡಿಸ್ಸಿಯಲ್ಲಿ ಸೂಚೀ ತರಹದ ಇನ್ನೊಂದು ಹಸ್ತಕ್ಕೆ ಪ್ರಬೋಧಕ ಎಂದು ಹೆಸರು. ಇದು ಎಚ್ಚರಿಸು, ವಿಷದೀಕರಿಸು ಎಂಬುದನ್ನು ತಿಳಿಸುವಲ್ಲಿ ಉಪಯೋಗವಾಗುತ್ತದೆ.

***ಆಗಮವೇದದಲ್ಲಿ ಕಂಡು ಬರುವ 37 ಮುದ್ರೆಗಳಲ್ಲಿ ತ್ರಾಸಿನಿಮುದ್ರೆಯು ಸೂಚೀಹಸ್ತವೇ ಆಗಿದೆ. ಪರಿಗ್ರಹಮುದ್ರೆ ಎಂಬ ಇನ್ನೊಂದು ಮುದ್ರೆಯು ಅರ್ಧಸೂಚೀ ಎಂಬ ಮುದ್ರೆಯಾಗಿದೆ. ಯೋಗದಲ್ಲಿ ಕಂಡುಬರುವ ಚಿಕಿತ್ಸಕ ಮುದ್ರೆಗಳ ಪೈಕಿ ಅನುಶಾಸನ (ವಜ್ರ) ಮುದ್ರೆಯೆಂಬುದು ಸೂಚೀಹಸ್ತವೇ ಆಗಿದೆ. ಈ ಮುದ್ರೆಯು ಜೀವನದಲ್ಲಿ ಶಿಸ್ತು, ನಾಯಕತ್ವ, ಕಾರ್ಯಕ್ಷಮತೆ, ಚಟುವಟಿಕೆಯುಳ್ಳ ವ್ಯಕ್ತಿತ್ವ ಬೆಳವಣಿಗೆಗೆ, ರಕ್ತಪರಿಚಲನೆಯ ಅಡ್ಡಿಗಳನ್ನು ನಿವಾರಿಸಲು ಸಹಕರಿಸುತ್ತದೆ. ಜಪಮುದ್ರೆಯೆಂಬ ಇನ್ನೊಂದು ಮುದ್ರೆಯು ಅರ್ಧಸೂಚಿಹಸ್ತವಾಗಿದ್ದು ಜಪದ ಶೀಘ್ರ ಯಶಸ್ಸಿಗೆ ಕಾರಣವಾಗುತ್ತದೆ.***

*ಸಾಮಾನ್ಯ ಜನಜೀವನದಲ್ಲಿ ಸೂಚಿಹಸ್ತವನ್ನು ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವುದು. 'ಅವನು, ನೀನು' ಎಂದು ತೋರಿಸಲು, ನಿರ್ಲಕ್ಷ್ಯದಿಂದ ಏಕವಚನ ಪೂರ್ವಕ ಕರೆಯುವುದು, ತಲೆ ಕರೆದುಕೊಳ್ಳುವುದು, ಯೋಚನೆ, 'ಶ್'–ನಿಶ್ಶಬ್ದ ಇತ್ಯಾದಿಯಾಗಿ ಸಂವಹನ ಮಾಡಲು ಉಪಯೋಗಿಸುತ್ತಾರೆ. ಯಕ್ಷಗಾನದಲ್ಲಿ ಮೂಲೆ, ಚಂದ್ರ, ಸೂರ್ಯ, ಆಶ್ಚರ್ಯ, ಕೇಳುವಿಕೆಗೆ ಈ ಹಸ್ತವನ್ನು ಬಳಸುತ್ತಾರೆ.*

**ವಿನಿಯೋಗ:** ಒಂದು ಎಂಬ ಸಂಖ್ಯಾಸೂಚನೆ, ಪರಬ್ರಹ್ಮ ಎಂಬ ಭಾವನೆ, ನೂರು ಎಂಬ ಸಂಖ್ಯೆ, ರವಿ, ನಗರ, ಲೋಕ, ಹಾಗೆಯೇ ಎಂದು ಹೇಳುವುದು, ಇದು ಅಥವಾ ಅದು, ನಿರ್ಜನ ಪ್ರದೇಶ, ಬೆದರಿಸುವುದು, ಕೃಶವಾಗಿರುವಿಕೆ ಮುಳ್ಳು, ಕಾಂತಿ, ಶರೀರ, ಆಶ್ಚರ್ಯಸೂಚನೆ, ಜಡೆ ಹೆಣೆಯುವಿಕೆ, ಛತ್ರಿ, ಸಮರ್ಥಿಸುವುದು, ಕೈಗಳು, ರೋಮಾಂಚಕ, ನಗಾರಿ ಹೊಡೆಯುವುದು, ಕುಂಬಾರನ ಚಕ್ರ ತಿರುಗುವಿಕೆ, ಗಾಡಿಯ ಚಕ್ರದ ಸುತ್ತು, ಆಲೋಚನೆ, ಸಾಯಂಕಾಲ ಏಕಾಂತ ಜೀವನ, ಕೋಲು ಅಥವಾ ದಂಡ, ಯೋಗ್ಯತೆ, ವಿಮರ್ಶೆ.





**ಇತರೆ ವಿನಿಯೋಗ:** ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುವುದು, ನವಿಲಿನ ತಲೆಯ ಮೇಲಿನ ಜುಟ್ಟು, ಕೋರೆ ಹಲ್ಲಿನ ಪ್ರಾಣಿ, 'ಇವನು ಯಾರೆ'ಂಬ ಭಾವ, ಸಂಯೋಗ, ವಿಯೋಗ, ಜಗಳ, ಜನರಗುಂಪು, ಧ್ವಜ, ಮೆಚ್ಚಿಗೆ, ಶ್ವಾಸ ನೋಡುವುದು, ವಿರಹ, ಸತ್ಯವಚನ, ಕುಂಡಲ, ಹುಣ್ಣಿಮೆ, 'ನೀವು' ನಾವು ಎಂಬುದನ್ನು ತೋರಿಸುವಾಗ, ವಿದ್ಯುತ್, ಬಳ್ಳಿ, ಕಿವಿಯ ಆಭರಣ, ಅಂಕುಡೊಂಕಾಗಿ ನಡೆಯುವುದು, 'ಭಲೆ–ಭಲೆ' ಎನ್ನುವುದು, ಮಗು, ಹಾವು, ಹೊಗೆ, ಬಳ್ಳಿ, ಹಕ್ಕಿಗಳ ಗರಿ ಬೀಳುವುದು, ನಕ್ಷತ್ರ, ಮೂಗು, ಎತ್ತರವಾಗಿ ಹಿಡಿದ ಕೋಲು, ಉದ್ದ ಹಲ್ಲುಗಳ ಮುಖ, ಉದ್ದ–ಎತ್ತರ, ಸೂರ್ಯೋದಯ–ಸೂರ್ಯಾಸ್ತ ವಾಕ್ಯರಚನೆ, 'ಬೇಡ, ಹೇಳು' ಮುಂತಾದವುದನ್ನು ಸೂಚಿಸಲು ಬಳಸುತ್ತಾರೆ.

ರೋಷ, ಬೆವರು ಸೂಚನೆಗೆ, ಪುರುಷನು ಕುಂಡಲ–ಅಂಗದ ಮೊದಲಾದ ಆಭರಣಗಳನ್ನು ಧರಿಸುವುದಕ್ಕೆ, ಗರ್ವ, ಶತ್ರುಗೋಚರ, ಯಾರಿವನು ಎಂಬ ಸೂಚನೆಗೆ, ಕಿವಿಯನ್ನು ತುರಿಸಲು, ಬಂಧನ, ಹಗಲು–ರಾತ್ರಿಗಳ ಕೊನೆಯನ್ನು ಬಿಡಿಸಿ ಸೂಚಿಸಲು, ಚಂದ್ರಮಂಡಲ, ಶಿವನ ಮೂರನೆಯ ಕಣ್ಣು, ಇಂದ್ರಮಂಡಲ, ಎಳೆಹಾವು, ಚಕ್ರ, ಮಿಂಚು, ಧ್ವಜ, ಅರಳಿದ ಹೂ, ಧೂಪದೀಪ, ಚಿತ್ತ, ಗಧೆ, ಪಾರೋಳು, ಕಿವಿಯೋಲೆ, ಸರ್ವಸ್ವರ್ಗವನ್ನೂ ತೆಗೆದುಕೊಳ್ಳು, ಆಕಳಿಕೆ, ದೀರ್ಘ ಅಧ್ಯಯನ, ದೀರ್ಘದಿವಸ, ದೀರ್ಘವಾಕ್ಯ, 'ಮಾತಾಡು, ಇಲ್ಲ–ಬೇಡ' ಎನ್ನಲು ಬಳಸುತ್ತಾರೆ.

ಕುಂಡಲ, ತೋಳಬಂಧಿ ಕಪೋಲದಲ್ಲಿ ಬರೆದ ಚಕ್ರ, ಸಿಟ್ಟು, ಬೆವರು, ಕೂದಲು, ವೈರ, ಅಭಿಮಾನ, ಕಿವಿಕೆರೆತ, ಬೇಟೆ, ಸಮಾಗಮ, ವಿಚ್ಛೇದ, ಜಗಳ, ಸಂಜೆ ದಿನಾಂತ, ನಿಶಾಂತ್ಯ, ಬೆಳಿಗ್ಗೆ, ಯಾವುದಾದರೂ ಕೋಪ, ಕಲ್ಲು, ಯಾಂತ್ರಿಕ ವಸ್ತು, ಬೆಟ್ಟ, ಸುಳಿಗಾಳಿ, ಊಟಬಡಿಸು, ಶಿವ, ಇಂದ್ರ, ಪೂರ್ಣಚಂದ್ರ, ಇಂದ್ರ ಧ್ವಜ, ಶಿವನ ತ್ರಿನೇತ್ರ, ಇಂದ್ರನ ಕಣ್ಣು, ಹಲ್ಲು, ತಿಕ್ಕು, ಕುತ್ತುವ ಸೂಜಿ, ಮೋಹಿನಿವೇಷದ ಅವತಾರ, ಮುಂತಾದುವುಗಳ ಸೂಚನೆಗೆ ಬಳಸಬಹುದು.

ಸಂಕರ ಹಸ್ತದ ವಿಭಾಗದಲ್ಲಿ, ಸೂಚೀಹಸ್ತವನ್ನು ಹಿಂಭಾಗದಲ್ಲಿ ಪ್ರಸರಿಸಿದರೆ 'ಅವನು' ಎಂದೂ, ಮುಂದೆ ಚಾಚಿ ಹಿಡಿದರೆ 'ವೀಕ್ಷಣೆ', ಎರಡೂ ಸೂಚೀಹಸ್ತಗಳನ್ನು ಹಿಡಿದರೆ ಅಡ್ಡಿ, ವಿರೋಧ, ನಾಗ ಎಂದೂ, ಎರಡೂ ಸೂಚೀಹಸ್ತಗಳನ್ನು ಮೂಲಭಾಗದಲ್ಲಿ ಒಂದಕ್ಕೊಂದು ಸೇರಿಸಿದರೆ ಸಂಧಿಯೆಂದೂ, ನಿಶ್ಚಲವಾಗಿ ಹಿಡಿದರೆ ಮೇಲಕ್ಕೆ ಎತ್ತಲ್ಪಟ್ಟದುದೆಂದು ಅರ್ಥವಾಗುವುದು. ಅಧೋಮುಖವಾಗಿ ಹಿಡಿದರೆ ದಯೆ ತೋರಿಸುವುದು, ಕಿವಿಗಳ ಸಮೀಪ ಹಿಡಿದರೆ ಕರ್ಣಾಭರಣ ಎಂದಾಗುವುದು.

ನಾನಾರ್ಥ ಹಸ್ತ ವಿಭಾಗದಲ್ಲಿ ಸೂಚೀಮುಖಹಸ್ತವನ್ನು ಮುಖದ ಅಗ್ರಭಾಗದಲ್ಲಿ ಹಿಡಿದರೆ ಬ್ರಹ್ಮಚರ್ಯ, ಎಡಭಾಗದಲ್ಲಿ ಕೆಳಗೆ ಹಿಡಿದರೆ ಚಲಿಸದಿರುವಿಕೆ, ಮತ್ತು ಬರೆಯುವಿಕೆ ಮತ್ತು ನಿನ್ನೆಯ ದಿನ ಎಂಬರ್ಥಕ್ಕೂ ಉಪಯೋಗವಾಗುತ್ತದೆ. ಸೂಚೀಹಸ್ತವನ್ನು ಮುಂದೆ ನಿಶ್ಚಲವಾಗಿ ನಿಲ್ಲಿಸಿದಲ್ಲಿ 'ಒಂದು ಕಾಷ್ಠೆ' ಎಂಬ ಕಾಲಪ್ರಮಾಣದ ಸೂಚಕವಾಗಿಯೂ ಬಳಸಬಹುದು. ನಿಶ್ಚಲವಾಗಿ ಹಿಡಿದರೆ ಒಂದು ಮಾಸವೆಂದೂ ಚಾಲಿಸಿದರೆ ಒಂದು ವರ್ಷ, ಯುಗವೆಂದು ಅರ್ಥೈಸಬಹುದು.

ಇತರ ಗ್ರಂಥಗಳಲ್ಲಿ ಉಲ್ಲೇಖಿಸಲಾದ ನೃತ್ತ ಹಸ್ತಗಳ ಪೈಕಿ ಸೂಚೀವಿದ್ಧ ಹಸ್ತವೆಂಬುದಿದ್ದು ಸೂಚೀ ಹಸ್ತಗಳನ್ನು ಅನ್ಯೋನ್ಯಾಭಿಮುಖವಾಗಿ ಹಿಡಿಯುವುದರಿಂದ ಇದು ಸಂಘಟಿಸುತ್ತದೆ. ಪಾಂಡವ ಧರ್ಮರಾಜನನ್ನೂ ಸೂಚಿಸಲು ಎರಡು ಕೈಗಳಲ್ಲಿ ಸೂಚೀ ಹಸ್ತಗಳನ್ನು ಭುಜದ ಬಳಿ ಅಲುಗಾಡಿಸಬೇಕು.

ದೇವತಾ ಹಸ್ತಗಳಲ್ಲಿ ಒಂದಾದ ಸರಸ್ವತೀ ಹಸ್ತಕ್ಕೆ ಬಲಹಸ್ತದಲ್ಲಿ ಸೂಚಿ, ಎಡ ಹಸ್ತದಲ್ಲಿ ಅರ್ಧಚಂದ್ರ ಈ ಎರಡನ್ನೂ ಮೇಲ್ಮುಖವಾಗಿ ಎದೆಯ ಮುಂದೆ ಇರಿಸಬೇಕು. ಅಥವಾ ಬಲಗೈಯಲ್ಲಿ ಸೂಚಿ ಹಸ್ತವನ್ನು ಅಧೋಮುಖದಲ್ಲಿರಿಸಿ, ಸೊಂಟದ ಬಲಭಾಗಕ್ಕೆ ಬರುವಂತೆ ಹಿಡಿದು ಹಾಗೂ ಕಪಿತ್ಥ ಹಸ್ತವನ್ನು ಎಡಗೈಯಲ್ಲಿ ಉನ್ಮುಖವಾಗಿ ಭುಜಕ್ಕೆ ಇದಿರಾಗಿ ಹಿಡಿಯುವುದು. ನವಗ್ರಹ ಹಸ್ತಗಳಲ್ಲಿ ಕುಜ ಹಸ್ತವು ಎಡಗೈಯಲ್ಲಿ ಸೂಚೀಹಸ್ತ, ಬಲಗೈಯಲ್ಲಿ ಮುಷ್ಟಿಹಸ್ತವನ್ನು ಹಿಡಿಯುವುದರಿಂದ ಸಂಭವಿಸುತ್ತದೆ. ಎಡಗೈಯಲ್ಲಿ ಸರ್ಪಶೀರ್ಷ ಹಸ್ತವನ್ನು, ಬಲಗೈಯಲ್ಲಿ ಸೂಚೀ ಹಸ್ತವನ್ನು ಹಿಡಿದರೆ ಅದು ರಾಹು ಹಸ್ತ. ಎಡಗೈಯಲ್ಲಿ ಸೂಚೀಹಸ್ತವನ್ನೂ, ಬಲಗೈಯಲ್ಲಿ, ಅರ್ಧಪತಾಕಹಸ್ತವನ್ನೂ ಹಿಡಿಯುವುದು ಕೇತು ಹಸ್ತವೆನಿಸಿಕೊಳ್ಳುತ್ತದೆ.

ಸೂಚೀಹಸ್ತವನ್ನು ಭುಜದ ಬಳಿ ಬಗ್ಗಿಸಿ ಹಿಡಿದು ನೋಡಿದರೆ ಅದು ಭ್ರಾತೃಭಗಿನೀ ಅಂದರೆ ಸಹೋದರನ ಹೆಂಡತಿ(ಅತ್ತಿಗೆ)ಯನ್ನು ತೋರಿಸುತ್ತದೆ. ಸೂಚೀಹಸ್ತವನ್ನು ಮೇಲಕ್ಕೆತ್ತುವುದರಿಂದ ಶತಭಿಷಾ ಮತ್ತು ಸೂಚೀಹಸ್ತವನ್ನು ಸ್ವಸ್ತಿಕಾಕಾರ ಮಾಡುವುದರಿಂದ ಉತ್ತರಾಭಾದ್ರಾ ನಕ್ಷತ್ರವನ್ನು ಹೇಳಬಹುದು. ಸೂಚಿಹಸ್ತಗಳನ್ನು ಅಭಿಮುಖವಾಗಿ ಹಿಡಿಯುವುದು ಮಿಥುನರಾಶಿಯ ಸೂಚಕ.

ಸೂಚೀ ಹಸ್ತವನ್ನು ಅಲ್ಲಾಡಿಸುವುದು ರಕ್ತಸಾಯಿ ಅಥವಾ ಇಂಬಳ (ಜಿಗಣೆ)ಯನ್ನು ಸೂಚಿಸಿದರೆ ಪಕ್ಷಿಹಸ್ತಗಳ ಪೈಕಿ ಕಡಲಹದ್ದು (ಕುರರ) ಎಂಬ ಪಕ್ಷಿಯನ್ನು ಸಂವಹಿಸಲು ನಿಧಾನ ಮಾಡುತ್ತಿರುವ ಸೂಚೀಹಸ್ತವನ್ನು ಬಳಸಲಾಗುತ್ತದೆ. ಕಾಲವನ್ನು ಸೂಚಿಸುವ ಹಸ್ತಗಳಲ್ಲಿ ಇಡೀದಿನ ಮತ್ತು ತಿಂಗಳು ಎಂಬುದಕ್ಕೆ ಸೂಚೀಹಸ್ತವನ್ನು ಬಳಸಲಾಗುತ್ತದೆ. ನೇತ್ರಾವತೀ ನದಿ, ಲೋಕಪಾಲಕ ಮಂಧತ, ಚಕ್ರವರ್ತಿ ರಘುವನ್ನು ಸೂಚಿಸಲು ಬಳಸುತ್ತಾರೆ.







**ದೀವಟಿಗೆ 1**

# ಯಕ್ಷಗಾನದಲ್ಲೀಗ ಸ್ತ್ರೀಯರ ಬಳೆಗಳ ಸದ್ದು..!

ಗಂಡು ಕಲೆಯೆಂಬ ಅನ್ವರ್ಥನಾಮಕ್ಕೆ ಪೂರಕವಾಗಿ ಹಿಂದಿನಿಂದಲೂ ಯಕ್ಷಗಾನದಲ್ಲಿ ಪುರುಷರಿಗೇ ಪ್ರಾತಿನಿಧ್ಯ. ಕಲೆಯು ಸ್ತ್ರೀಯರನ್ನು ದೂರವಿಟ್ಟಿಲ್ಲವಾದರೂ ನಾನಾ ಕಾರಣಗಳಿಂದ, ಸಮಸ್ಯೆಗಳಿಂದ ಅವರು ಹಿಂದೆ ಇದ್ದದ್ದೇ ಹೆಚ್ಚು. ಮೇಳಗಳ ರಾತ್ರಿ–ಹಗಲೆನ್ನದ ತಿರುಗಾಟ, ವೇಷಭೂಷಣ ತೊಡುವುದರಲ್ಲಿ, ವಾಚಿಕಾಭಿನಯದಲ್ಲಿ ಬೇಕಾಗುವ ಗಡಸುತನ, ಗಟ್ಟಿತನ, ಸ್ತ್ರೀಯರ ಮನೋ–ದೈಹಿಕ ವ್ಯತ್ಯಾಸಗಳು.., ಹೀಗೆ ಪುರುಷರು ಅನಿವಾರ್ಯವೆಂಬಂತೆ ಯಕ್ಷಗಾನದ ಭಾಗವೇ ಆಗಿಹೋಗಿದ್ದಾರೆ.

ಆದರೆ ಬದಲಾದ ಕಾಲಘಟ್ಟಕ್ಕೆ ಸ್ತ್ರೀಯರ ಭಾಗವಹಿಸುವಿಕೆ ಹೆಚ್ಚಾಗಿ ಇತ್ತೀಚಿನ ದಶಕಗಳಲ್ಲಿ ಸಮಯ ಮಿತಿಯಲ್ಲಿ ಪ್ರದರ್ಶನ ನೀಡುವ ಹಲವು ತಂಡಗಳು, ಕಲಾವಿದರ ಬಳಗಗಳು ಹುಟ್ಟಿಕೊಂಡಿವೆ. ಶ್ರೀಮತಿ ವಿದ್ಯಾ ಕೋಳ್ಯೂರಿನಂತವರು 'ಯಕ್ಷ ಮಂಜೂಷಾ' ಸಂಘಟಿಸಿ, ಹಿಂದಿ, ಇಂಗ್ಲೀಷ್‌ನಲ್ಲೂ ಪ್ರಸಂಗ ಸಂಯೋಜಿಸಿ, ಯಕ್ಷಗಾನದ ವಿವಿಧ ಸಾಧ್ಯತೆಗಳನ್ನು ಪುರುಷರಿಗೂ ಕಾಣಿಸಿಕೊಟ್ಟು ಯಕ್ಷಗಾನಕ್ಕೆ ಕರ್ನಾಟಕದಲ್ಲಿ ಮಾತ್ರವಲ್ಲದೆ ಇತರ ರಾಜ್ಯ, ರಾಷ್ಟ್ರಗಳಲ್ಲೂ ಪ್ರೇಕ್ಷಕರನ್ನು ಪಡೆದುಕೊಂಡವರು. ಲೀಲಾವತಿ ಬೈಪಡಿತ್ತಾಯ ಅವರಂತೂ ಭಾಗವತಿಕೆಯಲ್ಲಿ ಮೈಲಿಗಲ್ಲೇ ಸರಿ. ಭಾಗವತಿಕೆಗೆ ಏರುದನಿಯ ಕಂಚಿನ ಕಂಠ, ಗಂಭೀರ ಲಾಲಿತ್ಯಗಳು ಕೇವಲ ಪುರುಷರಿಂದಲಷ್ಟೇ ಅಲ್ಲ, ಸ್ತ್ರೀಯರಿಂದಲೂ ಸಾಧ್ಯ ಎಂದು ಸಾಬೀತು ಮಾಡಿ ತೋರಿಸಿದವರು.

ಹೀಗೆ ಯಕ್ಷಗಾನ ಪುರುಷರ ಸ್ವತ್ತಷ್ಟೇ ಅಲ್ಲ ಎಂಬುದನ್ನು ಸಾಧನೆ ಮಾಡಿ ತೋರಿಸಿದ ಹಲವು ಕಲಾವಿದರು ನಮ್ಮ ನಡುವೆ ಇದ್ದಾರೆ. ಪುರುಷರು ಕೂಡಾ ಗೆಜ್ಜೆ ಕಟ್ಟುವುದೇ ಅಪರಾಧ ಎಂಬ ಭಾವನೆ ಬೇರೂರಿದ ಒಂದು ಕಾಲವಿತ್ತು. ಆದರೆ ಇಂದು ಯಾವುದೇ ಕಲೆಯಾದರೂ ಅದರಲ್ಲಿ ಭಾಗವಹಿಸುವುದು ಗುಣವುಟ್ಟದ ಮನಸ್ಸುಗಳಿಗೆ ಉದಾಹರಣೆ ಎಂಬ ಇನ್ನೊಂದು ಶಕೆ ಬಂದಿದೆ. ಕಾಲಚಕ್ರ ನಿರಂತರ ಪರಿಭ್ರಮಣದಲ್ಲಿ ಇರುತ್ತದೆ ಎಂಬುದಕ್ಕೆ ಇದು ಒಳ್ಳೆಯ ಸಾಕ್ಷಿ.



ಮುಮ್ಮೇಳದಲ್ಲಿ, ತಾಳಮದ್ದಳೆಯಲ್ಲಿ ಸ್ತ್ರೀಯರ ಭಾಗವಹಿಸುವಿಕೆ ಗಮನಾರ್ಹವಾಗಿ ಹೆಚ್ಚುತ್ತಿದ್ದರೂ, ಹಿಮ್ಮೇಳದಲ್ಲಿ ಇನ್ನೂ ಸಾಕಷ್ಟು ಬೆಳವಣಿಗೆಗಳು ಆಗಬೇಕಾದದ್ದು ಭವಿಷ್ಯದ ನಿರೀಕ್ಷೆಗಳಲ್ಲೊಂದು. ಇಂತಹ ನಿರೀಕ್ಷೆಯನ್ನು ಪೂರ್ಣ ಮಾಡುವ ನಿಟ್ಟಿನಲ್ಲಿ ಅಲ್ಲೊಂದು ಇಲ್ಲೊಂದು ಪ್ರಯತ್ನಗಳು ಕಂಡು ಬರುತ್ತಿವೆ. ಈ ಸಾಲಿಗೆ ಸೇರುವಂತಹ ಒಂದು ಪ್ರದರ್ಶನ ಇತ್ತೀಚೆಗೆ ಸುಳ್ಯದ ಯಕ್ಷ ಶಿಕ್ಷಣ ಕಾರ್ಯಾಗಾರದ ಕಂಡು ಬಂದಿತು.




ಸುಳ್ಯದ ಶಿಕ್ಷಕರ ಯಕ್ಷಗಾನ ಒಕ್ಕೂಟ ಮತ್ತು ಖಂಡಿಗೆಮೂಲೆ ತಂಡದ ಚಿಣ್ಣರು ಪ್ರದರ್ಶಿಸಿದ ಗಿರಿಜಾ ಕಲ್ಯಾಣ, ತಾರಾಕಾಸುರ ವಧೆ ಪ್ರಸಂಗ 4 ಗಂಟೆಯ ಪ್ರದರ್ಶನ ಎಳೆಯರಲ್ಲಡಗಿದ ಪ್ರತಿಭೆಗೆ, ಅಚ್ಚುಕಟ್ಟು ನಿರೂಪಣೆಗೆ ಕನ್ನಡಿ ಹಿಡಿದಿತ್ತು. ಪುಟ್ಟ ಮಕ್ಕಳಿಗೆ ಪಠ್ಯಕ್ರಮದ ಆಧಾರದಂತೆಯೇ ಯಕ್ಷನೃತ್ಯವನ್ನು ಕಲಿಸಿದವರು ಸಬ್ಬಣ್ಣಕೋಡಿ ರಾಮ್ ಭಟ್ ಮತ್ತು ಸುಧಾಕರ್. ಮಾರ್ಗದರ್ಶನ ನೀಡಿದ್ದವರು ಒಕ್ಕೂಟದ ಹಿರಿಯ ಕಲಾವಿದರು.

ಅವರೆಲ್ಲರ ಪ್ರಯತ್ನ ಮನನೀಯ.

ಚಿಣ್ಣರ ಜೊತೆಗೆ ಗಮನ ಸೆಳೆದವರು ; ಭಾಗವತಿಕೆಯಾದಿಯಾಗಿ ಹಿಮ್ಮೇಳದಲ್ಲಿ ಯಶಸ್ವೀ ಸಹಕಾರವಿತ್ತ ಯುವತಿಯರು. ಅದೂ ಕಾಲೇಜು, ಪ್ರೌಢ ವಿದ್ಯಾಭ್ಯಾಸದಲ್ಲಿ ತೊಡಗಿಕೊಂಡಿರುವ ಈಗಾಗಲೇ ಹವ್ಯಾಸೀ ಹಿಮ್ಮೇಳ ಕಲಾವಿದರಾದಿಯಾಗಿ ಸುಳ್ಯದ ಅಷ್ಟೂ ಹವ್ಯಾಸಿ ಕಲಾವಿದರ ಪ್ರದರ್ಶನಗಳಿಗೆ ಒಳ್ಳೆಯ ಸಾಥ್ ನೀಡುತ್ತಾ ಎಲ್ಲರಿಗೂ ಬೇಕಾಗಿರುವವರು.

ಬಡತನದ ಹಿನ್ನಲೆಯಿಂದಲೇ ಬಂದು ಶ್ರದ್ಧೆಯಿಂದ ಕಲಿತು ಈಗ ಭಾಗವತಿಕೆಯಲ್ಲಿ ಮಿಂಚುತ್ತಿರುವ ಸುಳ್ಯದ ನೆಹರೂ ಪದವಿ ಕಾಲೇಜಿನ ತೃತೀಯ ಬಿ.ಎ ವಿದ್ಯಾರ್ಥಿನಿ ಭವ್ಯಾ ಸಮರ್ಥ ಹಿಮ್ಮೇಳಪಟು. ಬನಾರಿ ಅವರ ಬಳಿ ಭಾಗವತಿಕೆಯ ಪಟ್ಟುಗಳನ್ನು ಕಲಿತ ಭವ್ಯಾ, ಭಾಗವತಿಕೆಯಲ್ಲಿ ಮಹಿಳೆಯರ ಕೊರತೆಯನ್ನು ನೀಗಿಸುವಲ್ಲಿ ಎತ್ತಿದ ಕೈ ಎನಿಸಬಲ್ಲಂಥವರು. ಹಾಗಾಗಿ, ಕಂಚಿನ ಕಂಠದ ಈ ಯುವತಿ ಆಪ್ಯಾಯಮಾನಳೆನಿಸುವುದು ಅತಿಶಯೋಕ್ತಿಯಲ್ಲ. ಮದ್ದಳೆಯಲ್ಲಿ ಕುಮಾರಿ ಚೊಕ್ಕಾಡಿಯ ಪುಷ್ಪಲತಾ ಅವರದ್ದು ಒಳ್ಳೆಯ ಹೊಂದಾಣಿಕೆ. ಇವರೀರ್ವರೂ ಕುಮಾರ ಸುಬ್ರಹ್ಮಣ್ಯ ವಳಕುಂಜ ಅವರ ಪ್ರೋತ್ಸಾಹವನ್ನುಂಡು ಮುನ್ನಡೆಯುತ್ತಿರುವವರು.

ಜೊತೆಗೆ, ಪೀಠಿಕೆಯ ಮಟ್ಟುಗಳೊಂದಿಗೆ ಚೆಂಡೆಯ ಸಮರ್ಥ ನಿರೂಪಣೆ 10ನೇ ತರಗತಿ ಕಲಿಯುತ್ತಿರುವ ಕುಮಾರಿ ದಿವ್ಯಾ ಮರ್ಕಂಜ ಅವಳದ್ದು. ತಂದೆ, ಚೆಂಡೆ ಕಲಾವಿದ ತೋಟ ಚಾವಡಿ ನಾರಾಯಣ ಅವರೇ ಮಗಳ ಗುರು. ಕಳೆದ ವರ್ಷದ ಪ್ರತಿಭಾ ಕಾರಂಜಿಯಲ್ಲಿ ವಾದ್ಯವಾದನದಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತೆ ಈಕೆ. ಇವರೆಲ್ಲರಿಗೂ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹ ನೀಡುತ್ತಿರುವವರು ಪುರುಷರೇ ಎಂಬುದನ್ನು ಎಲ್ಲರೂ ಗಮನಿಸಬೇಕು. ■





ದೀವಟಿಗೆ 2

# ನೃತ್ಯ ರೂಪಕಗಳ ರಂಗ ಸಾಧ್ಯತೆಗಳಿಗೆ ಕನ್ನಡಿ : 'ಅಂಬೆ'

**ಪಾಂ**ಚಾಲಿ, ಉಪನಿಷದುದ್ಯಾನಂ ಎಂಬ ಸಾರ್ಥಕ ರಂಗಪ್ರಯೋಗಗಳ ಹುಟ್ಟಿಗೆ ಕಾರಣರಾದ ಉಡುಪಿಯ ಉದ್ಯಾವರ ಮಾಧವ ಆಚಾರ್ಯ ಅವರ ಮತ್ತೊಂದು ಕಾವ್ಯ ಕನ್ನಿಕೆಗೆ ಜೀವ ಬಂದಿದೆ. ಡಾ| ವಸುಂಧರಾ ದೊರೈಸ್ವಾಮಿ ಯವರಂತಹ ಕಲಾವಿದೆಯ ಅಭಿವ್ಯಕ್ತಿಯಲ್ಲಿ ಅದು ಮತ್ತಷ್ಟು ಮೂರ್ತ ರೂಪ ತಳೆದಿದೆ. ಅದೇ 'ಅಂಬೆ'.

ಮಹಾಭಾರತದ ಆದಿಯಲ್ಲಿ ಕಾಣಸಿಗುವ ಕಥೆಯೊಂದನ್ನು ತುಸು ತಾತ್ವಿಕ ನೋಟದಿಂದ ಪ್ರತಿಭಟನೆಯ ಸ್ತ್ರೀ ಧ್ವನಿಯಾಗಿ ರೂಪಿಸಿರುವ ಶ್ರಮ ಶ್ಲಾಘನೀಯ. ವ್ಯಾಸರ ಮಹಾಭಾರತದಲ್ಲಿ ಸಂದರ್ಭದ ಕೈಯೊಳಗಿನ ಪಾಶಕ್ಕೆ ನಲುಗುವ ಹೆಣ್ಣಾಗಿ ಅಂಬೆ ಚಿತ್ರಿತವಾದರೂ, ಸಮಕಾಲೀನ ವ್ಯವಸ್ಥೆಯನ್ನು ಧ್ವನಿಸುವಂತೆ ಮಾಡಲು ಕಥೆಯನ್ನು ರೂಪಿಸಲಾಗಿದ್ದು, ಸ್ತ್ರೀಯ ಅಂತಃಕರಣದಲ್ಲಿ ಅಡಗಿರುವ ಸುಪ್ತ ಶಕ್ತಿಯನ್ನು, ಸ್ವತಂತ್ರ ಮನೋಭಾವವನ್ನು ಸಮರ್ಥವಾಗಿ ಹಿಡಿದಿಡುವಲ್ಲಿ ಯಶಸ್ವಿಯಾಗಿದೆ ಈ ಏಕವ್ಯಕ್ತಿ ರಂಗಪ್ರಯೋಗ.

ಈಗಾಗಲೇ ಹಲವು ಪ್ರಯೋಗಗಳ ಸಾಧ್ಯತೆಗಳನ್ನು ಬಗಲಿಗಿರಿಸಿಕೊಂಡು ಮುನ್ನಡೆಯುತ್ತಿರುವ ಕಲಾಸಕ್ತರ ಅನೌಪಚಾರಿಕ ಸಂಘಟನೆ 'ಸಮೂಹ'ವು ಇತ್ತೀಚೆಗೆ ಉಡುಪಿಯ ಎಂ.ಜಿ.ಎಂ ಕಾಲೇಜಿನ ರವೀಂದ್ರ ಮಂಟಪದಲ್ಲಿ ಅಂಬೆಯ ದ್ವಿತೀಯ ಪ್ರದರ್ಶನವನ್ನು ಆಯೋಜನೆಗೊಳಿಸಿತ್ತು. ಕಲಾವಿದರನ್ನು ಪುರಸ್ಕರಿಸುವ ಮೂಲಕ ಆರಂಭಗೊಂಡ ಕಾರ್ಯಕ್ರಮವು ಕಲಾಸಕ್ತ ಬಂಧುಗಳನ್ನು ಆಕರ್ಷಿಸುವಲ್ಲಿ ಸಫಲವಾದದ್ದು ಸುಳ್ಳಲ್ಲ.

ಗಂಗಾ ತೀರದ ವನವಿಹಾರ ದಲ್ಲಿರುವಾಗ ಅಂಬೆಗೆ ಸೌಭದೇಶದ ಅರಸ ಸಾಲ್ವ ಆಕರ್ಷಣೆಯ ಕೇಂದ್ರಬಿಂದುವಾಗುತ್ತಾನೆ. ಅವನನ್ನೇ ವರಿಸಬೇಕೆಂಬ ಹಂಬಲ ಅವಳದು. ಆದರೆ ಅಂಬೆಯ ತಂದೆ ಕಾಶೀರಾಜ ಭಯ ಭದ್ರತೆಯ ರಾಜಕೀಯ ಕಾರಣಕ್ಕೆ ಶೌರ್ಯವನ್ನು ಪಣವಾಗಿಸಿ ತನ್ನ ಮೂವರು ಮಕ್ಕಳಾದ ಅಂಬೆ, ಅಂಬಿಕೆ, ಅಂಬಾಲಿಕೆಯರ ಸ್ವಯವರವನ್ನು ನಿರ್ಧರಿಸುತ್ತಾನೆ.

ಆದರೆ ಅಂಬೆಗಾದ ಈ ಆಘಾತ ಮತ್ತಷ್ಟು ತೀವ್ರಗೊಳ್ಳುತ್ತದೆ ಹಸ್ತಿನಾವತಿಯ ಭೀಷ್ಮ ಸ್ವಯಂವರಕ್ಕೆ ಆಗಮಿಸಿ ಎಲ್ಲರನ್ನೂ ಗೆದ್ದಾಗ. ಒಲ್ಲದ ಮನಸ್ಸಿನಿಂದ ರಥವೇರಿದ ಅಂಬೆಗೆ ಹೊಂದಾಣಿಕೆಯ ನಿರ್ಧಾರಕ್ಕೆ ಬರುವುದು ಅನಿವಾರ್ಯವಾಗುತ್ತದೆ. ಹಾಗಾಗಿ ಶೌರ್ಯ ಪಣದಲ್ಲಿ ಗೆದ್ದು ಬಂದ ಭೀಷ್ಮನೇ ತನ್ನನ್ನು ವರಿಸಲಿ ಎಂಬುದು ಅಂಬೆಯ ಬದಲಾದ ನಿರ್ಧಾರ. ಆದರೆ ಭೀಷ್ಮನಿಗೆ ವಿವಾಹ ನಿಷಿದ್ಧ. ತಪ್ಪಿ ತಂದವ ಅವಳ ನಿವೇದನೆಗೆ ಬೆಲೆ ಕೊಡಲಾಗದೇ ಹೋದಾಗ, ಮನಸಾರೆ ಒಪ್ಪಿದ ಸಾಲ್ವನೆಡೆಗೆ ಬಳಿಸಾರುವ ತವಕ. ಆದರೆ ಸಾಲ್ವನಿಂದಲೂ ತಿರಸ್ಕಾರಕ್ಕೊಳಪಟ್ಟು ಅವಮಾನಿತಳಾದ ಅಂಬೆ, ಕೊನೆಗೆ

ಪರಶುರಾಮರನ್ನೇ ಅವರ ವಿರುದ್ಧ ಯುದ್ಧಕ್ಕೆ ಅಣಿಗೊಳಿಸುತ್ತಾಳೆ. ನ್ಯಾಯ ಸಿಗಲಾರದಾಗ, ಕಾಡಿನ ಕಿರಾತ ಶಕ್ತಿಗಳನ್ನು ಹುರಿದುಂಬಿಸುತ್ತಾಳೆ. ಕೊನೆಗೆ ಆತ್ಮಾಹುತಿ ಅನಿವಾರ್ಯವಾಗಿ ಛಲದ ಶಪಥ ಹೊತ್ತು ಅಂತ್ಯವಾಗುತ್ತಾಳೆ.

ಹೀಗೆ ವಿವಾಹ ರಾಜಕೀಯ ನಡೆಸಿದ ಕಾಶೀದೇಶ, ಪ್ರೇಮ ಮಾಯಾಮೃಗದ ಆಕರ್ಷಣೆ ನೀಡಿ ಕೈಬಿಟ್ಟ ಸೌಭದೇಶ, ವಂಶಾಭಿವೃದ್ಧಿಗಾಗಿ ಕ್ಷೇತ್ರಾಪಹರಣಗೈದ ಹಸ್ತಿನಾವತಿ ಎಂಬ ಮೂರು ಶಕ್ತಿಗಳ ಕೈಗೊಂಬೆಯಾಗಿ ನಲುಗುವ ಅಂಬೆಯ ಸ್ತ್ರೀ ಸಂವೇದನೆಯನ್ನು ಮನೋಜ್ಞವಾಗಿ ದುಡಿಸಿಕೊಂಡಿದ್ದಾರೆ ವಸುಂಧರಾ ಮತ್ತು ಅವರ ಬಳಗ.

ಸಖಿ, ಸಹೋದರಿಯರೊಂದೊಗೊಡಗೂಡಿ ಗಂಗಾತೀರದ ವಿಹಾರಕ್ಕೆ ಹೋಗುವ ಚಿತ್ರಣ ಮೊದಲಿನರ್ಧ ಭಾಗವಾಗಿದ್ದು ಪರಿಸರ, ವನ್ಯ ಮೃಗ-ಪಕ್ಷಿಗಳ ಚಿತ್ರಣವನ್ನು ವಸುಂಧರಾ ಅವರ ಅಭಿನಯವು ಚೆನ್ನಾಗಿ ವಸ್ತುವನ್ನು ದುಡಿಸಿಕೊಂಡಿದೆ. ಗಂಗಾ ತೀರದ ವಿಹಾರ ಮತ್ತು ಸ್ವಯಂವರದ ಆಯೋಜನೆಯ ನಂತರವಷ್ಟೇ ಸಾಲ್ವನ ಪಾತ್ರವನ್ನು ಕೈಗೆತ್ತಿಕೊಳ್ಳ ಲಾಗಿದ್ದು, ಇದು ಪ್ರಯೋಗವನ್ನು ಎರಡು ಭಾಗಗಳಾಗಿ ಶ್ರೇಣೀಕರಿಸಿದಂತೆನಿಸುತ್ತದೆ. ಹಾಗಾಗಿ ಪ್ರಯೋಗದ ಬಹು ಸಮಯವನ್ನು ಪ್ರಕೃತಿ ವರ್ಣನೆಯ ಭಾಗ ಕಬಳಿಸುತ್ತದೆ ಎಂಬ ಭಾಸ ಉಂಟಾಗುವುದು ಸಹಜ. ಇದರಿಂದ ಪ್ರಕೃತಿ ಚಿತ್ರಣದಲ್ಲಿ ನಿಧಾನಗೊಳ್ಳುವ ಪ್ರಯೋಗ ಕಥಾ ವಿಸ್ತರಣೆಯಲ್ಲಿ ತೀವ್ರಗತಿಯನ್ನು ಕಾಣುತ್ತದೆ. ಹಾಗಾಗಿ ಮೊದಲರ್ಧ ಭಾಗದ ಪರಿಸರ ಮತ್ತು ಸ್ವಯಂವರದ ಭವ್ಯತೆಗೆ ಹೋಲಿಸಿದಾಗ ಅಂಬೆಗೆ ಸಾಲ್ವ, ಸ್ವಯಂವರ ಮತ್ತು ಭೀಷ್ಮನ ಕುರಿತಾದ ಮನೋಧರ್ಮ, ಭೀಷ್ಮನ ಭಾವಾನುಭಾವ-ಅಂತಃಕರಣವನ್ನು ಪರಿಭವಿಸುವಲ್ಲಿ ಕೊಂಚ ಹಿಂದೆ ಬೀಳುತ್ತದೆ.

ಈ ತೀವ್ರ ಗತಿಯ ಮುನ್ನಡೆಯ ಪರಿಣಾಮವೋ ಎಂಬಂತೆ ಪರಶುರಾಮ, ಕಿರಾತ ಶಕ್ತಿಗಳನ್ನು ಯುದ್ಧಕ್ಕೆ ಅಣಿಗೊಳಿಸುವ ಸಂದರ್ಭ ಮತ್ತು ಅದರ ಫಲಶ್ರುತಿಯನ್ನು ಹೇಳುವ ಸಂದರ್ಭದಲ್ಲೂ ಪ್ರಯೋಗ ಒಂದಷ್ಟು ಬಳಲುತ್ತದೆ. ಈ ಎರಡೂ







ಪಾತ್ರಪೋಷಣೆಯನ್ನು ಒಂದಷ್ಟು ಗಮನಾರ್ಹವಾಗಿ ರೂಪಿಸಿದಿದ್ದರೆ, ಪಾತ್ರಗಳ ಅಭಿವ್ಯಕ್ತಿ, ನಿರ್ಗಮನ ಮತ್ತಷ್ಟು ಸ್ಪಷ್ಟ ಮತ್ತು ಮಹತ್ವದ್ದಾಗಿರುತ್ತಿತ್ತು. ಪಾತ್ರ ಪೋಷಣೆಯಲ್ಲಿ ಸಾಲ್ವನಷ್ಟೇ ಪ್ರಮುಖವಾಗಿದ್ದರೂ ವಿವಾಹ ಬೇಡವೆನ್ನುವ, ಪರಶುರಾಮರನ್ನು ಸಂಧಾನಕ್ಕೆಳೆಸುವ ಭೀಷ್ಮನ ಪಾತ್ರ ಇದೇ ಸೊರಗಿದ ಅನುಭವವನ್ನು ಕೊಡುತ್ತದೆ.

ಅಷ್ಟೇ ಅಲ್ಲದೆ, ಅಂತಿಮ ಘಟ್ಟದಲ್ಲೂ ಆತ್ಮಾಹುತಿ ನಿರ್ಧಾರ ತೆಗೆದುಕೊಳ್ಳುವ ಛಲ ಹೊತ್ತ ಅಂಬೆಯ ಪಾತ್ರ ಒಮ್ಮಿಂದೊಮ್ಮೆಗೇ ಬಿರುಸಾಗಿ ಕೊನೆಗೆ ಇಳಿದಂತೆನಿಸಿ ಕೊಂಚ ಬಳಲಿದಂತೆ ಕಂಡು ಬರುತ್ತದೆ. ಅದರಲ್ಲೂ ಪರಶುರಾಮ ಮತ್ತು ಕಿರಾತರನ್ನು ಯುದ್ಧಕ್ಕೆ ಹುರಿದಂಬಿಸುವ ಸಂದರ್ಭದಲ್ಲಿ ಪಥ ಸಂಚಲನದ ಮಾದರಿಯ ಹಿನ್ನಲೆ ಸಂಗೀತ, ಅಂಬೆಗೆ ನ್ಯಾಯ ಸಿಗದೇ ಹೋದಾಗ ಮತ್ತೆ ಭೀಷ್ಮನನ್ನು ಪರಿಪರಿಯಾಗಿ ಬೇಡಿಕೊಳ್ಳುವುದು ಮತ್ತು ಉತ್ತರಾರ್ಧ ಭಾಗದ ಒಂದು ತೀವ್ರಗತಿಯ ಜತಿ ನಿರೂಪಣೆಯಲ್ಲಿ ತಪ್ಪಿದ ತೀರ್ಮಾನ ಸರಣಿ, ಪಾದಘಾತಗಳಲ್ಲಿ ಅಲ್ಲಲ್ಲಿ ಕಂಡುಬಂದ ಸ್ಪಷ್ಟತೆಯ ಅಭಾವ ನೋಡುಗರಲ್ಲಿ ಇರಿಸುಮುರಿಸಿಗೆ ಕಾರಣವಾದದ್ದಿದೆ.

ಆದರೆ ವಸುಂಧರಾ ಅವರ ಅಭಿನಯ ಉತ್ಕೃಷ್ಟ ಮಟ್ಟದಲ್ಲಿದ್ದು ರಂಗ ಪ್ರಯೋಗದ ಕೊರತೆಗಳನ್ನು ಮರೆಮಾಚಿ ಪ್ರೇಕ್ಷಕರನ್ನು ನೋಡುವಂತೆ ಮಾಡುತ್ತದೆ ; ಮಾತ್ರವಲ್ಲ, ಕಾವ್ಯ ರಸಾನುಭೂತಿಗೇ ಹೆಚ್ಚು ಹತ್ತಿರವಾಗುವ ಸಾಧ್ಯತೆಗಳಿರುವ ರಚನೆಯನ್ನು ನೃತ್ಯ ರಸಾನುಭೂತಿ ಪಡೆದುಕೊಳ್ಳುವಂತೆ ಮಾಡಿಕೊಟ್ಟಿರುವುದು ವಸುಂಧರಾ ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ.

ರಂಗ ಪ್ರಯೋಗವನ್ನು ಸಹ್ಯ ಮಾಡುವಲ್ಲಿ ಹಾಡುಗಾರಿಕೆಯಷ್ಟೇ ಅಲ್ಲದೆ ಉದ್ಯಾವರ ಮಾಧವ ಆಚಾರ್ಯರ ಸಮಯೋಚಿತ ವಾಚಿಕ ನಿರೂಪಣೆಯು ಅಂಬೆಯ ಭಾವಾಭಿವ್ಯಕ್ತಿಗೆ ಪೂರಕವಾಗಿ ಸ್ಪಂದಿಸಿದೆ. ಆದರೆ ಶೃಂಗಾರ, ಶಾಂತ, ಕರುಣ, ಬೇಸರ, ಅದ್ಭುತ ಮುಂತಾದ ರಸ ಪ್ರತಿಪಾದನೆಯಲ್ಲಿ ನಿರೂಪಣೆಯು ರಸಕ್ಕೆ ತಕ್ಕಂತೆ ಆರ್ಭಟವಿಲ್ಲದೆ ಒಂದಷ್ಟು ಹೊಂದಿಕೊಂಡಿದ್ದರೆ, ಇನ್ನಷ್ಟು ಸಮರ್ಥವಾಗಿ ಪ್ರೇಕ್ಷಕರನ್ನು ರೂಪಕದ ಒಳಗೆ ತೊಡಗಿಸಿಕೊಳ್ಳುವಂತೆ ಮಾಡಬಲ್ಲುದು. ರೂಪಕಕ್ಕೆ ಅಳವಡಿಸಿಕೊಳ್ಳಲಾದ ಜತಿಗಳು ಉತ್ಕೃಷ್ಟ ಮಟ್ಟದಲ್ಲಿದ್ದರೂ ; ವಸುಂಧರಾ ಅವರ ಮಟ್ಟಕ್ಕೆ ಜತಿಗಳು ಇನ್ನಷ್ಟು ಸವಾಲೆನಿಸುವ ಕೋರ್ವೆ, ಅಡವುಗಳ ಸಂಯೋಜನೆಯನ್ನು ಪಡೆದುಕೊಂಡಿದ್ದರೆ ಆಹ್ಲಾದಕರವಾಗಿರುತ್ತಿತ್ತು.

ವಿದುಷಿ ಪಿ. ರಮಾ, ಬೆಂಗಳೂರು ಅವರ ಸಂಗೀತ ಸಂಯೋಜನೆ ಮತ್ತು ಹಾಡುಗಾರಿಕೆ ಇಡೀ ರಂಗಪ್ರಯೋಗದ ಒಟ್ಟಾರೆ ಯಶಸ್ಸಿಗೆ ಕಾರಣ. ಮೈಸೂರಿನ ಸಂದೇಶ ಭಾರ್ಗವ ಅವರ ಸಮರ್ಥ ನಟುವಾಂಗ ಕಾರ್ಯಕ್ರಮದ ಹೈಲೈಟ್ ! ಇನ್ನುಳಿದಂತೆ ನಾರಾಯಣ್ ಮೈಸೂರು ಅವರ ವಯೋಲಿನ್ ವಾದನ, ಜಯಪ್ರಕಾಶ್ ಕಣ್ಣೂರು ಅವರ ಇನಿದನಿಯ ಕೊಳಲು, ಪಾಠಾಕ್ಷರಗಳಲ್ಲಿ ಅಚ್ಚುಕಟ್ಟುತನ ಹೊಂದಿದ ಪಯ್ಯನೂರು ಸುಶಿಲ್ ಕುಮಾರ್ ಅವರ ಮೃದಂಗ, ಮಂಜುನಾಥ್ ಬೆಂಗಳೂರು ಇವರ ರಿದಂಪ್ಯಾಡ್ ರಂಗ ಪ್ರಸ್ತುತಿಗೆ ಪೂರಕವಾಗಿ ಧ್ವನಿಸಿತ್ತು.

# ದೀವಟಿಗೆ 3

# ಯಕ್ಷಗಾನ ಶಿಕ್ಷಣ ಮತ್ತು ಶಿಕ್ಷಣದಲ್ಲಿ ಯಕ್ಷಗಾನ

**ನೂ**ತನವಾಗಿ ರಚನೆಗೊಂಡಿರುವ ಕರ್ನಾಟಕ ಯಕ್ಷಗಾನ ಅಕಾಡೆಮಿ ಇದೀಗ ತನ್ನ ಕಾರ್ಯ ಚಟುವಟಿಕೆಗಳನ್ನು ಆರಂಭಿಸುತ್ತಿದೆ. ಅಕಾಡೆಮಿಯ ವತಿಯಿಂದ ಮೊದಲ ಕಾರ್ಯಕ್ರಮವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಕೆ.ವಿ.ಜಿ.ಪುರಭವನದಲ್ಲಿ ಶಿಕ್ಷಕರ ಯಕ್ಷಗಾನ ಒಕ್ಕೂಟದ ಸಹಭಾಗಿತ್ವ ದಲ್ಲಿ ಎರಡು ದಿನಗಳ ಯಕ್ಷ ನಡಿಗೆ ಚಾಲನೆ ಮತ್ತು ಯಕ್ಷಶಿಕ್ಷಣ ಕಾರ್ಯಾಗಾರ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಜನವರಿ 31 ಮತ್ತು ಫೆಬ್ರವರಿ 01ರಂದು ಜರುಗಿದ ಅದ್ದೂರಿ ಕಾರ್ಯಕ್ರಮದ ಮುಖ್ಯವಸ್ತುವೇ ರಾಜ್ಯದ ಆಯ್ದ ಸುಮಾರು 60 ಯಕ್ಷಶಿಕ್ಷಣ ತಜ್ಞರಿಂದ 'ಶಿಕ್ಷಣದಲ್ಲಿ ಯಕ್ಷಗಾನ ಮತ್ತು ಯಕ್ಷಗಾನ ಶಿಕ್ಷಣ' ಎಂಬ ಎರಡು ವಿಷಯಗಳಲ್ಲಿ ಚಿಂತನ–ಮಂಥನ.

ಪತ್ರಿಕೆಯ ಪುಟಗಳಿಗೋ, ಫಂಡ್ ಚೆಲ್ಲಾಟಕ್ಕೋ,ವೇದಿಕೆಯ ಭಾಷಣಗಳಿಗೋ–ರಗಳೆ–ಹಿತಾಸಕ್ತಿಗಷ್ಟೇ ಉಳಿದುಹೋಗಬಹುದಾಗಿದ್ದ ಕಾರ್ಯಕ್ರಮವನ್ನು ಬೆಂಗಳೂರಿನಿಂದ ದೂರವಾಗಿ, ಸಿಟಿಯ ಗದ್ದಲದಿಂದ ಹೊರಗುಳಿದು ಯಕ್ಷಗಾನದ ತವರೂರಾದ ಕನ್ನಡ ಜಿಲ್ಲೆಗಳಿಗೆ ಮಹತ್ವ ನೀಡುವಂತೆ ಅಚ್ಚುಕಟ್ಟಾಗಿ ಸಂಘಟನೆ ಮಾಡಿದ್ದು ಪ್ರಶಂಸನೀಯ. ಅದರಲ್ಲೂ ಇಂತಹ ಒಂದು ವಿಷಯಧಾರಿತವಾದ ಕಾರ್ಯಕ್ರಮ ನಡೆಸಿದ್ದು ಬಹು ಪ್ರಸ್ತುತವೆನಿಸಿದ್ದು, ಈಗಾಗಲೇ ಹಲವು ಕಲಾವಿದ–ಪ್ರೇಕ್ಷಕ–ವಿದ್ವಾಂಸರ ಬಾಯಲ್ಲಿ ಚರ್ಚೆಯ ವಿಷಯಕ್ಕೆ ಒಂದು ರೂಪ ಕೊಡುವಲ್ಲಿ ಕೆಲಸ ಮಾಡಿದ್ದೂ ಕೂಡ ಒಳ್ಳೆಯ ವಿಷಯ. ಈ ಪ್ರಯತ್ನದಲ್ಲಿ ಶಿಕ್ಷಕರ ಯಕ್ಷಗಾನ ಒಕ್ಕೂಟದ್ದು ಪ್ರಧಾನ ಪಾತ್ರ. ಅದರಲ್ಲೂ ಕಲಾವಿದ ಪ್ರಕಾಶ್ ಮೂಡಿತ್ತಾಯ ಅವರದ್ದು ಒಳ್ಳೆಯ ಹೋಂ ವರ್ಕ್ ಮಾಡಿಕೊಂಡು ಬಂದ ಸಂಯೋಜನೆ ಮತ್ತು ನಿರೂಪಣೆ.

ಯಕ್ಷಗಾನ ಹೊಸ ಪೀಳಿಗೆಗೆ ಇನ್ನೂ ಆಕರ್ಷಣೀಯವಾಗಲು ಶಿಕ್ಷಣದಂತಹ ಪರಿಣಾಮಕಾರಿ ಮಾಧ್ಯಮದ ಅಗತ್ಯವಿದೆ ಎನ್ನುವ ಕಾರಣಕ್ಕೆ ಅನುಷ್ಠಾನ ಯೋಗ್ಯವಾದ ಯೋಜನೆಗಳ ಕರಡು ಪ್ರತಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಯಿತು. ಹಾಗೆ ನೋಡಿದರೆ, ಮುಂದಿನ ಪೀಳಿಗೆಗೆ ಯಕ್ಷಗಾನದ ಅರಿವನ್ನು ಕೊಡುವಲ್ಲಿ ಉಡುಪಿಯಲ್ಲಿ ಈಗಾಗಲೇ ಯಶಸ್ವಿಯಾಗುತ್ತಿರುವ, ಶಾಲಾ–ಕಾಲೇಜು ಗಳಲ್ಲಿ ಕಡ್ಡಾಯ ಯಕ್ಷಗಾನ ಕಲಿಕೆ ಕಾರ್ಯಕ್ರಮ, ಸರ್ಕಾರದ ವತಿಯಿಂದ ನಡೆಯುತ್ತಿರುವ ಒಳ್ಳೆಯ ಬೆಳವಣಿಗೆ.

ಶಿಕ್ಷಣ ಕ್ರಮದ ವಿನೂತನ ಕಾರ್ಯ ಕ್ರಮಗಳಾದ ಪ್ರತಿಭಾ ಕಾರಂಜಿ, ಚಿಣ್ಣರ ಮೇಳ, ಚೈತ್ರದ ಚಿಗುರು, ಜೀವನ ವಿಜ್ಞಾನ, ಕ್ರಿಯೇಟಿವ್ ಕಾರ್ನರ್, ಚಿಣ್ಣರ ಅಂಗಳ, ಚೈತ್ರದ ಚಿಗುರು, ಚಿಣ್ಣರ ಕರ್ನಾಟಕ ದರ್ಶನ ದಲ್ಲಿ ವ್ಯವಸ್ಥಿತವಾಗಿ ಅಳವಡಿಸಿಕೊಳ್ಳಲು ಬೇಕಾದ ಅಗತ್ಯ ಕಾರ್ಯಕ್ರಮ, ಯೋಜನೆಗಳನ್ನು ನಿರ್ದೇಶಿಸುವುದರ ಕುರಿತಾಗಿ ಚರ್ಚೆಗಳಿದ್ದವು. ಮಗುವಿನ ಕಲಿಕೆ ಮತ್ತು ಸರ್ವಾಂಗೀಣ ಬೆಳವಣಿಗೆಗಾಗಿ ಯಕ್ಷಗಾನವನ್ನು ಎಷ್ಟರಮಟ್ಟಿಗೆ ಬಳಸಿಕೊಳ್ಳಬಹುದು? ಯಾವಾಗ? ಎಲ್ಲಿ? ಹೇಗೆ? ಎಂಬುದರ ಕುರಿತಾಗಿ ಚಿಂತನೆಗಳು ನಡೆದವು. ಈ ಸಂಬಂಧ ತರಬೇತಿಗಳು, ಯಕ್ಷಗಾನ ತಂಡಗಳು, ಪ್ರದರ್ಶನ ಚಟುವಟಿಕೆ, ತಾಳಮದ್ದಳೆ–ಬಯಲಾಟಗಳನ್ನು ಸಂಯೋಜಿಸುವುದು,





ಆಧುನಿಕ ತಂತ್ರಜ್ಞಾನಗಳ ಮೂಲಕ ಯಕ್ಷಗಾನ ಪಠ್ಯಬೋಧನೆ ಮತ್ತು ಅವುಗಳ ಸಮಯ, ವ್ಯವಸ್ಥೆ ಮುಂತಾದವುಗಳ ಕುರಿತಂತೆ ಚರ್ಚೆಗಳು ನಡೆದವು.

ಆಗಮಿಸಿದ 60 ಯಕ್ಷ ಶಿಕ್ಷಣ ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು 5 ತಂಡಗಳನ್ನಾಗಿ ವಿಭಜಿಸಿ ಪ್ರತಿಯೊಂದು ತಂಡವೂ ಕೆಳಕಂಡ ವಿಷಯಗಳ ಕುರಿತಂತೆ ವಿಷಯ ನಿಷ್ಕರ್ಷಿಸಿ, ಪರಸ್ಪರ ಸಂವಾದಗಳ ಮೂಲಕ ಅನುಮಾನಗಳನ್ನು ಬಗೆಹರಿಸಿಕೊಂಡು ಸಮಗ್ರ ಪದ್ಧತಿಯತ್ತ ಮುನ್ನಡೆಯಲು ಕ್ರಮಗಳ ನಕ್ಷೆಯನ್ನು ತಯಾರಿಸಿತ್ತು. ಅದೂ ಕೇವಲ ಎರಡು ದಿನಗಳ ಅತ್ಯಲ್ಪ ಸಮಯದಲ್ಲೇ ಯಕ್ಷಗಾನದ ಸಮಗ್ರ, ಸಂಕ್ಷಿಪ್ತ ನೋಟ ಲಭ್ಯವಾದದ್ದು ಪ್ರಸಂಸನೀಯ.

* ಯಕ್ಷಗಾನದ ಚರಿತ್ರೆ–ಸ್ವರೂಪ
* ಯಕ್ಷಗಾನ ಬೋಧನೆ–ಕಲಿಕೆ
* ಪ್ರಸಂಗ–ವೇಷಭೂಷಣ
* ಮೌಲ್ಯಮಾಪನ
* ಶಿಕ್ಷಣದಲ್ಲಿ ಯಕ್ಷಗಾನ

ಇವೇ ಆ ಐದು ತಂಡಗಳಾಗಿದ್ದು ತೆಂಕುತಿಟ್ಟು, ಬಡಗು ತಿಟ್ಟು, ಬಡಾಬಡಗು, ಪಾರಿಜಾತ, ದೊಡ್ಡಾಟ, ಸಣ್ಣಾಟ, ರಾಧನಾಟ ಮುಂತಾಗಿ ಯಕ್ಷಗಾನದ ವಿವಿಧ ಬಗೆಯ, ಮಜಲುಗಳ ನುರಿತ ವಿದ್ವಾಂಸರು, ಯಕ್ಷ ದಿಗ್ಗಜರು, ಲೇಖಕರು, ವಿವಿಧ ಕ್ಷೇತ್ರಗಳ ತಜ್ಞರು, ಕಲಾವಿದರು, ಪ್ರಾಥಮಿಕ–ಪ್ರೌಢ ಶಿಕ್ಷಕರು ಮುಂತಾಗಿ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಕಾರ್ಯಾಗಾರವನ್ನು ಅರ್ಥಪೂರ್ಣವಾಗಿಸಿದರು. ಮಾತ್ರವಲ್ಲದೆ, ಯಕ್ಷಗಾನವನ್ನು ಕಾಡುತ್ತಿರುವ ಹತ್ತು ಹಲವು ಸಮಸ್ಯೆಗಳ, ಭಿನ್ನಾಭಿಪ್ರಾಯಗಳ, ವಿವಾದಗಳ ಸಂಕ್ಷಿಪ್ತ ಅವಲೋಕನ ಮತ್ತು ಸಮಸ್ಯೆಗಳ ಪರಿಹಾರದತ್ತ ಸಮಗ್ರ ನೋಟವೂ ಕಂಡುಬಂದಿತ್ತು. ಇನ್ನೇನಿದ್ದರೂ ಮಂಡನೆಯಾದ, ಮನ್ನಣೆ ಪಡೆದ ವಿಷಯಗಳು ಕಾರ್ಯರೂಪಕ್ಕೆ ಬರುವುದಷ್ಟೇ ಬಾಕಿ !

**(ಈ ಕುರಿತಂತೆ ಓದುಗರ ಅಭಿಪ್ರಾಯ, ಚರ್ಚೆಗಳಿಗೆ ಅವಕಾಶವಿದ್ದು ಮತ್ತಷ್ಟು ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಕಾಣೋಣ)**



# ದೀವಟಿಗೆ 4

## ಅಲರಿಪುವಿನ ಹೊಸ ಸಾಧ್ಯತೆ

● ವಿಷ್ಣುಪ್ರಸಾದ್ ನಿಡ್ದಾಜೆ

ಭರತನಾಟ್ಯ ಪ್ರದರ್ಶನಗಳಲ್ಲಿ ಸಾಮಾನ್ಯವಾಗಿ ಪ್ರೇಕ್ಷಕರು ಇಷ್ಟಪಡುವುದು ಅಭಿನಯ, ಭಾವ ಪೂರಿತ ನೃತ್ಯಭಾಗಗಳನ್ನೇ! ಏಕೆಂದರೆ ಅದನ್ನು ಅರ್ಥ ಮಾಡಿಕೊಳ್ಳಲು, ಅನುಭವಿಸಲು ಸುಲಭ. ಅದೇ ನೃತ್ತ ಭಾಗಗಳಾದರೆ ಅದರ ತಾಳ, ಜತಿ, ಬಹಳಷ್ಟು ಸಲ ಕಲಾವಿದರಿಂದಾಗುವ ಲೋಪ, ಪೇಲವ ಅಡವು ಸಂಯೋಜನೆ, ಅಚ್ಚುಕಟ್ಟುತನ ಇಲ್ಲದಿರುವಿಕೆ ಸಭಿಕರನ್ನು ಆಕರ್ಷಿಸುವಲ್ಲಿ ವಿಫಲವಾಗುವುದು ಸತ್ಯ. ಹಾಗಾಗಿ ನೃತ್ತ ಒಂದು ಸವಾಲು. ಆದರೆ ನೃತ್ತ ಆಕರ್ಷಕ ವಲ್ಲ ಎಂಬ ಭಾವ ಬೆಳೆಯುವಲ್ಲಿ ಕಲಾವಿದರ ಪಾತ್ರವೂ ದೊಡ್ಡದಿದೆ.

'ಪ್ರೇಕ್ಷಕರು ಇಷ್ಟಪಡುತ್ತಿಲ್ಲ' ಎಂಬ ಕಾರಣವೊಡ್ಡಿ ಇತ್ತೀಚೆಗಿನ ರಂಗ ಪ್ರದರ್ಶನಗಳಲ್ಲಿ ಪ್ರಾರಂಭಿಕ ಸಂಯೋಜನೆಗಳಾದ ಅಲರಿಪು, ಜತಿಸ್ವರ ಮುಂತಾದ ನೃತ್ತ ಭಾಗಗಳನ್ನು ಪ್ರದರ್ಶಿಸುವ ಗೋಜಿಗೇ ಯಾರೂ ಹೋಗುತ್ತಿಲ್ಲ. ಹಾಗಾಗಿ ಬರಬರುತ್ತಾ ಇಂತಹ ನೃತ್ತ ಪ್ರಕಾರಗಳು ಕಲಿಯುವಿಕೆಗೆ ಮತ್ತು ಪರೀಕ್ಷಾ ದೃಷ್ಟಿಯಿಂದ ಮಾತ್ರ ಗಮನಾರ್ಹವೆನಿಸಿ; ಪ್ರದರ್ಶನ, ರಂಗಪ್ರವೇಶಗಳ ಸಂದರ್ಭದಲ್ಲಿ ಸಾಕಷ್ಟು ಹಿನ್ನಡೆ ಕಂಡುಕೊಂಡಿದೆ. ಒಟ್ಟಿನಲ್ಲಿ ತಮ್ಮ ಇಷ್ಟಾನಿಷ್ಟಕ್ಕೆ, ಅಸಮರ್ಥತೆಗೆ ಪ್ರೇಕ್ಷಕರನ್ನು ಗುರಿಮಾಡಿ ಪಲಾಯನ ಮಾಡುತ್ತಿರುವ ಗುರು–ಕಲಾವಿದರ ಸಂಖ್ಯೆ ಬಹಳ ಎನಿಸುತ್ತದೆ.



ಈ ಹಿನ್ನಲೆಯಲ್ಲಿ ಯೋಚಿಸುವಾಗ ಓರ್ವರು ಮಾತ್ರ ಪ್ರದರ್ಶಿಸಬಹುದಾದ ಅಲರಿಪುವನ್ನು ಸಮೂಹವಾಗಿ ಕಲಾವಿದರು ಪ್ರಸ್ತುತಪಡುವಂತೆ ಮಾಡುವುದು ಒಂದಷ್ಟು ಸ್ವೀಕಾರಾರ್ಹ ಸಂಗತಿ. ಇದು ಪ್ರೇಕ್ಷಕರು ಕುಳಿತು ಆಸಕ್ತಿಯಿಂದ ನೋಡಲು ಸಹಕಾರಿ ಕೂಡಾ.

ಇತ್ತೀಚೆಗೆ ಮಂಗಳೂರಿನ ಕರಾವಳಿ ಉತ್ಸವದ ಅಂಗವಾಗಿ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮಗಳ ಪೈಕಿ ಬೆಂಗಳೂರಿನ ರಸಿಕ ಅಕಾಡೆಮಿಯ ಕಿರಣ್ ಸುಬ್ರಹ್ಮಣ್ಯಂ ಮತ್ತು ಸಂಧ್ಯಾ ಕಿರಣ್ ಬಳಗದವರು ಪ್ರಸ್ತುತಪಡಿಸಿದ ಅಲರಿಪು ಚೇತೋಹಾರಿಯಾಗಿತ್ತು. ಅಲರಿಪುವನ್ನು ಸಮೂಹದಲ್ಲಿ ಪ್ರಸ್ತುತಪಡಿಸುವ ಟ್ರೆಂಡ್ ಬಹಳ ಹಿಂದಿನಿಂದ ಇದ್ದರೂ, ಹೆಚ್ಚಿನ ಬದಲಾವಣೆಗಳಿಲ್ಲದೆ ಕೇವಲ ಕಲಾವಿದರ ಸ್ಥಾನಗಳನ್ನು ಅದಲು ಬದಲು ಮಾಡಿ ನರ್ತಿಸುವ ಚಾಲ್ತಿಯಿದೆ.

ಆದರೆ 'ರಸಿಕ' ಬಳಗ ಅಲರಿಪುವಿನ ಚತುರಶ್ರ ಜಾತಿಗೆ ಲೋಪವಾಗದಂತೆ ವಿಭಿನ್ನ ನೆಲೆ, ಗತಿಗಳನ್ನು ಅಳವಡಿಸಿಕೊಂಡು ಲಯಕ್ಕೆ ಲೋಪವಾಗದಂತೆ ನರ್ತಿಸಿದ್ದು ಆಕರ್ಷಣೀಯವೆನಿಸಿತು. ಕ್ಲಿಷ್ಟಕರವೆನಿಸಿದರೂ ಸವಾಲೆನಿಸುವ ಇಂತಹ ಪ್ರಸ್ತುತಿಗಳು ಪ್ರೇಕ್ಷಕರನ್ನು ನೃತ್ತಭಾಗಕ್ಕೆ ಹೆಚ್ಚು ಹಿಡಿದಿಟ್ಟು ನೋಡುವಂತೆ ಮಾಡಬಲ್ಲುದು. ಹಳತಿನ ಭಾವಕ್ಕೆ ತೊಂದರೆಯಾಗದೆ ಆಯಾಯ ಕಾಲದ ಅಗತ್ಯಗಳನ್ನು ಕಂಡುಕೊಂಡು ಹೊಸ ಸ್ಪರ್ಶ ನೀಡುವ ಸಂಗತಿಗಳ ಸಾಂಗತ್ಯ ಹೆಚ್ಚಬೇಕಿದೆ. ■





# ದರ್ಶನ ಭ್ರಮರಿ

## ಮಂಟಪ ಪ್ರಭಾಕರ ಉಪಾಧ್ಯಾಯ

ಮಂಟಪ ಪ್ರಭಾಕರ ಉಪಾಧ್ಯಾಯ; ಯಾರಿಗೆ ತಾನೇ ಗೊತ್ತಿಲ್ಲ ? ಪ್ರಬುದ್ಧ ಭಾವಾನುಭಾವ, ಸರಳ ನಡೆನುಡಿ, ಸಂಪದ್ಭರಿತ ಪ್ರತಿಭೆ, ಸೃಜನಶೀಲ ಚಿಂತನೆಗಳ ಸಂಕಲನ ಅವರು. ಯಕ್ಷಗಾನ ಸ್ತ್ರೀ ವೇಷದಲ್ಲಿ ತಮ್ಮದೇ ಆದ ಛಾಪು ಒತ್ತಿ ಕರ್ನಾಟಕದಲ್ಲಿ ಮಾತ್ರವಲ್ಲದೆ ಹೊರರಾಜ್ಯ, ಹೊರ ದೇಷಗಳಲ್ಲಿ ಖ್ಯಾತರಾದ, ಏಕವ್ಯಕ್ತಿ ಯಕ್ಷಗಾನದ ದಿಗ್ಗಜ. ಮಧ್ಯ ವಯಸ್ಸು ಕಳೆದಿದೆ ; ನಿಜ, ಆದರೆ ವೇಷ ಹಾಕಿ ರಂಗಕ್ಕೆ ಬಂದು ನಂತರೆ ನವಯುವತಿಯರನ್ನೂ ನಾಚಿಸುವಂಥ ದುಡಿಮೆ.

ಯಕ್ಷಗಾನಕ್ಕೆ ಅನನ್ಯ ಸೇವೆ ಸಲ್ಲಿಸುವುದರೊಂದಿಗೆ, ಹೊಸ ಹುಟ್ಟು, ಹೊಸ ಪ್ರಯೋಗಗಳಿಗೆ ಕಾರಣಕರ್ತರಾದ ಮಂಟಪರು ರಸಿಕರ ಕಣ್ಮಣಿಯಾಗಿ, ಯಕ್ಷಗಾನ ಸ್ತ್ರೀ ವೇಷದ ಆಳ–ಅಗಲ–ವ್ಯಾಪ್ತಿ ವಿಸ್ತಾರವನ್ನು ಮತ್ತಷ್ಟು ಹಿರಿದುಗೊಳಿಸಿದವರು. ರಸಾನುಭೂತಿಗೆ ತಮ್ಮನ್ನು ತಾವು ಹೊಸ ಹೊಸ ರೀತಿಗಳಲ್ಲಿ ದುಡಿಸಿಕೊಳ್ಳುತ್ತಾ, ಸ್ತ್ರೀ ವೇಷದ ವಯಸ್ಸನ್ನೂ ಮೀರಿ ಬೆಳೆಯುತ್ತಲಿದ್ದಾರೆ. ಸ್ವತಃ ಗಂಡಸರೂ ಮಾರು ಹೋಗಿ ಆಕರ್ಷಿತರಾಗುವ ಮಟ್ಟಿಗೆ ಪರಿಣಾಮ ಬೀರುವ ಅವರ ಗಾಢವಾದ ಅಭಿನಯ ಅವರಲ್ಲಡಗಿದ ಕಲೆಗೆ ಸಾಕ್ಷಿ.

ಮೂರನೇ ವರ್ಷದ ಈ ಸಂಭ್ರಮಕ್ಕೆ ನಮ್ಮ ನೂಪುರ ಅವರ ನೂಪುರಗಳ ದನಿಯನ್ನು ದರ್ಶನ–ಸಂದರ್ಶನ ಗಳಲ್ಲಿ ಕಂಡುಕೊಂಡು, ಇದೀಗ ಅವರ ಹೆಜ್ಜೆ–ಗೆಜ್ಜೆಗಳ ಘಲುಕನ್ನು ಕೇಳಿಸುವ ಉತ್ಸಾಹದಲ್ಲಿದೆ. ಇದೋ ಅವರೀಗ ನಮ್ಮ ದರ್ಶನ ಭ್ರಮರಿಯಲ್ಲಿ.



**ಏಕವ್ಯಕ್ತಿ ಯಕ್ಷಗಾನದ ಪರಿಕಲ್ಪನೆ ಹುಟ್ಟಿದ್ದಾದರೂ ಹೇಗೆ ?**

ಅದೊಂದು ಆಕಸ್ಮಿಕ ಭೇಟಿ ನನ್ನದು ಮತ್ತು ಶತಾವಧಾನಿ ಡಾ । ಆರ್. ಗಣೇಶ್ ಅವರದ್ದು. ಪ್ರಶ್ನೆ ನನ್ನದು. ಉತ್ತರ, ಪರಿಕಲ್ಪನೆ ಅವರದ್ದು.

'ವಯಸ್ಸಾದ ಮೇಲೆ ಸ್ತ್ರೀ ವೇಷ ಮಾಡುವುದು ಅಷ್ಟೊಂದಾಗಿ ಯಾರಿಗೂ ರುಚಿಸುವುದಿಲ್ಲ. ಮಧ್ಯ ವಯಸ್ಸು ಕಳೆದ ಮೇಲೆ ನೋಡಲೂ ಕಷ್ಟ. ಆ ಮಾತಲ್ಲಿ ನನಗೆ ಅಷ್ಟು ವಿಶ್ವಾಸವಿಲ್ಲದಿದ್ದರೂ, ಸತ್ಯದ ವಿಚಾರವದು. ಆದ್ದರಿಂದ ಐವತ್ತು ವರ್ಷದ ನಂತರವೂ ವೇಷ ಮಾಡಬೇಕು ಅಂದ್ರೆ ಹೇಗೆ' ಎಂಬ ಪ್ರಶ್ನೆ ನನ್ನದು. ಅಲ್ಲಿಯವರೆವಿಗೂ ಒಂದು ವ್ಯಕ್ತಿಯನ್ನು ಯಕ್ಷಗಾನದಲ್ಲಿ ನಿಲ್ಲಿಸಿಕೊಳ್ಳಲಿಕ್ಕೆ ಆಗುತ್ತದೆ ಎಂಬ ವಿಶ್ವಾಸ ಇರಲಿಲ್ಲ.

'ತುಡಿತ ಮುಖ್ಯ. ಶಕ್ತಿ ಇದ್ದರೆ ವಯಸ್ಸಾದ್ರೂ ಮಾಡಬಹುದು. ಆದರೆ ಒಂದಷ್ಟು ಮಜಲುಗಳನ್ನು ಏರಬೇಕಾಗುತ್ತದೆ. ಚಿತ್ರ–ನೃತ್ತ–ನೃತ್ಯ– ನಾಟ್ಯ–ಅಭಿನಯ–ಭಾವ–ರಸ. ನೀವು ರಸದ ಮಟ್ಟಕ್ಕೆ ಹೋಗಿ ! ಆಗ ಅಸಾಧ್ಯವಾಗುವುದಿಲ್ಲ. ಆ ಮಟ್ಟಕ್ಕೆ ಏರಿದರೆ ಯಾವ ವಯಸ್ಸಿನಲ್ಲೂ ವೇಷ ಮಾಡಬಹುದು. ರಸಕ್ಕೆ ಏರಿದಾಗ ವ್ಯಕ್ತಿ ಗೌಣವಾಗುತ್ತಾನೆ. ಕಲಾವಿದನಿಗೆ ರಸ ಉತ್ಪನ್ನ ಮಾಡುವ ಶಕ್ತಿ ಇದ್ದರೆ ಆತ ಪಾತ್ರವೇ ಆಗಿಬಿಡುತ್ತಾನೆ. ಅವನೇ ಆ ಪಾತ್ರ ಆದ ಮೇಲೆ ತರ್ಕ ಇಲ್ಲವಲ್ಲ' ಎಂದಿದ್ದರು!

ಆಗ ಬಂದದ್ದೇ 'ಭಾಮಿನಿ' !

ಹೀಗಾಗಿ ಎಪ್ಪತ್ತು ವರ್ಷ ವಯಸ್ಸಾದ ನಂತರವೂ ಭಾಮಿನಿ ಮಾಡಿದರೆ ಅದನ್ನು ರಸದೃಷ್ಟಿಯಿಂದ ಅನುಭವಿಸುವವರಿಗೆ ವಯಸ್ಸು ಕಾಣೋದಿಲ್ಲ. ಎಲ್ಲರನ್ನೂ ಏಕಕಾಲಕ್ಕೇ ಮುಟ್ಟುತ್ತೀವಿ ಅಂತಲ್ಲ. ಆದರೆ ಆ ಮಟ್ಟಕ್ಕೆ ಏರಿದಾಗ ಅದೂ ಸಾಧ್ಯ. ಮೊದಲು ಒಂದಷ್ಟು ಗೊಂದಲಗಳಿತ್ತು. ನಂತರ ಧೈರ್ಯ ಬಂದಿದೆ.

**"ಕಲೆ ಎನ್ನುವುದು ಶುದ್ಧ ಆಧ್ಯಾತ್ಮ. ಆಧ್ಯಾತ್ಮಕ್ಕೆ ಹಿಮಾಲಯಕ್ಕೇ ಹೋಗಬೇಕು ಎಂದೇನಿಲ್ಲ. ಇದು ಮಾತಿಗಾಗಿ ಹೇಳುವುದೂ ಅಲ್ಲ. ಆಧ್ಯಾತ್ಮದ ಸ್ಪರ್ಶ ಕಲೆಯಲ್ಲಿ ಇದ್ದಾಗ ಒಂದಷ್ಟು ಸಮಯ ನಾವು ನಾವಾಗಿ ಇರುವುದಿಲ್ಲ. ಅದರೊಳಗೊಂದಾಗಿ ಸೇರಿಹೋಗುತ್ತೇವೆ"**







**ಭಾಮಿನಿಯ ವೈಶಿಷ್ಟ್ಯ ಏನು ? ಅದು ನಿಮ್ಮನ್ನು ಆವರಿಸಿಕೊಂಡಿದ್ದು ಹೇಗೆ ?**

ಭಾಮಿನಿ ಅಷ್ಟನಾಯಕಿಯರ ಚಿತ್ತವೃತ್ತಿ. ಸ್ವಲ್ಪ ಕಷ್ಟವೇ ಹೌದು. ಅದೊಂಥರಾ ಸ್ತ್ರೀ ವೇಷಕ್ಕೆ ವ್ಯಾಕರಣ ಇದ್ದ ಹಾಗೆ ! ಅದನ್ನು ಮಾಡಿದ ನಂತರ ಯಾವುದನ್ನೂ ಮಾಡಬಹುದು ಎಂಬ ವಿಶ್ವಾಸ ಬಂದಿದೆ. ಶೃಂಗಾರ ಮತು ಅದರ ವಿವಿಧ ಅನುಭವಗಳ ಮೇಲೆ ಹೆಣೆದ ಕೃತಿ ಅದು. ಶೃಂಗಾರ ಅಂದರೇನೇ ಪ್ರೇಮ. ಅದು ತೊಂಭತ್ತು ವರ್ಷದ ಮುದುಕ–ಮುದುಕಿಯರಿಗೂ ಇರುತ್ತದೆ. ಭಾವಕ್ಕೆ ವಯಸ್ಸಿನ ಅಂತರವಿಲ್ಲವಲ್ಲ. ಹಾಗಾಗಿ ಭಾಮಿನಿಯಲ್ಲಿ ದೇಹದ ವರ್ಣನೆಯಿಲ್ಲ. ಮನಸ್ಸಿನ ಒಳಗಿನ ಮನೋಧರ್ಮವಿರುತ್ತದೆ. ಆದ್ದರಿಂದ ಇವತ್ತಿಗೂ ಭಾಮಿನಿಯೇ ಪ್ರಿಯ. ಉಳಿದೆಲ್ಲ ಪ್ರಸಂಗಗಳೂ ಜಾನಕೀ ಜೀವನ, ಕೃಷ್ಣಾರ್ಪಣ, ವೇಣು ವಿಸರ್ಜನ, ಪ್ರಣಯ (ವಂ)ಚಿತ, ಯಕ್ಷದರ್ಪಣ, ಶೂರ್ಪನಖಾ, ಪೂತನಿ, ದಾಸದೀಪಾಂಜಲಿ, ಯಕ್ಷನವೋದಯ, ಮಣಿಪುರದ ಮಾನಿನಿ, ಯಕ್ಷ ಕದಂಬ, ಯುಗಳ ವ್ಯಕ್ತಿ ಮುಂತಾದವು ಪಾತ್ರಗಳನ್ನು ಆಧರಿಸಿದ್ದಷ್ಟೇ !

**ಏಕವ್ಯಕ್ತಿ ಯಕ್ಷಗಾನದ ಮೇಲೆ ಸಾಕಷ್ಟು ಆರೋಪಗಳಿವೆ. ಭರತನಾಟ್ಯದ ಅಂಶಗಳೇ ಜಾಸ್ತಿ ಎಂಬುದು ಒಂದು ವಾದವಾದರೆ ಯಕ್ಷಗಾನದ ಅಂಶಗಳಿಗೆ ಒಳಪಡುವುದೇ ಇಲ್ಲವೆನ್ನುವುದು ಇನ್ನೊಂದು.. ಇದರ ಬಗ್ಗೆ ಏನು ಹೇಳುತ್ತೀರಿ ?**

ಏಕವ್ಯಕ್ತಿ ಯಕ್ಷಗಾನ ಪ್ರಯೋಗಕ್ಕೆ ಪ್ರಭಾವ ಯಾವುದೇ ನೃತ್ಯ ಪ್ರಕಾರಗಳದ್ದಲ್ಲ. ಅದೇನಿದ್ದರೂ ನಾಟ್ಯಶಾಸ್ತ್ರದ್ದೇ. ಸಾಧಾರಣವಾಗಿ ಒಂದು ಮನೋಭಾವ ಇದೆ; ನಾಟ್ಯಶಾಸ್ತ್ರವಿರುವುದೇ ಭರತನಾಟ್ಯಕ್ಕೆ ಅಂತ ! ಗುರು–ಕಲಾವಿದರನ್ನೂ ಕಾಡುತ್ತಿರುವ ಸೀಮಿತ ಮನೋಧರ್ಮವದು. ಹಾಗೆ ನೋಡಿದರೆ ಇಂದಿನ ಭರತನಾಟ್ಯವೇ ನಾಟ್ಯದ ಅಂಶಗಳನ್ನು ಬಿಟ್ಟು ದೂರ ಸಾಗುತ್ತಲಿದೆ.

ಭರತನಾಟ್ಯ ಪ್ರದರ್ಶನ ಎಂಬುದು ಏಕವ್ಯಕ್ತಿಯೇ ಹೌದು. ಆದರೆ ಪ್ರಸಂಗವನ್ನು ಅಭಿನಯಿಸುವಾಗ ಕಲಾವಿದರು ಬೇರೆ ಬೇರೆ ಪಾತ್ರಗಳನ್ನು ಒಬ್ಬರೇ ಅಭಿನಯಿಸುತ್ತಾರೆ. ಆದರೆ ಏಕವ್ಯಕ್ತಿ ಯಕ್ಷಗಾನದಲ್ಲಿ ಹಾಗಲ್ಲ. ಒಂದೇ ವ್ಯಕ್ತಿ, ಒಂದೇ ಪಾತ್ರ.. ಆದರೆ, ಪ್ರಸಂಗದಲ್ಲಿ ಬರುವ ಉಳಿದೆಲ್ಲಾ ಪಾತ್ರಗಳನ್ನು ಆ ಪಾತ್ರವೇ ಅನುಭವಿಸುತ್ತದೆ.

ಉದಾ : ಶೂರ್ಪನಖಾ ಪ್ರಸಂಗ ಮಾಡಹೊರಟರೆ ಅಲ್ಲಿ ಬರುವ ಸೀತೆ, ರಾಮ, ಲಕ್ಷ್ಮಣನ ಪಾತ್ರವನ್ನು ಶೂರ್ಪನಖಾ ನೋಡಿ, ಅವರ ಎತ್ತರ, ನಡೆ–ನುಡಿ–ಭಾವ–ಭಂಗಿಗಳನ್ನು ತನ್ನ ಭಾವದಿಂದಲೇ ಪ್ರಕಟಿಸಿ ಅವರ ಇರವನ್ನು ಸ್ಪಷ್ಟವಾಗಿ ಕಾಣಿಸಿಕೊಡುತ್ತಾಳೆ. ಪಾತ್ರಕ್ಕೆ ಇನ್ನೊಂದು ಪಾತ್ರದ ಪ್ರತಿಕ್ರಿಯೆ, ವರ್ಣನೆಯಿಂದಲೇ ತನ್ನಿಂತಾನೇಉಳಿದೆಲ್ಲಾ ಪಾತ್ರಗಳು ಸೃಷ್ಟಿಯಾಗುತ್ತವೆ. ಏಕವ್ಯಕ್ತಿ ಯಕ್ಷಗಾನದ ಹಿನ್ನಲೆ ಎಲ್ಲವೂ ಯಕ್ಷಗಾನದ್ದೇ. ಆದರೆ ಏಕವ್ಯಕ್ತಿ ಪ್ರದರ್ಶನ ಅಂತ ಅಷ್ಟೇ ! ಒಂದಷ್ಟು ಬದಲಾವಣೆಗಳನ್ನು ಮಾಡಿಕೊಂಡಿದ್ದೇವೆ. ಅದು ಆ ಮನೋಧರ್ಮಕ್ಕೆ ಅಗತ್ಯವೂ ಕೂಡಾ.

ಅಷ್ಟಕ್ಕೂ ಯಾವುದು ಯಕ್ಷಗಾನ, ಯಾವುದು ಯಕ್ಷಗಾನ ಅಲ್ಲ ಅಂತ ಹೇಳ್ತೀರಿ? ಸುಮ್ಮನೆ ಕೂತು, ನಿಂತು ಮಾತಾಡುವುದೇ ಯಕ್ಷಗಾನ ಅಂದರೆ ಹೇಗೆ? ವಾಚಿಕ ಕಡಿಮೆಯಿದೆ ಎಂಬ

ಆರೋಪವೇ ? ಮಾತು ಬೇಕು ಅನ್ನುವುದೇ ಭ್ರಮೆ. ಅಷ್ಟಕ್ಕೂ ಹಿನ್ನಲೆ ಪದವೂ ವಾಚಿಕವೇ ತಾನೇ ? ಎಷ್ಟೋ ಬಾರಿ ವಾಚಿಕಾಭಿನಯವೂ ರಸಭಂಗ ಮಾಡುವುದಿದೆ ಎಂದು ಪ್ರೇಕ್ಷಕರೇ ಒಪ್ಪಿಕೊಂಡು ಕಡಿಮೆ ಮಾಡಲು ಸಲಹೆ ಕೊಟ್ಟದಿದೆ. ಹಾಗಂತ ಮಾತು ಬೇಡ ಅಂತ ನನ್ನ ಅಭಿಪ್ರಾಯವಲ್ಲ.

***ಏಕವ್ಯಕ್ತಿ ಯಕ್ಷಗಾನದ ನಿರೂಪಣೆಯಲ್ಲಿ ನೀವು ಕಂಡುಕೊಂಡ ಅಂಶಗಳೇನು ?***

ಏಕವ್ಯಕ್ತಿಗೆ ನಾಟ್ಯವೇ ಮುಖ್ಯ. ಯಾಕೆಂದರೆ ನನಗೆ ಪ್ರಧಾನವೆನಿಸುವುದು ನಾಟ್ಯವೇ ಹೊರತು ಶೈಲಿ ಅಲ್ಲ. 'ಸಂಪ್ರದಾಯದಿಂದ ಹೊರಗುಳಿದ ಪ್ರಕಾರ' ಎಂದು ಆರೋಪಿಸುವವರ ಪಾಲಿಗೆ ನಾನು ಇಂಥದ್ದೇ ಶೈಲಿ ಅಥವಾ ಸಂಪ್ರದಾಯವನ್ನು ಪಾಲಿಸದೇ ಇದ್ದದ್ದು ದೊಡ್ಡದಾಗಿ ಕಾಣಬಹುದು. ಅಷ್ಟಕ್ಕೂ ಯಥಾವತ್ತಾಗಿ ಮಾಡಲಿಕ್ಕೆ ನಾನೇ ಬೇಕೂಂತ ಏನೂ ಇಲ್ಲವಲ್ಲ. ನನಗಿಂತ ಚೆನ್ನಾಗಿ ಮಾಡುವವರು ಇದ್ದಾರೆ.

ನಾಟ್ಯ ಅನ್ನುವುದೇ ಶೈಲಿಗಳಿಗಿಂತ ಮೀರಿದ್ದು. ಪವಿತ್ರವಾದದ್ದು, ಪರಿಪೂರ್ಣವಾದದ್ದು. ಅದರ ಮುಂದೆ ಯಾವುದೇ ಇದ್ದರೂ ಎಲ್ಲವೂ ಅದರಲ್ಲಿದೆ. ಮತ್ತು ಕಾಲದಿಂದ ಕಾಲಕ್ಕೆ ಅದರಲ್ಲೇ ಏನೇನೋ ಆಗುತ್ತಲೇ ಇದೆ.

ಯಕ್ಷಗಾನದ ಸ್ತ್ರೀ ವೇಷದ ಬೆಳವಣಿಗೆಯ ದೃಷ್ಟಿಯಿಂದ ಬೆಳೆದದು ಏಕವ್ಯಕ್ತಿ. ಮೊದಮೊದಲಿಗೆ ಇನ್ನೊಂದು ವೇಷ ಜೊತೆಗಿಲ್ಲ ಎಂಬ ಕೊರಗಿತ್ತು. ಆದರೆ ಈಗಿಲ್ಲ. ಮತ್ತು ಎಲ್ಲರೂ ಒಪ್ಪಿಕೊಳ್ಳಲಿ ಅಂತ ಮಾಡಿದ್ದೂ ಅಲ್ಲ. ಪೂರ್ವಾಗ್ರಹವಿಲ್ಲದಿರುವವರು, ಶುದ್ಧ ರಸಿಕನಾದವನು ಒಪ್ಪುತ್ತಾನೆ.

ಆದರೂ ಪೂರ್ವಾಗ್ರಹ ಎನ್ನಲಿಕ್ಕೂ ಆಗುವುದಿಲ್ಲ. ಅದು ಅವರವರ ಜ್ಞಾನ-ಅಜ್ಞಾನದ ವಿಷಯ. ಅದೂ ತಪ್ಪಲ್ಲ. ಆದರೆ ಕಲೆಯ ದೃಷ್ಟಿಯಿಂದ ನೋಡುವವರಿಗೆ ಏಕವ್ಯಕ್ತಿ ಒಂದು ಕೊರತೆಯೇ ಆಗುವುದಿಲ್ಲ.

**"ಬಣ್ಣ ಹಚ್ಚಲು ಪ್ರಾರಂಭಿಸಿದ್ದು ತಮ್ಮ 26-27ನೇ ವರ್ಷ ಪ್ರಾಯದಲ್ಲಿ.. ಉಡುಪಿಯ ಬನ್ನಂಜೆಯವರ ಮಾರ್ಗದರ್ಶನದಲ್ಲಿ ಕಲಿತದ್ದು.. ಅದಾದ ನಂತರ 3-4 ವರ್ಷ ಮೇಳದಲ್ಲಿದ್ದೆ. ಆಗೆಲ್ಲ ನಮಗಿದ್ದ ಮನರಂಜನೆಯ ಮಾಧ್ಯಮ ಯಕ್ಷಗಾನವೊಂದೇ ! ಯಕ್ಷಗಾನದ ಪದ ಕೇಳಿಕೊಂಡು ದಿಕ್ಕು ಹಿಡಿದು ಹೋಗಿ ಕೂತು ನೋಡುವ ಜಾಯಮಾನ ಆಗಿನದು.. ಒಮ್ಮೊಮ್ಮೆ ದಿಕ್ಕು ತಪ್ಪಿ ಇಡೀ ರಾತ್ರಿ ಓಡಾಡಿದ ಸಂದರ್ಭಗಳೂ ಇವೆ. ಹೀಗೆ ಆ ಆಸಕ್ತಿಯೇ ನನ್ನನು ಈ ಕ್ಷೇತ್ರಕ್ಕೆ ಎಳೆದು ತಂದದ್ದು.. ಅದು ನಮ್ಮಯ ಮಣ್ಣಿನ ಗುಣವೂ ಕೂಡಾ ! ಈಗ ಆ ಬಗೆಯ ಮನೋಭಾವ ಎಲ್ಲಿದೆ?"**







ಏಕವ್ಯಕ್ತಿಯಲ್ಲಿ ಪದಾಭಿನಯಕ್ಕಿಂತಲೂ ವಾಕ್ಯಾರ್ಥಾಭಿನಯಕ್ಕೇ ಪ್ರಾಮುಖ್ಯತೆ ಜಾಸ್ತಿ. ವಾಕ್ಯಾರ್ಥಾಭಿನಯ ಹೇಳಿಕೊಟ್ಟು ಬರುವುದಲ್ಲ. 'ಒಬ್ಬ ಹೋದ' ಎಂಬುದನ್ನು ಸನ್ನೆ ಮಾಡಿ ಒಂದು ಬಾರಿಗೆ ತೋರಿಸಬಹುದು. ಆದರೆ ಪರಿಣಾಮ ಏನಾಗುತ್ತದೆ ? ಹಾಗಾಗಿ ಆತ ಹೋದ ರೀತಿ, ನಂತರ ಏನಾಯಿತು, ಆದ ಪರಿಣಾಮ, ಅದಕ್ಕಿಂತಲೂ ಮುಂಚಿಗೆ ಇದ್ದ ಸ್ಥಿತಿ ಎಲ್ಲವನ್ನೂ ತೋರಿಸಿದಾಗಲಷ್ಟೇ ಆ ವಾಕ್ಯಕ್ಕೂ ಮಹತ್ವ ಬರುತ್ತದೆ.

***ಏಕವ್ಯಕ್ತಿ ಯಕ್ಷಗಾನವೆಂಬ ಪ್ರಕಾರಕ್ಕೆ ಆಯುಷ್ಯವಿಲ್ಲ ಎನ್ನುತ್ತಾರಲ್ಲಾ..? ನಿಮ್ಮ ಉತ್ತರ.?***

ಏಕವ್ಯಕ್ತಿಗೆ ಆಯುಷ್ಯವಿಲ್ಲ ಎನ್ನುವವರಿಗೆ ಹೇಳುವುದಿದೆ; ಅವರಿಗಾದರೂ ಆಯುಷ್ಯವಿದೆಯೇ ? ನಾವೀಗ ಕಾಣುತ್ತಿರುವ ಯಕ್ಷಗಾನ, ನೃತ್ಯಗಳು 25 ವರ್ಷಗಳ ಹಿಂದೆ ಈಗಿರುವಂತೆ ಇರಲಿಲ್ಲ ಎಂದಾದ ಮೇಲೆ ಏಕವ್ಯಕ್ತಿಯೂ ಇರಬೇಕು ಎನ್ನುವುದು ಎಷ್ಟು ಸರಿ?

ಹಿಂದಿನವರು ಮಾತ್ರ ಬುದ್ಧಿವಂತರು, ಮುಂದಿನವರು ಪ್ರಯೋಜನ ಇಲ್ಲ ಅನ್ನೋದೆಲ್ಲಾ ಸುಳ್ಳು. ಹಾಗೆ ಯಾರಾದರೂ ಹೇಳಿದರೆ ಅವರಿಗೆ ವಯಸ್ಸಾಗಿದೆ ಅನ್ನಬಹುದಷ್ಟೇ ! ಪೀಳಿಗೆಯಿಂದ ಪೀಳಿಗೆಗೆ ಎಲ್ಲರೂ ಕಲೀಯುತ್ತಲೇ ಇರ್ತಾರೆ. ಅಷ್ಟಕ್ಕೂ ಇದೇ ಮಾಧ್ಯಮ ಮುಂದುವರೀಬೇಕು ಅಂತ ಏನಿದೆ? ನಿಮಗಿದು ಚೆಂದ ಅಂತ ಕಂಡ ಕಾರಣ ಹಾಗೆ ಹೇಳಬಲ್ಲಿರಿ. ಒಂದಲ್ಲ ಒಂದು ದೃಷ್ಟಿಯಲ್ಲಿ ಕಲೆ ಉಳಿದೇ ಉಳಿಯುತ್ತದೆ. ಶೈಲಿ ಬದಲಾವಣೆ ಆಗಬಹುದು. ಆದರೆ ಮನಸಿನ ರುಚಿ ಹಾಗೇ ಇರುತ್ತದೆ. ಅನುಭವಗಳನ್ನು ತೆಗೆದುಕೊಂಡ ದರ್ಶಕ ಮತ್ತೊಂದು ಅನುಭವಗಳನ್ನು ಕೊಡುತ್ತಾನೆ. ಹಾಗಾಗಿ ಬೆಳೀತಿರುವ ಒಬ್ಬ ಹುಡುಗ ಅಥವಾ ಹುಡುಗಿ ನಾಟ್ಯದ ಪಟ್ಟುಗಳನ್ನು ಶ್ರದ್ಧೆಯಿಂದ ಕಲಿತು ಅನುಭವಿಸಿದರೆ ನನಗಿಂತಲೂ ಚೆನ್ನಾಗಿ ಮಾಡಬಹುದು.

ಲೋಕದ ಸಂಗತಿಯೇ ಹಾಗೆ ! ಮಾಡಲಿಕ್ಕಾಗದೇ ಇರೋದೆಲ್ಲಾ ಇಲ್ಲವೇ ಇಲ್ಲ ಅಂತ ಹೇಳುವುದು. ಅದು ಸುಲಭ ಕೂಡಾ. ಆದರೆ ಆ ಆರೋಪ ಆಧಾರವಿಲ್ಲದ ಸಂಗತಿ.

**"ಕೆಲವರಿಗೆ ತೆಂಕು ತಿಟ್ಟೇ ಪ್ರಿಯವಾದದ್ದು. ಕೆಲವರಿಗೆ ಬಡಗು. ಅದು ಅವರವರ ಮನೋಧರ್ಮ. ಅದು ತಪ್ಪಲ್ಲ. ಹಾಗೆ ನೋಡಿದರೆ ತೆಂಕು ತಿಟ್ಟಿಗೂ, ಬಡಗುತಿಟ್ಟಿಗೂ ಕುಣಿಯಬಲ್ಲೆ. ಈ ವರೆಗೆ 760 ಪ್ರದರ್ಶನ ನೀಡಿದ್ದೇವೆ. ಹೊಸ ಕಲ್ಪನೆಗಳು ಬರಬಹುದು"**



***ನಿಮ್ಮ ಪ್ರಯೋಗಗಳಿಗೆ ಸಂಬಂಧಿಸಿದಂತೆ ನಿಮ್ಮನ್ನು ಬಹುವಾಗಿ ತಟ್ಟಿದ ಅಂಶ ಯಾವುದು?***

ನಡುಮನೆ ಪ್ರಯೋಗ ನಂಗಿಷ್ಟ. ಸರಳವಾದ ಕ್ರಮವೂ ಕೂಡಾ. ಮನೆಯವರೇ ಇರ್ತಾರೆ. ಒತ್ತಾಯಕ್ಕೆ ಕೂತುಕೊಳ್ಳೋದಿಲ್ಲ. ಹೆಚ್ಚಿನ ವ್ಯವಸ್ಥೆ ಬೇಕಿಲ್ಲ. ಖರ್ಚೂ ಹೆಚ್ಚಿಲ್ಲ. ಸಮಯಕ್ಕೆ ಸರಿಯಾಗಿ ಪ್ರಾರಂಭ ಮಾಡ್ತೀವಿ. ಮೊಬೈಲ್, ಕಾಲಿಂಗ್ ಬೆಲ್ ಎಲ್ಲವನ್ನೂ ಆಫ್ ಮಾಡಿಸ್ತೀವಿ. ಒಮ್ಮೊಮ್ಮೆ ಪಕ್ಕದ ಮನೆಯವರಿಗೂ ಗೊತ್ತಾಗಿರುವುದಿಲ್ಲ. ಅದು ಅಷ್ಟಾಗಿ ಪ್ರಚಾರಕ್ಕೆ ಬರೋಲ್ಲ. ಯಾಕೆಂದರೆ ಪೇಪರ್‌ನಲ್ಲಿ ಬರೋದಿಲ್ಲ.

ನಡುಮನೆಯಿಂದ ಎಷ್ಟೋ ಜನರ ಹೃದಯ ಗೆದ್ದು ಬರಲಿಕ್ಕಾಗಿದೆ. ಅವರಿಗೂ ಕಲೆಯ ಬಗೆಗೆ, ಕಲಾವಿದನ ಬಗೆಗೆ ಗೌರವ ಬರುತ್ತದೆ. ಇವರ್ಯಾರೋ ಕೈಗೆಟುಕದವರು ಅಂತ ಅಂದುಕೊಳ್ಳೋದಿಲ್ಲ. ಬದಲಾಗಿ ನಮ್ಮವರೇ, ಹತ್ತಿರದವರು ಅನ್ನುವ ಭಾವ ಅವರಲ್ಲೂ. ಕಲೆಯೊಂದು ಮಾಡಬೇಕಾದ್ದು ಇದೇ ಅಲ್ಲವೇ !

ಒಂದು ನಡುಮನೆ ಪ್ರದರ್ಶನದಲ್ಲಿ ಹೀಗಾಯಿತು ; 'ಯಶೋದೆ ಕೃಷ್ಣನನ್ನು ಆಡಿಸಿಕೊಂಡು ಬಂದು ಒಂದು ಕೋಣೆಯೊಳಗೆ ಕೂಡಿ ಅಗಳಿ ಹಾಕಿ ಹೋಗುವುದನ್ನು ಅಭಿನಯಿಸಿದೆ. ಕಾರ್ಯಕ್ರಮ ಮುಗಿದು 4–5 ದಿನಗಳ ತರುವಾಯ ಬಂದ ಮನೆಯವರು ಅಳುತ್ತಲೇ ಹೇಳಿದ್ದೇನು ಗೊತ್ತೇ? 'ನೀವು ಬಾಗಿಲು ಹಾಕಿ ಬಂದ ನಂತರ ಆ ಕೋಣೆಯನ್ನು ನಾವು ತೆರೆದೇ ಇಲ್ಲ. ಕೃಷ್ಣ ಓಡಿ ಹೋದಾನು'!

ಅದೊಂಥರಾ ಭ್ರಮೆಯಿದ್ದಿರಬಹುದು. ಆದರೆ ಪ್ರಸಂಗವನ್ನು ಅನುಭವಿಸುವಾಗ ಅವರು ಅವರಾಗಿಯೇ ಇರಲಿಲ್ಲ ಎಂಬುದಂತೂ ಸ್ಪಷ್ಟ. ಆ ಅನುಭವ ಭ್ರಮೆಯಂತೂ ಅಲ್ಲ.

**"ಯಕ್ಷಗಾನಕ್ಕೆ ಸ್ಥಿತ್ಯಂತರಗಳನ್ನು ಮಾಡಿಸಿಕೊಳ್ಳುವ ಶಕ್ತಿ ಇದೆ. ಆದರೆ ಅದನ್ನು ಕಲಾವಿದರಾದಿಯಾಗಿ ಒಪ್ಪಿಕೊಳ್ಳಲು ಯಾರೂ ತಯಾರಿಲ್ಲದವರಂತೆ ಅಸಡ್ಡೆ ಮಾಡುತ್ತಾರೆ. ಒಂದು ವೇಳೆ ವಿದ್ಯಾರ್ಥಿಗಳಾದಿಯಾಗಿ ಯುವಕರೆಲ್ಲರೂ ಯಕ್ಷಗಾನ ಕಲಿತರೆ ಜಗತ್ತಿನಲ್ಲೇ ನಂ. 1 ಕಲೆಯಾಗಿ ಬೆಳೆಯಬಲ್ಲ ಶಕ್ತಿ ಯಕ್ಷಗಾನಕ್ಕಿದೆ. ಹಾಗಂತ ಹಳೆಯದೇ ಇಟ್ಟುಕೊಂಡು ಕೂತರೂ ಪ್ರಯೋಜನ ಇಲ್ಲ. ಹೊಸತನ್ನು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಬೇಕು."**







***ಈ ಯಶಸ್ಸು ವೇದಿಕೆಗಳಲ್ಲಿ ಸಾಧ್ಯವಾಗುವ ಬಗೆ ?***

ದೊಡ್ಡ ವೇದಿಕೆ ಅಂದಾಕ್ಷಣ ಅದ್ಭುತಗಳು ಬೇಕಾಗುತ್ತದೆ. ವ್ಯವಸ್ಥೆ, ಸಮಸ್ಯೆಗಳನ್ನು ಎದುರಿಸಿ ನಿಲುವ ಸಂದರ್ಭಗಳನ್ನು ಸೃಷ್ಟಿ ಮಾಡಬೇಕಾಗುತ್ತದೆ. ಮೈಕ್, ಲೈಟ್ ಎಲ್ಲ ಬೇಕು. ಅಷ್ಟಕ್ಕೂ ಮೆಗಾ ಪ್ರೋಗ್ರಾಮ್‌ಗಳ ಮೂಲಕ ಏಕವ್ಯಕ್ತಿ ಪ್ರಯೋಗ ಮಾಡಹೊರಟರೆ ಅದರ ಪರಿಣಾಮ ಅಷ್ಟಾಗಿ ಇರಲಿಕ್ಕಿಲ್ಲ. ನನಗಾದರೂ ಭಾವಾನುಭವ ಆದೀತು; ಅದರೆ ಪ್ರೇಕ್ಷಕರಿಗೆ ಆಗುತ್ತೆ ಅನ್ನುವುದು ಅನುಮಾನ. ಮೆಗಾ ಪ್ರೋಗ್ರಾಮ್‌ಗಳಿಗೆ ಅದರದ್ದೇ ಆದ ಸೌಂದರ್ಯವಿದೆ. ದೊಡ್ಡ ದೊಡ್ಡ ವೇದಿಕೆಗಳಿಗೆ ಅಂತಹ ವೇದಿಕೆ, ವ್ಯವಸ್ಥೆ, ಅಬ್ಬರ ಅಗತ್ಯ. ಆದರೆ ದೊಡ್ಡ ವೇದಿಕೆಗಳಿಗೆ ಏಕವ್ಯಕ್ತಿ ಮಾಡಹೊರಟರೆ?

***ಆದರೆ ಪ್ರೇಕ್ಷಕರ ಸಂಖ್ಯೆ ವಿರಳವಾದ್ದಾಗ ಕಲಾವಿದ ಹುರಿದುಂಬಿತನಾಗದೆ, ಪ್ರೋತ್ಸಾಹ ಸಿಗದೇ ಪೇಲವವೆನಿಸಿಕೊಳ್ಳುತ್ತಾನೆ ಎನ್ನುವ ಭಾವನೆಯಿದೆಯಲ್ಲಾ..! ಅದಕ್ಕೇನನ್ನುತ್ತೀರಿ?***

ಜನ ಮುಖ್ಯವಲ್ಲ. ನೋಡುವ ಹೃದಯ ಮುಖ್ಯ. ಒಬ್ಬನೇ ಕೂತರೂ ನಾನು ಮಾಡಬಲ್ಲೆ. ಆಸ್ವಾದಿಸಲು ಒಂದು ಹೃದಯ ಇದ್ದರಾಯಿತು. ಧ್ಯಾನ ಮತ್ತಷ್ಟು ಹತ್ತಿರವಾಗುತ್ತದೆ.

ಒಂದು ವೇಳೆ ಯಾವುದೋ ಕಾರ್ಯಕ್ರಮಕ್ಕೆ ಜನ ಬರಲಿಲ್ಲ ಅಂದರೆ, ಆ ಕಾರ್ಯಕ್ರಮ, ಪ್ರದರ್ಶನ ನೋಡೋದಕ್ಕೆ ಜನರಿಗೆ ಒಪ್ಪಿಗೆ ಇಲ್ಲ ಅಂತ ಅರ್ಥ. ಜಾಸ್ತಿ ಜನ ಬರಬೇಕೆನ್ನುವ ಆಲೋಚನೆಯೇ ತಪ್ಪು. ಜನಕ್ಕೋಸ್ಕರ ಮಾಡ್ತೀರಿ ಅಂತಾದರೂ ಜನರು ಅದಕ್ಕೆ ಕಚ್ಚಿಕೊಂಡು ನೋಡುವ ಶಕ್ತಿಯನ್ನು ನೀವು ಕೊಟ್ಟಿರಬೇಕು. ಹಾಗಂತ ಜನ ಬೇಕು ಅಂತ ಒದ್ದಾಡುವ ಸಂಘಟಕ, ಕಲಾವಿದರಿಗೆ ಬಸ್ ಸ್ಟ್ಯಾಂಡ್‌ನಲ್ಲೂ ಹೋಗಿ ಮಾಡಬಹುದಲ್ವಾ? ಸಾಕಷ್ಟು ಜನ ಅಲ್ಲಿಯೂ ಇರುತ್ತಾರೆ. ಒಮ್ಮೊಮ್ಮೆ ಹೀಗಾಗುವುದಿದೆ. ಜನ ಬರಲಿ, ಆಮೇಲೆ ಮಾಡೋಣ ಅಂತ ಹತ್ತು ಆಸಕ್ತ ಮಂದಿಯನ್ನೂ ಕಾಯಿಸುತ್ತಾರೆ. ಕೊನೆಗೆ ಜನ ಬಂದರೂ ಅದನ್ನು ನೋಡುವವರಾಗಿಲ್ಲದಿದ್ದರೆ, ಇತ್ತ ಅಭಿರುಚಿಯ ಪ್ರೇಕ್ಷಕರನ್ನು ಕಳೆದುಕೊಂಡಿರುತ್ತಾರೆ.

**"ಏಕವ್ಯಕ್ತಿ ಯಕ್ಷಗಾನ ನನ್ನ ವೃತ್ತಿಯಲ್ಲ. ಜೀವನ ನಿರ್ವಹಣೆಗೆ ನನಗೆ ಬೇರೆಯದೇ ಉದ್ಯಮವಿದೆ. 'ಮಂಟಪ ಐಸ್ ಕ್ರೀಮ್' !**

**ಒಂದು ವೇಳೆ ಏಕವ್ಯಕ್ತಿಯನ್ನೇ ಆಯ್ದುಕೊಂಡರೆ ವೃತ್ತಿಧರ್ಮಕ್ಕೆ ಪೂರಕವಾಗಿ ನಡೆದುಕೊಳ್ಳಬೇಕಾಗುತ್ತದೆ ; ಅದಕ್ಕೆ ತಕ್ಕ ಹಾಗೆ ಎಲ್ಲದರಲ್ಲೂ ಒಂದು ಹೊಂದಾಣಿಕೆ, ಬದ್ಧತೆ, ಕ್ರಮವನ್ನು ಪಾಲಿಸಿಕೊಂಡು ಹೋಗಬೇಕಾಗುತ್ತದೆ"**



ಜನ ಬಾರದೇ ಹೋದರೂ ಪ್ರದರ್ಶನ ನೀಡಲಿಕ್ಕೆ ನಾವು ತಯಾರು ಅಂತಾದಾರೆ ಅದರರ್ಥ ಕಲೆ ನಮ್ಮಲ್ಲಿ ಬೇರೂರಿದೆ ಎಂದರ್ಥ.

***ಪ್ರದರ್ಶನದಲ್ಲಿ ಪ್ರೇಕ್ಷಕನ ಗ್ರಹಿಕೆಗಳು ಎಷ್ಟರ ಮಟ್ಟಿಗೆ ನಿರ್ಣಾಯಕ ಪಾತ್ರ ವಹಿಸಬಲ್ಲುವು?***

ನಾಟ್ಯ ಮಾಡುವವ ಮುಖ್ಯ ಅಲ್ಲ. ಆಸ್ವಾದಿಸುವವ ಮುಖ್ಯ, ಅವನೇ ದೊಡ್ಡವ ಕೂಡಾ ! ಮಾಡುವವನಿಗೆ ತಾನು ಮಾಡುತ್ತೇನೆ ಎಂಬ ಆನಂದವಾದರೂ ಇರುತ್ತದೆ. ಅದರೆ ನೋಡುವವ ಹಾಗಲ್ಲ. ಒಂದಷ್ಟು ಆನಂದ  ತೆಗೆದುಕೊಂದು ಹೋಗಬೇಕೆಂದು ಬಂದಿರುತ್ತಾನೆ.  ಆದರೆ ಆತನಿಗೆ ಸಿಗಬೇಕೆಂದೇನಿಲ್ಲವಲ್ಲ. ನೋಡುವವನಿಗೂ ತಾನು ನೋಡ್ತಾ ಇದ್ದೇನೆ ಅನ್ನೋದನ್ನು ಮರೆಸುವಷ್ಟರ ಮಟ್ಟಿಗೆ ಕಲಾವಿದ ಬೆಳೆಯಬೇಕು. ಆಗ ಪ್ರೇಕ್ಷಕನಿಗೂ ತೃಪ್ತಿ ಸಿಗುತ್ತದೆ.

***ನಿಮ್ಮ ಪ್ರಯತ್ನ ನಿಮಗೆ ಕೊಟ್ಟ ಅನುಭವ ಎಂಥದ್ದು ?***

ಏಕವ್ಯಕ್ತಿ ಯಕ್ಷಗಾನದಿಂದ ತುಂಬಾ ಜನರ ಹೃದಯ ಮೀಟಿದ್ದೇವೆ ಅನ್ನುವ ವಿಶ್ವಾಸ ನಮ್ಮದು. ಕಲೆಯ ಮಾರ್ದವತೆ ಮುಟ್ಟಿಸಿದ್ದೇವೆ ಅನ್ನುವ ತೃಪ್ತಿಯಿದೆ. ನಾವು ಪ್ರದರ್ಶನ ನೀಡುವಾಗ ನರ್ತಿಸುತ್ತಾರೆ ಅನ್ನುವ ಆಸೆಯಿರುವುದು ಒಂದು ಬಗೆಯಾದರೆ, ಪ್ರದರ್ಶನ ಮುಗಿಸಿ ಹೋಗುವಾಗ ಏನೋ ಹೇಳಲಾರದ ಪ್ರಕ್ರಿಯೆಯಿದೆಯಲ್ಲಾ ಅದು ಇನ್ನೊಂದು ಬಗೆಯ ಅನುಭವ ! ಮತ್ತೂ ಕೆಲವರು ಐದು ನಿಮಿಷ ಅತ್ತು ನಮಸ್ಕಾರ ಮಾಡಿ ಹೋಗುತ್ತಾರೆ. ಅದನ್ನು ನೀವು ಏನಂತೀರಿ ? ಅನುಭವ ಹೇಳೋಕಾಗಲ್ಲ. ಅನುಭವವನ್ನು ಅನುಭವಿಸಬೇಕು.

> **“ಕಲಾವಿದನ ಪ್ರತಿಭೆ, ಆದರ್ಶ, ತೀವ್ರತೆ ಮೇಲೆ ಕಲೆ ಆವರಿಸಿಕೊಳ್ಳುತ್ತದೆ. ಹಾಗೆ ನೋಡಿದರೆ ಒಂದೊಂದು ಸಲ ಗುರುಗಳ ಒತ್ತಡ ಇಲ್ಲದಿದರೇನೇ ಶಿಷ್ಯರು ಇನ್ನೂ ಚೆನ್ನಾಗಿ ಮಾಡಬಲ್ಲರು. ಗುರುಗಳ ಕೈಯಿಂದ ಕಲಿತ ಶಿಷ್ಯರು ತಮ್ಮ ಗುರುಗಳ ಬಗೆಗೆ ಹೇಳಿಕೊಳ್ಳುವಂತಾಗಬೇಕೆ ವಿನಃ ಕಲಿಸಿದ ಗುರು ಅಹಂನಿಂದ ಆಡಿಕೊಳ್ಳುವಂತಾಗಬಾರದು”**



***ಕಲಾವಿದ ಯಾವಾಗ ಪ್ರೇಕ್ಷಕನಿಗೆ ಆನಂದ ಕೊಡಲು ಅರ್ಹನೆನಿಸಿಕೊಳ್ಳುತ್ತಾನೆ ? ಕಲಾವಿದನ ಮಟ್ಟವನ್ನು ಕಂಡುಕೊಳ್ಳುವುದು ಹೇಗೆ?***

ವಿದ್ಯೆ ಕಲಿಯಲಿಕ್ಕೆ ಮಾಧ್ಯಮ ಬೇಕು. ಪ್ರದರ್ಶನಕ್ಕೆ ಮಾಧ್ಯಮ ಬಿಡಬೇಕು. ಮಾಧ್ಯಮ ಇಟ್ಟುಕೊಂಡೇ ಪ್ರದರ್ಶನ ಮಾಡಲಿಕ್ಕೆ ಇಳಿಬಾರದು. ಮಾಧ್ಯಮ ಬಿಡುವುದು ಅಂದ್ರೆ ಜಾತಿಯನ್ನೇ ಬಿಟ್ಟುಹೋಗುವುದು ಅಂತಲ್ಲ. ಅದಕ್ಕೂ ಅದರದ್ದೇ ಆದ ಸೌಂದರ್ಯವಿದೆ.







ಅದರರ್ಥ, ಕಲಾವಿದ ಮಾಧ್ಯಮ ಬಿಡುವಷ್ಟು ಗಟ್ಟಿಯಾಗಿರಬೇಕು. ಅದರರ್ಥ ಮಾಧ್ಯಮವನ್ನು ಬಿಟ್ಟೇ ಬಿಡಬೇಕು ಅಂತಲೂ ಅಲ್ಲ. ಮಾಧ್ಯಮ ಮೀರುವ ಕಲಾವಿದ ಪ್ರತಿಭಾವಂತನಾಗಿರುತ್ತಾನೆ. ಹಾಗಂತ ಮಾಧ್ಯಮ ಬೇಡ ಅಂತಲ್ಲ. ಪ್ರತಿಭೆ ಇದ್ದರೆ ಕಲಾವಿದ ಹೊಸ  ಹೊಳಹುಗಳನ್ನು ಕಾಣಿಸಬಲ್ಲ. ವಿದ್ಯೆ ಮತ್ತು ಜ್ಞಾನ ಎರಡೂ ಒಂದೇ ಅಲ್ಲ.

ಆದರೆ ಬಹಳಷ್ಟು ನೃತ್ಯ ಕಲಾವಿದರು ಗಿಣಿಪಾಠ ಒಪ್ಪಿಸಿ, ಒಂದುವೇಳೆ ರಂಗದಲ್ಲಿ ತಪ್ಪಿಹೋಯಿತು ಅಂತಾದರೆ ಮೂಡ್ ಹಾಳು ಮಾಡಿಕೊಂಡು ಕೂರುತ್ತಾರೆ. ಅದಾಗಬಾರದು. ಮಾಧ್ಯಮ ಮೀರುವುದೇ ಉದ್ದೇಶ ಅಲ್ಲ. ಆದರೆ ಮೀರಿ ಹೋದರೆ ಅಡ್ಡಿಯಿಲ್ಲ. ನಾವೇನು ಹೇಳಲಿಕ್ಕೆ ಹೊರಟಿದ್ದೀರಿ ಎನ್ನುವುದನ್ನು ಸರಳವಾಗಿ ಮಾಡಿ ತೋರಿಸುವುದೇ ಮುಖ್ಯ. ಯಾವುದೇ ಸಂಗೀತ, ಶೈಲಿಯಲ್ಲಿ ನುಡಿಸಿದರೂ ‘ರಿದಂ’ ಅಂದರೆ ಒಂದು ಲಯದ ಆಧಾರದಲ್ಲಿ ಅದಕ್ಕೆ ತಕ್ಕಂತೆ ತಮ್ಮ ತಮ್ಮ ನೆಲೆಯಲ್ಲಿ ನರ್ತಿಸಲು ಬರಬೇಕು. ನಾಟ್ಯವೆಂದರೆ ಅದೇ!

ಮಾಧ್ಯಮವನ್ನು ಹಿಡೀಬೇಕು ಮತ್ತು ಬಿಡಬೇಕು. ಆ ಕೆಲಸ ಏಕವ್ಯಕ್ತಿಯಲ್ಲಿ ಆಗಿದೆ.

***ಇಂದಿನ ಕಾಲದಲ್ಲಿ ಒಂದು ಕಲೆಯ ಕಲಾವಿದರು ಮತ್ತೊಂದು ಕಲೆಯ ಕಲಾವಿದರನ್ನು ನಡೆಸಿಕೊಳ್ಳುವ ಪ್ರವೃತ್ತಿ ಹೇಗಿದೆ ಅನ್ನಿಸುತ್ತದೆ?***

ಆಶ್ಚರ್ಯವಾಗಬಹುದು;  ಬಹಳ ಭರತನಾಟ್ಯ ಕಲಾವಿದರು ‘ಯಕ್ಷಗಾನ ನೋಡ್ಬೇಡಿ’ ಅನ್ನುತ್ತಾರೆ. ಶೈಲಿ ಹಾಳಾಗಿ ಹೋಗುತ್ತದೆ ಎಂಬ ಉವಾಚ ಬೇರೆ ! ಹಾಗೆ ಹಾಳಾಗಿ ಹೋಗುವುದಿದ್ದರೆ ಉಳಿಸಿಕೊಂಡು ಮಾಡುವುದೇನು ? ಹಾಗೆ ನೋಡಿದರೆ, ಯಾವ ನೃತ್ಯ ಚೆಂದ ಇಲ್ಲ., ಹೇಳಿ ನೋಡೋಣ...,ನಮ್ಮ ಊರಲ್ಲಿ ಕೊರಗರು ಕುಣಿದ ಹಾಗೆ ಹೇಳಿ ಅಣಕಿಸುವವರಿಗೆ ಕುಣಿಯಲಿಕ್ಕೆ ಬರುತ್ತದಾ ? ಅದನ್ನು ಚೆಂದ ಇಲ್ಲ ಅಂತ ಹೇಳ್ತೀರಾ?

ಏನಿದ್ದರೂ, ಹಾಗೆಲ್ಲಾ ಹೇಳುವ ಹಲವರಿಗೆ ಮಾಡುವ ವೈವಿಧ್ಯ ಗೊತ್ತಿಲ್ಲವೆನ್ನಬೇಕಷ್ಟೇ ! ಸೌಂದರ್ಯ ಯಾರೊಬ್ಬರ ಸ್ವತ್ತೂ ಅಲ್ಲ. ಇವೆಲ್ಲವೂ ಶೈಲಿ ಅಂದುಕೊಳ್ಳುವವರ ಹಣೆಬರಹ. ಶೈಲಿ ಅನ್ನೋದಕ್ಕಿಂತ ಹೆಚ್ಚಾಗಿ ವಿಶಾಲವಾಗಿ ಯೊಚಿಸೋದನ್ನು ಕಲಿಯಬಾರದೇ? ಹಾಗೆ



ನೋಡಿದರೆ ನೃತ್ಯ ಕ್ಷೇತ್ರವನ್ನು ಹಾಳು ಮಾಡುವುದರಲ್ಲಿ ಶಾಸ್ತ್ರೀಯ ನೃತ್ಯಪಟುಗಳ ಪಾಲೇ ಹೆಚ್ಚು. ಆದ್ದರಿಂದ ಇಂತಹ ಉದಾಹರಣೆಗಳಲ್ಲಿ ಪ್ರತಿಭೆ ಎನ್ನುವುದಿದ್ದರೂ ಅದು ಪ್ರಶ್ನಾರ್ಹವಾಗಿ ತೋರುತ್ತದೆ.

***ನೃತ್ಯ, ನಾಟ್ಯ ಕಲಿಯ ಬಯಸುವ ಎಳೆಯರಿ ನಿಮ್ಮ ಮಾತೇನು?***

ಉತ್ಸಾಹವೇ ಮಕ್ಕಳಿಗೆ ಮುಖ್ಯ. ಅವರೇನಿದ್ದರೂ ಮೊದಲು ಕಲಿಯಬೇಕಷ್ಟೇ ! ಅವರಿಗೆ ತಿಳಿ ಹೇಳುವುದಕ್ಕಿಂತ ಅವರಿಗೆ ಹೇಳಿಕೊಡೋ ಗುರುಗಳಿಗೆ ಮೊದಲು ಹೇಳಬೇಕು. ಕಲೆಯ ಸಾಧ್ಯತೆಯನ್ನು ಮಕ್ಕಳಿಗೆ ಹೇಳಿಕೊಡುವ ಕೆಲಸ ಗುರು, ಪೋಷಕರಿಂದಾಗಬೇಕು. ಆದರೆ ಈಗ ಹಾಗಿಲ್ಲ. ಕ್ಲಾಸ್ ಒಂದಕ್ಕೆ ಇಂತಿಷ್ಟು ರೂಪಾಯಿ ಫೀಸು ಕೊಟ್ಟು, ಒಂದು ಡ್ರೆಸ್ ಹೊಲಿಸಿ ಪ್ರದರ್ಶನ ಕೊಡ್ತೀನಿ ಅನ್ನೋದೇ ಮುಖ್ಯವಾಗುತ್ತಿದೆ.

ವೇದಿಕೆ ಇರುವುದು ರಸಿಕನ ಹೃದಯಕ್ಕೆ ಪೂರಕ ವಾತಾವರಣ ಕಲ್ಪಿಸಿಕೊಡಲು, ನೋಡುವ ವ್ಯವಸ್ಥೆ ಕಟ್ಟಿಕೊಡಲು! ಆದರೆ ವೇದಿಕೆಯೇರುವುದೇ ಮುಖ್ಯವಾಗುವುದು ದುರಂತ.

***ಕಲಾವಿದರ ಮನಸ್ಥಿತಿ ಹೇಗಿದ್ದರೆ ಒಳ್ಳೆಯದು ಎಂಬುದು ನಿಮ್ಮ ಅನಿಸಿಕೆ?***

ಕಲೆ ಇರುವುದೇ ತಮ್ಮ ಒಳಗನ್ನು ಕರಗಿಸಿಕೊಂಡು ಹದಗೊಳ್ಳುವುದಕ್ಕೆ. ಆದರೆ ಬಹುಪಾಲು ಜನರಿಗೆ ಪ್ರದರ್ಶನದ ಹುಚ್ಚು. ತಾನು ಕಾಣಿಸಿಕೊಳ್ಳಬೇಕೆಂಬುದೇ ಹೆಚ್ಚು. ತಾನು ಕರಗಿಸಿಕೊಳ್ಳಬೇಕೆಂದಿಲ್ಲ. ಕಲೆ ಇರುವುದು ಅಹಂಕಾರ ಕಳಚಿಕೊಳ್ಳಲು. ಬಹಳಷ್ಟು ಮಂದಿ ಅಹಂಕಾರವನ್ನು ಹೆಚ್ಚಿಸಿಕೊಳ್ಳಲು ಕಲೆಯನ್ನು ಅಂಟಿಸಿಕೊಳ್ಳುವವರೇ ಆಗಿದ್ದಾರೆ.

ನಾಲ್ಕು ಜನರ ಕಣ್ಣಿಗೆ ಕಾಣಿಸಿಕೊಳ್ಳುವುದೇ ಈಗ ಮುಖ್ಯವಾಗುತ್ತಿದೆ. ಹ್ಯಾಂಡ್ ಬಿಲ್‌ನಲ್ಲಿ ಹೆಸರು ಬರಲಿ, ಮುಖ್ಯ ಪಾತ್ರ ಅಂತ ಬೋರ್ಡ್ ಹಾಕಲಿ, ಪೇಪರ್‌ನಲ್ಲಿ ಹೆಸರು ದೊಡ್ಡದಾಗಿ ಕಾಣಲಿ ಅಂತೆಲ್ಲ ಮೊದಲು ಇರುತ್ತೆ. ಇರಬೇಕಾದ್ದೂ ಕೂಡಾ ! ಆದರೆ ಮೊದಮೊದಲು ಪುಟ್ಟ ಹೆಜ್ಜೆ ಹಾಕಿಕೊಂಡು ಬಂದರೂ ಕ್ರಮೇಣ ಮಟ್ಟವನ್ನು ಏರಿಸಿಕೊಳ್ಳುತ್ತಾ ಹೋಗಬೇಕು. ಅಹಂಕಾರ ಕಳಚಿಕೊಳ್ಳಲಿಕ್ಕೆ ಕಲೆಯನ್ನು ಇಟ್ಟುಕೊಳ್ಳುವವನು ಮಾತ್ರ ಬೆಳೀತಾನೆ. ಕಲೆ ಎನ್ನುವುದನ್ನು ಅಹಂಕಾರ ಹೆಚ್ಚಿಸಿಕೊಳ್ಳಲಿಕ್ಕೆ ಅಂತ ಯಾರು ಇಟ್ಟುಕೊಳ್ಳುತ್ತಾನೋ ಅಲ್ಲಿ ಕಲೆ ಮತ್ತು ಕಲಾವಿದ ಎರಡೂ ಬೆಳೆಯೋದಿಲ್ಲ. ■





ದರ್ಪಣ

# ನೃತ್ಯ ರಂಗದ ಅನಭಿಷಿಕ್ತ ರಾಣಿ: ರುಕ್ಮಿಣಿ

**...... ಈವರೆಗೆ**

**( ಹೆಸರಾಂತ ರಷ್ಯನ್ ಬ್ಯಾಲೆ ಕಲಾವಿದೆ ಅನ್ನಾ ಪಾವಲೋವಾ ಅವರ ಮಾರ್ಗದರ್ಶನ'ದಲ್ಲಿ ಬ್ಯಾಲೆ ಕಲಿತ ರುಕ್ಮಿಣಿ, ಪಾವಲೋವಾ ಅವರ ಸೂಚನೆಯಿಂದ ಪ್ರೇರಿತರಾಗಿ ಭಾರತಕ್ಕೆ ಬಂದು ನೃತ್ಯ ಪದ್ಧತಿಗಳಿಗೆ ಪುನರುಜ್ಜೀವ ಕೊಡುವ ಕೆಲಸಕ್ಕೆ ಸಿದ್ಧರಾಗುತ್ತಾರೆ. ಆ ಹೊತ್ತಿಗೇ, 1933 ರಂದು ನೃತ್ಯ ಸಂಗಿತ ಅಕಾಡೆಮಿಂಯು ವಾರ್ಷಿಕೋತ್ಸವದ ನೃತ್ಯ ಪ್ರದರ್ಶನವೊಂದಕ್ಕೆ ಕೃಷ್ಣ ಅಯ್ಯರ್ ಅವರಿಂದ ಆಹ್ವಾನದ ಕರೆ ತಲುಪುತ್ತದೆ.)**



ಅದು ನೃತ್ಯ ಸಂಗೀತ ಅಕಾಡೆಮಿಯ ವಾರ್ಷಿಕೋತ್ಸವ.. ಮೀನಾಕ್ಷಿ ಸುಂದರಂ ಪಿಳ್ಳೈ ಅವರ ಶಿಷ್ಯೆಯರಾದ ಜೀವರತ್ನಂ, ರಾಜೇಶ್ವರಿಯವರ ಸಾದಿರ್ ಶೈಲಿಯ ನೃತ್ಯ ಕಾರ್ಯಕ್ರಮ..

ಸಾದಿರ್..? ಯಾವುದನ್ನು ನಾವೀಗ ಸಂಸ್ಕೃತಿಯ ಅಮೂಲ್ಯ ಬೆಸುಗೆಯೆಂದು ಕೊಂಡಾಡಿ ಕಲಿಯುತ್ತೇವೆಯೋ ಅದೇ ಭರತನಾಟ್ಯದ ಮೂಲ ರೂಪ ಅದು., ಈಗ್ಗೆ 70 ವರ್ಷಗಳ ಮೊದಲು ಸಾದಿರ್, ಕೂತ್ತು ಎಂದೆಲ್ಲಾ ಜನರಿಂದ ಕರೆಸಿಕೊಂಡು ದೇವದಾಸಿಯರ ಜೀವನದ ಭಾಗವೇ ಆಗಿ ಹೋಗಿ, ವೇಷಭೂಷಣ, ಹಿನ್ನಲೆ ಸಂಗೀತ, ನೃತ್ಯ ಭಾವಾಭಿನಯ ಗಳು, ನಾಟ್ಯಕ್ರಮ ಎಲ್ಲವೂ ದೋಷಪೂರಿತ ವಾಗಿ, ಎಲ್ಲರಿಂದಲೂ ತುಚ್ಛೀಕರಿಸಲ್ಪಟ್ಟು, ದುರಂತ ಅಂತ್ಯ ಎದುರಿಸಲಿದ್ದ ಕಲಾಪ್ರಕಾರವದು.

ರುಕ್ಮಿಣಿ ಅಚ್ಚರಿಯ ಬಿಡುಗಣ್ಣುಗಳಿಂದ ಅದೇ ಮೊದಲ ಬಾರಿಗೆ ದಕ್ಷಿಣ ಭಾರತದ ನೃತ್ಯಪ್ರಕಾರವೊಂದನ್ನು ನೋಡಿದ್ದು..

ನೋಡಿದ ಕ್ಷಣವೇ ಸಾದಿರ್‌ನ್ನು ಕಲಿಯಲು ತೀರ್ಮಾನಿಸಿಯಾಗಿತ್ತು.

ಆದರೆ ಬ್ರಾಹ್ಮಣ ಕುಲದಲ್ಲಿ ಜನಿಸಿ ಸಾವಿರಾರು ಟೀಕೆಗಳ ನಡುವೆ ಎದ್ದುಬಂದರೂ ರುಕ್ಮಿಣಿಗೆ ಅಷ್ಟು ಸುಲಭವಾಗಿರಲಿಲ್ಲ. ಅದರಲ್ಲೂ ಒಳ್ಳೆಯ ಗುರು ಮತ್ತು ನೃತ್ಯ ವಾತಾವರಣ ಎಂಬುದು ಆಗಿನ ಕಾಲಕ್ಕೆ ತೀರಾ ತ್ರಾಸದಾಯಕ ಸಂಗತಿ. ಸಾದಿರ್ ಸಂಪೂರ್ಣವಾಗಿ ದೇವದಾಸಿ ಪದ್ಧತಿಗಳೊಳಗೆ ಅಡಗಿ ಕುಳಿತು ಕಲಾವಿದರಿಗೆ ಮಹತ್ವವೇ ಇಲ್ಲದ ಕಾಲವದು. ಬಡವರಿಗಂತೂ ಕೈಗೆಟುಕದ ಕಠೋರ ವಾಸ್ತವ. ಪ್ರೋತ್ಸಾಹವೇ ಇರದಿದ್ದ ಕಾಲಕ್ಕೆ, ಒಂದು ವೇಳೆ ಕಲಿಯುತ್ತೇನೆಂದು ಹೊರಟರೂ ನಾನಾ ಅಡ್ಡಿ ಆತಂಕ, ಜೊತೆಗೆ ಬೆನ್ನಿಗೊಂದು ಗುದ್ದು ಎಂಬಂತೆ ಸಮಾಜದ ದೋಷಾರೋಪಣೆಗಳು, ಅಪವಾದ, ಅವಮಾನ, ಅನುಮಾನ. ಮಾತ್ರವಲ್ಲ, ಹಲವು ಬಗೆಯ ದೋಷಗಳಿಂದ, ತುಂಬಿದ್ದ ನೃತ್ಯ ಪದ್ಧತಿಯನ್ನು ವಿದ್ವಾಂಸರೂ ನೋಡಲು ಹಿಂದೇಟು ಹಾಕುತ್ತಿದ್ದಾಗ ಇನ್ಯಾರು ಬಂದಾರು ಸಾದಿರ್ ನೃತ್ಯ ಪ್ರದರ್ಶನಗಳಿಗೆ. ಹೀಗಿದ್ದಾಗ ರುಕ್ಮಿಣಿಗೆ ?


ಸಾದಿರ್ ಕಲಿಯುವ ಹಂತದಲ್ಲಿ ಮಾತ್ರವಲ್ಲ, ಅದಾದ ನಂತರವೂ ತಾಯಿ ಶೇಷಮ್ಮಾಳ್ ಬಳಿ, ಕುಟುಂಬ–ಸಮಾಜದ ಒಳಗೆ ಸಂಬಂಧಿಕರು, ನೆರೆಹೊರೆಯವರು, ಕರ್ಮಠ ಸಂಪ್ರದಾಯಿಗಳು ದೂರಿಕೊಂಡು ಹೀಯಾಳಿಸಿದರೂ ಕೂಡಾ! ಆದರೆ ತಾಯಿ ಶೇಷಮ್ಮಾಳ್, ಸಹೋದರರು ಮತ್ತು ಅದಾಗಲೇ ಅನಿ ಬೆಸೆಂಟ್‌ರ ತರುವಾಯ ಥಿಯೋಸೋಫಿಕಲ್ ಸೊಸೈಟಿಯ ಜವಾಬ್ದಾರಿ ವಹಿಸಿಕೊಂಡಿದ್ದ ಪತಿ ಜಾರ್ಜ್ ಅರುಂಡೇಲ್ ಅವರ ಪ್ರೋತ್ಸಾಹ, ಸಹಕಾರ ಸಿಕ್ಕಿತ್ತು.

ಕಲೆಯ ಹಂಬಲ ರುಕ್ಮಿಣಿಯನ್ನು ಮೊದಲು ಕರೆತಂದಿದ್ದು, ಗುರು ಮುತ್ತು ಕುಮಾರ್ ಪಿಳ್ಳೈ ಅವರ ಬಳಿ. ಸಾದಿರ್‌ನ ಮೊದಲ ಹೆಜ್ಜೆಗಳನ್ನಿರಿಸಿದ್ದು ಅವರ ಮಾರ್ಗದರ್ಶನದಲ್ಲೇ !









**ಪತಿ ಜಾರ್ಜ್ ಅರುಂಡೇಲ್**

ಅದಾದ ನಂತರ ಆ ಕಾಲದ ಖ್ಯಾತ ದೇವದಾಸಿ ಕಲಾವಿದೆ ಮೈಲಾಪುರ ಗೌರಿ ಅಮ್ಮಾಳ್ ಅವರಿಂದ ಅಭಿನಯ ಕಲಿಕೆ..

ಅದರೂ ಆಗಿನ ಕಾಲಕ್ಕೆ ಹೆಸರಾಂತ ಗುರುಗಳೆನಿಸಿದ್ದ ಮೀನಾಕ್ಷಿ ಸುಂದರಂ ಪಿಳ್ಳೈ ಅವರಲ್ಲಿ ಶಿಷ್ಯತ್ವ ಮಾಡಬೇಕೆಂಬ ಕನಸು ಅಷ್ಟು ಸುಲಭಕ್ಕೆ ಈಡೇರಿರಲಿಲ್ಲ. ಆಗ ರುಕ್ಮಿಣಿಗೆ 29 ವರ್ಷ ವಯಸ್ಸು.

ತಂಜಾವೂರು ಪೊನ್ನಯ್ಯ ಪಿಳ್ಳೈ ಅವರ ಮೊಮ್ಮಗ ಮೀನಾಕ್ಷಿ ಸುಂದರಂ ಪಿಳ್ಳೈ. ತಾತ ಪೊನ್ನಯ್ಯ ಪಿಳ್ಳೈ ತಂಜಾವೂರಿನ ತುಳಜಾಜಿ ರಾಜರ ಅಸ್ಥಾನದಲ್ಲಿ ಖ್ಯಾತ ವಿದ್ವಾಂಸರೆನಿಸಿಕೊಂಡ ಮಹಾನುಭಾವರು. ಸಹೋದರರಾದ ಚಿನ್ನಯ್ಯ, ಶಿವಾನಂದ, ವಡಿವೇಲು ಅವರ ಜೊತೆಗೂಡಿ ಸಾದಿರ್ ಅಂದರೆ ಭರತನಾಟ್ಯ ಕ್ಷೇತ್ರಕ್ಕೆ ಒಂದು ಪರಿವಿಡಿಯನ್ನು ಸಿದ್ಧಪಡಿಸಿ ಕೊಟ್ಟವರಲ್ಲಿ ಒಬ್ಬರಾಗಿದ್ದರು. ಇಂದು ನಾವು ನೋಡುವ ನಾಟ್ಯಕ್ರಮವನ್ನು ಸಿದ್ಧಪಡಿಸಿಕೊಟ್ಟವರೇ ಅವರು. ಹಸ್ತಗಳನ್ನು ನೃತ್ಯಕ್ಕಾಗಿ, ಅಭಿನಯಕ್ಕಾಗಿ ವಿಂಗಡಿಸಿದುದಲ್ಲದೆ, ನೃತ್ಯದ ಜೀವಾಳವಾದ ಅಡವುಗಳನ್ನು ಹತ್ತು ವಿಧವಾಗಿ ವರ್ಗೀಕರಿಸಿ ಅದರಲ್ಲಿ ಹನ್ನೆರಡು ಬೇಧಗಳನ್ನು ಮಾಡಿ ನೃತ್ಯಕ್ಕೆ ಹೊಸ ರೂಪ ಕೊಟ್ಟವರು.

ಅದರೊಂದಿಗೆ ಹಲವಾರು ಕೃತಿ, ಜತಿಸ್ವರ, ಅಲರಿಪು, ಪದ, ಜಾವಳಿ, ಪದವರ್ಣ, ತಾನವರ್ಣ, ತಿಲ್ಲಾನಗಳನ್ನು ರಚನೆ ಮಾಡಿ ಸಂಗೀತ ಮತ್ತು ನೃತ್ಯ ಕ್ಷೇತ್ರಕ್ಕೆ ಅಸಾಧಾರಣ ಕೊಡುಗೆಗಳನ್ನಿತ್ತವರು. ತುಳಜಾಜಿ ಮಹಾರಾಜರಿಂದ 'ಸಂಗೀತ ಸಾಹಿತ್ಯ ಭರತ ಶ್ರೇಷ್ಠ' ಎಂಬ ಬಿರುದನ್ನು ಪಡೆದ ಪೊನ್ನಯ್ಯ ಪಿಳ್ಳೈ ಅವರು ತಮಗೆ ದೊರೆತ ಹಣವನ್ನೆಲ್ಲಾ ತಂಜಾವೂರಿನ ಬೃಹದೀಶ್ವರ ದೇವಾಲಾಯದ ರಥೋತ್ಸವಕ್ಕೆ ವಿನಿಯೋಗಿಸುತ್ತಿದ್ದರು. ಇವರ ಮಗಳು ಪೆರಿಯ ಕುಟ್ಟಿಯವರ ಮಗನೇ ಮೀನಾಕ್ಷಿ ಸುಂದರಂ ಪಿಳ್ಳೈ. ಕಟ್ಟುನಿಟ್ಟಿನ ಗುರು.

ಹೀಗೆ ಸಂಗೀತ, ನೃತ್ಯದ ಪಾರಂಪರಿಕ ಶ್ರೀಮಂತಿಕೆಯೇ ಮೂರ್ತಿವೆತ್ತಂತಿದ್ದ ಮೀನಾಕ್ಷಿ ಸುಂದರಂ ಪಿಳ್ಳೈ ಅವರಲ್ಲಿ ಕಲಿಯುವುದು ಅಷ್ಟು ಸುಲಭ ಸಾಧ್ಯವಾಗಿರಲಿಲ್ಲ. ಇ. ಕೃಷ್ಣ ಅಯ್ಯರ್ ಅವರ ನೆರವಿನಂದ ರುಕ್ಮಿಣಿ ನಿವೇದಿಸಿಕೊಂಡರೂ ಗುರು ಪಿಳ್ಳೈ ಅವರು ನಿರಾಕರಿಸಿದ್ದರು !

ಕಾರಣ, ಚಿಕ್ಕ ಹುಡುಗಿಯಂತೆ ಕಾಣುವ ರುಕ್ಮಿಣೀಗೆ ಸಾದಿರ್ ಕಲಿ

ಯುವಷ್ಟು ತಾಕತ್ತು, ಪ್ರತಿಭೆ ಇರಲಿಕ್ಕಿಲ್ಲ ಎಂದು ಅವರ ಆಲೋಚನೆಯಾಗಿತ್ತು !

ಆದರೂ ರುಕ್ಮಿಣಿಯು ಮನವಿ ಗಾಢವಾಗಿಯೇ ಪಿಳ್ಳೈ ಅವರನ್ನು ಹಿಂಬಾಲಿಸಿತ್ತು. ಸರಿ, ಈಕೆಯನ್ನು ಪರೀಕ್ಷೆ ಮಾಡಿದರೆ ಹೇಗೆ ? ತಮ್ಮ ಅಳಿಯ ಸಂಗೀತ ಅಕಾಡೆಮಿ ಅಧ್ಯಕ್ಷ ಸಂಗೀತ ಕಲಾನಿಧಿ ಪೊನ್ನಯ್ಯ ಪಿಳ್ಳೈ ಅವರ ಬಳಿ ಕಳಿಸಿ, ಈಕೆಯ ವ್ಯಕ್ತಿತ್ವ ದೃಢತೆ ತೀರ್ಮಾನ ಮಾಡಿದರೆ..? – ಹಾಗೆಂದು ಮೀನಾಕ್ಷಿ ಸುಂದರಂ ಪಿಳ್ಳೈ ನಿರ್ಧರಿಸುತ್ತಾರೆ.

ಅದರಂತೆಯೇ, ಪೊನ್ನಯ್ಯ ಪಿಳ್ಳೈ ಬಳಿಗೆ ಸಾಗಿತು ರುಕ್ಮಿಣಿ ಪಯಣ...ಕೊನೆಗೆ, ಅವರಿತ್ತ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದರು. ಪರೀಕ್ಷೆಗಳಲ್ಲಿ ಪಾಸ್!

ಅಸಾಧಾರಣ ಪ್ರತಿಭೆ ಎನ್ನುವುದು ಮನವರಿಕೆಯಾಗಿತ್ತು ಅಳಿಯ ಮಾವಂದಿರಿಗೆ..! ಮೀನಾಕ್ಷಿ ಸುಂದರಂ ಪಿಳ್ಳೈ ಸಂತೊಷದಿಂದಲೇ ಸಾದಿರ್ ಕಲಿಸಲು ಒಪ್ಪಿಕೊಂಡರು. ಗುರುಕುಲ ಪದ್ಧತಿಯಲ್ಲಿ ಕೆಲವೇ ಕೆಲವು ತಿಂಗಳುಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದರು ರುಕ್ಮಿಣಿ.

1935, ಡಿಸೆಂಬರ್. ಥಿಯೋಸೋಫಿಕಲ್ ಸೊಸೈಟಿಯ ವಜ್ರ ಮಹೋತ್ಸವ ವರ್ಷ.. ರುಕ್ಮಿಣಿಯವರ ಮೊದಲ ಸಾದಿರ್ ನೃತ್ಯ ಪ್ರದರ್ಶನವದು..! ಆಗ ಅವರ ವಯಸ್ಸು 31 ವರ್ಷ ವಯಸ್ಸು.

ಈ ಪ್ರದರ್ಶನ ಬದಲಾವಣೆ ತಂದೀತೇ ಸಮಾಜದ ಮನಸ್ಸುಗಳಲ್ಲಿ? ಜೀವ ತುಂಬಿತ್ತೇ ನೃತ್ಯ ಪ್ರದರ್ಶನಗಳಿಗೆ..?

(–ಸಶೇಷ)









# ನಿಮ್ಮ ಬರಹ ನಮ್ಮ ಓದು...

ಯಕ್ಷಗಾನ ಕಲಾವಿದ ಸೀತಾರಾಮ ಕುಮಾರ್ ಕಟೀಲು, ಮೈಸೂರು ಭಾರತೀಯ ನೃತ್ಯಕಲಾ ಪರಿಷತ್‌ನ ಗೌರವ ಕಾರ್ಯದರ್ಶಿ ಕೆ. ರಾಮಮೂರ್ತಿ ರಾವ್, ಯಕ್ಷಗಾನ ವಿದ್ವಾಂಸ ಪ್ರಭಾಕರ ಜೋಷಿ, ಮೂಡಬಿದಿರೆಯ ಸಂಗೀತ–ನೃತ್ಯ ಕಲಾವಿದ ಕೆ. ವಿ. ರಮಣ್, ಕಾಸರಗೋಡಿನ ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ, ಖ್ಯಾತ ಸಾಹಿತಿ ಡಾ। ನಾ. ಮೊಗಸಾಲೆ, ಕಲಾವಿದರಾದ ಕಾ.ವಾ. ಆಚಾರ್ಯ, ಸಂತ ಅಲೋಶಿಯಸ್ ಕಾಲೇಜಿನ ರಿಜಿಸ್ಟ್ರಾರ್ ಪ್ರೊ। ಎ. ಎಂ. ನರಹರಿ, ಸುಳ್ಯದ ಸಮಾಜಶಾಸ್ತ್ರ ಉಪನ್ಯಾಸಕ–ಕಲಾ ಸಂಘಟಕ ಚಂದ್ರಶೇಖರ ದಾಮ್ಲೆ, ಪತ್ರಿಕೋದ್ಯಮ ಉಪನ್ಯಾಸಕ ಶರತ್ ಹೆಗ್ಡೆ ಕಡ್ತಲ ಈ ಬಾರಿಯ ಸಂಚಿಕೆಗೆ ಮುದ್ರಣ ನಿಧಿಗೆ ಸಹಕರಿಸಿ ಸದಸ್ಯರಾಗಿರುತ್ತಾರೆ.

ಬೆಂಗಳೂರು ಗಾನಕಲಾ ಪರಿಷತ್ತಿನ ಪತ್ರಿಕೆ ಗಾನಕಲಾಸಿರಿಯ ಸಂಪಾದಕಿ ಅರ್ಚನಾ ಭಟ್, ಪುತ್ತೂರಿನ ಮೂಕಾಂಬಿಕ ನೃತ್ಯಶಾಲೆಯ ಗುರು ದೀಪಕ್ ಕುಮಾರ್, ಉಡುಪಿಯ ನೃತ್ಯ ವಿದುಷಿ ಪಾವನಾ, ವಿಜಯಕರ್ನಾಟಕ ಪತ್ರಿಕೆಯ ಕಾಸರಗೋಡು ವಿಭಾಗೀಯ ಮುಖ್ಯಸ್ಥ ವಿ. ಜಿ. ಕಾಸರಗೋಡು, ಬೆಂಗಳೂರಿನ ಸರಿತಾ ಶೆಟ್ಟಿ, ಕೃಷ್ಣಕುಮಾರ್, ಮಂಗಳೂರಿನ ಪತ್ರಕರ್ತ ಸುಚಿತ್ ಮುಂತಾದವರು ಪತ್ರಿಕೆಯ ಪ್ರಯತ್ನಗಳಿಗೆ ಪ್ರಶಂಸೆ ತೋರಿ ಶುಭ ಹಾರೈಸಿದ್ದಾರೆ.

ನೃತ್ಯ ಕ್ಷೇತ್ರದ ಪ್ರಗತಿಯ ಬಗ್ಗೆ ಪ್ರಾಮಾಣಿಕ ಕಾಳಜಿ ಹಾಗೂ ಬದ್ಧತೆ ಉಳ್ಳ ಪತ್ರಿಕೆಯ ಕಾರ್ಯ ಶ್ಲಾಘನೀಯ. ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ ಲೇಖನಗಳ ಶೈಲಿ ಸರಳವಾಗಿ ಸೊಗಸಾಗಿದೆ. ಈ ಕ್ಷೇತ್ರದ ಹಲವು ತೊಡಕು–ಒಡಕು, ಕಲೆಯ ಕಲಿಕೆಯಲ್ಲಿರುವ ವಿದ್ಯಾರ್ಥಿಗಳ–ಪಾಲಕರ–ಗುರುಗಳ ಇಷ್ಟ–ಕಷ್ಟ–ನಷ್ಟಗಳ ಬಗ್ಗೆ ಬೆಳಕು ಚೆಲ್ಲಬೇಕೆಂಬ ಹಂಬಲ ಹೊಂದಿರುವ ಪತ್ರಿಕೆಯ ಗೊತ್ತುಗುರಿಗಳಲ್ಲಿ ಸ್ಪಷ್ಟತೆ ಇದೆ. ಆರೋಗ್ಯಕರ ಚರ್ಚೆಗೆ ನಿಜಕ್ಕೂ ಇದೊಂದು ಅತ್ಯುತ್ತಮ ವೇದಿಕೆ. ಹಿರಿ–ಕಿರಿಯ ಕಲಾವಿದರ, ಅಭ್ಯಾಸಿಗಳ, ಕಲಾಪ್ರೇಮಿಗಳ ಮತ್ತು ಪೋಷಕರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಪತ್ರಿಕೆ ಬೇಗನೆ ಪ್ರಗತಿ ಹೊಂದಲಿ. ನೃತ್ಯಕ್ಷೇತ್ರಕ್ಕೆ ಇದರಿಂದ ಹೆಚ್ಚು ಲಾಭ ದೊರೆಯುವಂತಾಗಲಿ.

**–ಕೆ. ರಾಮಮೂರ್ತಿ ರಾವ್, ಗೌರವ ಕಾರ್ಯದರ್ಶಿ,**
**ಭಾರತೀಯ ನೃತ್ಯಕಲಾ ಪರಿಷತ್, ಮೈಸೂರು.**

**ನೂ**ಪುರ ಭ್ರಮರಿಯು ತಮ್ಮ ಸಾರಥ್ಯದಲ್ಲಿ ಚೆನ್ನಾಗಿ ಮೂಡಿಬರುತ್ತಿದೆ. ಈ ಪತ್ರಿಕೆಯ ಕುರಿತಾಗಿ ಸಾಕಷ್ಟು ಸಧಬಿರುಚಿಯ ಚರ್ಚೆಗಳು, ಅಭಿಪ್ರಾಯಗಳು ಕೇಳಿ ಬರುತ್ತಿವೆ. ಕಲಾಪ್ರೇಮಿಗಳನ್ನು ಸೆಳೆಯುತ್ತ ಒಳ್ಳೆಯ ಮಾಹಿತಿ ನೀಡುತ್ತಿರುವ ಪತ್ರಿಕೆ ನಿರಂತರ ಸಾಗಲಿ, ಅಭಿಮಾನಿ ಬಳಗವನ್ನು ಸಾಗರದಂತೆ ವಿಶಾಲವಾಗಿ ಹಬ್ಬಿಸಿಕೊಳ್ಳಲಿ. ಇನ್ನಷ್ಟು ಕನ್ನಡಿಗರ ಮನೆ ತಲುಪುವಂತಾಗಲಿ. ಯಶಸ್ಸು ಸಿಗಲಿ.

**-ಗಣಪತಿ ಹಾಸ್ಪುರ, ಪತ್ರಕರ್ತರು, ಚವತ್ತಿ, ಯಲ್ಲಾಪುರ, ಉತ್ತರಕನ್ನಡ.**
**ಪ್ರವೀಣ್ ಕುಮಾರ್, ನೃತ್ಯ ಗುರು, ಬೆಂಗಳೂರು.**
**ಪ್ರಸರಣಾಧಿಕಾರಿ, ಆವಿ ಪುಸ್ತಕ ಮನೆ, ಬೆಂಗಳೂರು.**

## ನಮ್ಮ ಬಳಗದ ಮತ್ತಷ್ಟು ಮಂದಿ...

**ಭಾಸ್ಕರ ಹೆಗಡೆ,** ಪತ್ರಿಕೋದ್ಯಮ ವಿಭಾಗ ಮುಖ್ಯಸ್ಥ, ಶ್ರೀ.ಧ.ಮ.ಕಾಲೇಜು, ಉಜಿರೆ.
**ರಂಜಿತ್ ಯಡಪಡಿತ್ತಾಯ,** ಸಾಫ್ಟ್‌ವೇರ್ ಇಂಜಿನಿಯರ್, ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು
**ಸೀತಾರಾಮ ಕುಮಾರ್ ಕಟೀಲು,** ಯಕ್ಷಗಾನ ಕಲಾವಿದರು, ಶ್ರೀರಾಮಚಂದ್ರಾಪುರ ಮಠ ಯಕ್ಷಗಾನ ಮೇಳ.
**ವಿದ್ಯಾಸಾಗರ್,** ಸಾಫ್ಟ್‌ವೇರ್ ಇಂಜಿನಿಯರ್, ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು
**ಹರೀಶ್.ಟಿ.ಜಿ,** ಕನ್ನಡ ವಿಭಾಗ ಮುಖ್ಯಸ್ಥರು, ಆಳ್ವಾಸ್ ಕಾಲೇಜು, ಮೂಡಬಿದ್ರೆ.
**ಅಕ್ಷತಾ ಭಟ್,** ಪತ್ರಿಕೋದ್ಯಮ ಉಪನ್ಯಾಸಕರು, ಗೋವಿಂದದಾಸ್ ಕಾಲೇಜು, ಸುರತ್ಕಲ್
**ರಾಜೀವ ಹೆಗಡೆ,** ಸ್ನಾತಕೋತ್ತರ ಪತ್ರಿಕೋದ್ಯಮ ವಿದ್ಯಾರ್ಥಿ, ಧಾರವಾಡ


**ನೂಪುರದ 'ಗುಂಗ್ರು' ಗುನುಗುನಿಸಲಿ**
**ಶುಭಾಶಯಗಳೊಂದಿಗೆ**

**ಸೀತಾರಾಮ ಕುಮಾರ್ ಕಟೀಲು**
ಯಕ್ಷಗಾನ ಕಲಾವಿದ, ಶ್ರೀರಾಮಚಂದ್ರಾಪುರ ಯಕ್ಷಗಾನ ಮೇಳ
ಅಂಚೆ ಹಕೂರು, ಹಳೆಯಂಗಡಿ, ಮಂಗಳೂರು.






# ಶ್ರೀ ಶಂಭು ಹೆಗಡೆ, ಕೆರೆಮನೆ



## ನುಡಿ-ನಮನ-ಅಂಜಲಿ

ಬೆಳ್ಳಂಬೆಳಗ್ಗೆ ಮೊಬೈಲ್ ಮೆಸೇಜ್ ಕಿರುಗುಟ್ಟಿತ್ತು.

'ಯಕ್ಷ ರಂಗದ ಅಭಿಜಾತ ಕಲಾವಿದ ಶ್ರೀ ಶಂಭು ಹೆಗಡೆ ಇಡಗುಂಜಿಯ ರಂಗಸ್ಥಳದಲ್ಲಿ 'ಕುಶ–ಲವ'ದ ರಾಮನ ಪಾತ್ರ ನಿರ್ವಹಿಸುತ್ತಿದಾಗಲೇ ನಿಧನ'

ಒಮ್ಮೆಗೇ ಗರ ಬಡಿದಂತಾಯಿತು. ಪ್ರಖರ ಬೆಳಕೊಂದು ಆರಿಹೋಗಿತ್ತು.

ಎರಡು ದಿನಗಳ ಹಿಂದೆಯಷ್ಟೇ ಸುಳ್ಯದ ಯಕ್ಷಗಾನ ಅಕಾಡೆಮಿಯ ಪ್ರಥಮ ಪ್ರಯತ್ನವಾದ ಯಕ್ಷ ಶಿಕ್ಷಣ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಕ್ಷಣಗಳು ಹಸಿರಾಗಿರುವಾಗಲೇ ಹೀಗೊಂದು ಸುದ್ದಿ!

ಶಾಕ್ ಹೊಡೆದಂತಾಗಿತ್ತು. ಅಂದಿನ ಕಾರ್ಯಕ್ರಮದ ಚಹಾ ವಿರಾಮದ ನಡುವೆ ಅವರು ಪಕ್ಕದಲ್ಲೇ ಸರಿದು ಹೋದದ್ದು ಮತ್ತೆ ನೆನಪಾಯಿತು.

****

ಇಂದು ಯಕ್ಷಗಾನಕ್ಕೆ ಪ್ರತ್ಯೇಕ ಅಕಾಡೆಮಿ ರಚನೆ ಆಗಿದ್ದರೆ ಅದರ ಹಿಂದೆ ಶಂಭು ಹೆಗಡೆಯವರ ಸಾತ್ವಿಕ ಹೋರಾಟದ ಪಾಲು ಇದೆ. ಯಕ್ಷಗಾನಕ್ಕೊಂದು ಅಕಾಡೆಮಿ ಬೇಕು, ಅದರ ಸ್ವರೂಪ ಹೇಗಿರಬೇಕು ಎಂಬುದರ ಬಗ್ಗೆ ಎರಡು ದಶಕಗಳ ಹಿಂದೆಯೇ ಸಮರ್ಥವಾಗಿ ಪ್ರತಿಪಾದಿಸಿದ ಧೀಮಂತ ಮೂರ್ತಿ ಅವರು.



ಯಕ್ಷಗಾನ ಅಕಾಡೆಮಿ ಸ್ಥಾಪನೆಯಾಗಿ ಅದರ ವತಿಯಿಂದ ಹಮ್ಮಿಕೊಂಡ ಮೊದಲ ಕಾರ್ಯಕ್ರಮವೇ ಅವರು ಪಾಲ್ಗೊಂಡ ಕೊನೆಯ ಸಭಾ ಕಾರ್ಯಕ್ರಮವಾಗಿರಬೇಕಾದರೆ ಅಕಾಡೆಮಿಯ ಕುರಿತಾಗಿ ಅವರಿಟ್ಟುಕೊಂಡಿದ್ದ ಕನಸು ಮತ್ತು ಅವರ ಸಾರ್ಥಕ ಬದುಕಿಗೆ ಬೇರೆ ಸಾಕ್ಷಿ ಬೇಕಿಲ್ಲ ! ಏನು ಸಾಧಿಸಬೇಕೆಂದುಕೊಂಡಿದ್ದರೋ ಅವೆಲ್ಲವನ್ನೂ ಸಾಧಿಸಿ ಹೊರಟಿದ್ದಾರೆ. ಧನ್ಯವಾಗಿದೆ ಬದುಕು.

'ಕಲಾವಿದನಿಗೆ ಬೇಕಾದ್ದು ಏನು. ವೇಷದಲ್ಲೇ ಕೊನೆಯುಸಿರೆಳೆಯುವುದು. ಅದೇ ಭಾಗ್ಯ'– ಅವರಂದಂತೆಯೇ ಭಗವಂತ ಕರುಣಿಸಿದ್ದಾನೆ. ಎಲ್ಲಾ ಅಸಾಮಾನ್ಯ ಕಲಾವಿದರ ಅಪೇಕ್ಷೆಯೇ ಅದು! ಅವರ ಸೇವೆ ಈ ಕ್ಷೇತ್ರಕ್ಕೆ ಇನ್ನಷ್ಟು ಬೇಕಿತ್ತಾದರೂ, ರಂಗಸ್ಥಳದಲ್ಲಿ ಅಭಿನಯಿಸುವಾಗಲೇ ಹೃದಯಾಘಾತಕ್ಕೆ ಒಳಗಾಗಿ ಅದೂ ತಮ್ಮ ಇಷ್ಟದೇವರ ಸನ್ನಿಧಿಯಲ್ಲೇ ಮೋಕ್ಷ ಕಾಣಬೇಕಾದರೆ ಅವರಿನ್ನೆಂತಹ ಪುಣ್ಯಶಾಲಿಯಾಗಿರಬೇಕು?

ಯಕ್ಷ ಗಾರುಡಿಗನ 'ಪರ್ವ' ಮುಗಿದಿದೆ. ಬಣ್ಣ ಹಚ್ಚಿದಾಗಲೇ ಸಾವು ಅವರನ್ನು ತಟ್ಟಿ ಬದುಕನ್ನು ಸಾರ್ಥಕಗೊಳಿಸಿದೆ.





ತೆಂಕುತಿಟ್ಟಿನ ಅಗ್ರಮಾನ್ಯ ಕಲಾವಿದ ಕುರಿಯ ವಿಠಲ ಶಾಸ್ತ್ರಿಗಳು 'ಬ್ರಹ್ಮ ಕಪಾಲ'ದ ಶಿವನಾಗಿಯೇ ಭೌತಿಕ ದೇಹ ತ್ಯಜಿಸಿದ್ದು ಮತ್ತೊಮ್ಮೆ ನೆನಪಾಯಿತು.

ಯಕ್ಷಗಾನ ಕಲಾವಿದರಿಗೆ ಘನತೆ, ಗೌರವ ಸಂಪಾದಿಸಿಕೊಟ್ಟು, ಕೊನೆಯ ಉಸಿರಿನವರೆಗೂ ರಂಗಸ್ಥಳದ ಚಕ್ರವರ್ತಿಯಂತೆ ಮೆರೆದು, ತೊಟ್ಟ ವೇಷದಲ್ಲೇ ಬದುಕಿನ ಪಾತ್ರ ಮುಗಿಸಿ ಸರಿದ ಅಮರವೆನಿಸುವ ಮುಕ್ತಿ ಸಂಧಾನ..!

ಅರ್ಹ ವಿದಾಯ. ಧೀರೋದಾತ್ತ ಮರಣ.

ಒಬ್ಬ ಕಲಾವಿದನಿಗೆ ಇದಕ್ಕಿಂತ ಒಳ್ಳೆಯ ಮೋಕ್ಷ ಸಿಗಲಾರದು!

****

**ಸುಳ್ಯ ರಾಜ್ಯ ಯಕ್ಷಗಾನ ಅಕಾಡೆಮಿ ಆಯೋಜಿಸಿದ ಕಾರ್ಯಾಗಾರದ ಸಮಾರೋಪ ಸಮಾರಂಭದ ಪ್ರಯುಕ್ತ ಸಭಿಕರನ್ನು ಉದ್ದೇಶಿಸಿ ಮಾಡಿದ ಅವರ ನುಡಿಗಳೇ ಅವರ ಕೊನೆಯ ಭಾಷಣ..ವಸ್ತುವಿನ ಆಯ್ಕೆ, ವಿಭಜನೆ, ಬೆಳೆಸಬಲ್ಲ ಕ್ರಮ, ಅದರ ಭಾವ, ಅನನ್ಯ ಭಾಷೆ, ಜೊತೆಗೊಂದಿಷ್ಟು ರಂಜನೆ...ಹೀಗೆ ಅವರ ಭಾಷಣ ಅಭಿಮಾನಾಸ್ಪದ... ಯಾರನ್ನೂ ಮೆಚ್ಚಿಸಲು ಹೋಗದೇ, ಅನವಶ್ಯವಾಗಿ ಚುಚ್ಚದೆ. ಅವರ ದುರ್ಲಭವೆನಿಸುವ ಅವರ ಮಾತಿನ ತುಣುಕುಗಳು.ಇದೋ ಅದರ ಮೆಲುಕು...**

- ಯಾವುದೇ ನೃತ್ಯ ಪದ್ಧತಿ ನಾಟ್ಯಶಾಸ್ತ್ರಕ್ಕೆ ಅಧೀನ ಆಗಿದೆ ಎಂದಾಕ್ಷಣ ಅದನ್ನು ಶಾಸ್ತ್ರೀಯ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಎಲ್ಲಾ ಪರಿಕರಗಳು ಶಾಸ್ತ್ರದ ವಿಧಾನಗಳಿಗೆ ಹೊಂದಿಕೆಯಾದರೆ ಮಾತ್ರ ಅದು ಶಾಸ್ತ್ರಸ್ಥವೆನಿ ಸಿಕೊಳ್ಳುತ್ತದೆ.
- ಶಾಸ್ತ್ರದ ಶಾಸ್ತ್ರಸ್ಥ ದೋಷವನ್ನು ಪ್ರಶ್ನಿಸಿದಾಗ 'ಅದು ಸಂಪ್ರದಾಯ' ಎನ್ನುವ ಪಲಾಯನವಾದವೇ ಎಲ್ಲಾ ಅನಭಿವೃದ್ಧಿಗೆ ಕಾರಣ.

➲ ಜನನ : ಅಕ್ಟೋಬರ್ **6, 1938**

➲ ಮರಣ : ಫೆಬ್ರವರಿ **3, 2009**

➲ **ಕೆರೆಮನೆ ಶಿವರಾಮ ಹೆಗಡೆ ಹಾಗು ಮುಕಾಂಬೆ ದಂಪತಿಯ ಪುತ್ರ**

➲ **ಪತ್ನಿ ಗೌರಿ, ಮಗ ಶಿವಾನಂದ ಹೆಗಡೆ, ಸೊಸೆ ರಾಜೇಶ್ವರಿ, ಮಗಳು ಶಾರದಾ, ಮೊಮ್ಮಕ್ಕಳು ಶ್ರೀಧರ, ಶಶಿಧರ, ಪ್ರಸನ್ನ**

➲ **ದೇಶ ವಿದೇಶಗಳಲ್ಲಿ 5000ಕ್ಕೂ ಮಿಕ್ಕಿ ಯಕ್ಷ ಪ್ರದರ್ಶನ**

➲ **ಪುರುಷ, ಸ್ತ್ರೀ ವೇಷ ಸೇರಿ 175 ಪಾತ್ರಗಳ ನಿರ್ವಹಣೆ**

➲ **ಖ್ಯಾತ ನೃತ್ಯ ಕಲಾವಿದೆ ಮಾಯಾರಾವ್ ಅವರಲ್ಲಿ ಕೊರಿಯೋಗ್ರಫಿಯ ತಂತ್ರಗಳ ಕಲಿಕೆ**

➲ **ಅರ್ಧ ಚಂದ್ರಾಕೃತಿಯ ರಂಗಮಂಚವನ್ನು ಪರಿಚಯಿಸಿ ಅದರ ಮೇಲೆ ಸಧಭಿರುಚಿಯ ಪ್ರಸಂಗಗಳನ್ನು ಪ್ರದರ್ಶನ.**

➲ **ಗುಣವಂತೆಯಲ್ಲಿ ತಂದೆ ಶಿವರಾಮ ಹೆಗಡೆ ಹೆಸರಿನಲ್ಲಿ ರಂಗಮದಿರ ಮತ್ತು ಯಕ್ಷ ಶಿಕ್ಷಣ ನೀಡುವ ಶ್ರೀಮಯ ಕಲಾಕೇಂದ್ರ ಸ್ಥಾಪನೆ**

- ಯಾವುದೇ ತಿಟ್ಟು ಅಥವಾ ಪರಂಪರೆಗಳು ಸಾಂದರ್ಭಿಕವಾಗಿ ಕಾಲಸ್ಥ, ದೇಶಸ್ಥವಾಗಿ ನಿರ್ಮಾಣಗೊಂಡಾಗಲೇ ಅದಕ್ಕೆ ಪ್ರಸ್ತುತತೆ ಹೆಚ್ಚುತ್ತದೆ. ಪ್ರತಿಯೊಂದು ಶೈಲಿಯೂ ಇರುವುದು ತಪ್ಪಲ್ಲ. ಆದರೆ ಅದು ಆಗಾಗ ಬದಲಾವಣೆಗೊಳ್ಳುವಷ್ಟು ಸುಲಭೀಕೃತ ಆಗಬಾರದು.
- ಯಾವುದೇ ರಂಗಭೂಮಿಯ ಸೈದ್ಧಾಂತಿಕ ದೋಷ ಚರ್ಚಿಸುವಾಗ ಆಪ್ತಸಂವಾದವಷ್ಟೇ ದೋಷಗಳನ್ನು ತಿದ್ದಿಕೊಳ್ಳಲು ಸಹಾಯ ಮಾಡುತ್ತದೆ. ವೇದಿಕೆಯಲ್ಲಿ ಚರ್ಚಿಸಹೊರಟರೆ ವ್ಯಕ್ತಿಯ ಹಿನ್ನಲೆ, ಸಂದರ್ಭ, ಗುಣದೋಷಗಳೇ ಚರ್ಚೆಯನ್ನು, ಜನರ ಮನಸ್ಸನ್ನು ಆಕ್ರಮಿಸಿಕೊಳ್ಳುತ್ತದೆ.
- ಪಾತ್ರವೊಂದು ರಂಗಭೂಮಿಗೆ ಬಂದಾಗ ಅದಕ್ಕೆ ಸೌಂದರ್ಯ, ಅನುಕೂಲ, ಸಮರ್ಪಕತೆ ಇರಬೇಕು. ಕೇರಳದವರ ಕಥಕ್ಕಳಿಗೆ ಪ್ರಪಂಚದಾದ್ಯಂತ ವೀಕ್ಷಕರಿದ್ದಾರೆ. ಅವರ ಎಲ್ಲಾ ಮನೋಧರ್ಮ, ಸಂಯೋಜನೆಗಳು, ಕೆಲಸ, ಬಣ್ಣಗಾರಿಕೆ ರಜ, ಸತ್ವ, ತಮ ಎಂಬ ಮೂರು ಗುಣಗಳನ್ನಾಧರಿಸಿ ಬೆಳೆದಿದೆ. ಹೀಗೆ, ಉಳಿದ ಶಾಸ್ತ್ರೀಯ ಕಲೆಗಳು ಕೂಡಾ ! ಆದರೆ ಇವುಗಳಿಗೆಲ್ಲಾ ಇರುವಂತೆ ಯಕ್ಷಗಾನಕ್ಕೆ ಸಮಗ್ರ ಪಠ್ಯ ಇಲ್ಲ. ಏಕರೂಪತೆಯಿಲ್ಲ.
- ತರ್ಕಶುದ್ಧಿ ಕಂಡುಬರುವುದಿಲ್ಲ. ಹಾಗಾಗಿ ಮೊದಲಿನಿಂದಲೂ ವ್ಯಕ್ತಿ, ಮನೆಗೆ ಸೀಮಿತವಾಗಿ, ಅವರವರದ್ದೇ ಶೈಲಿಗಳಾಗಿ ಬೆಳೆದುಕೊಂಡು ನಿಂತಿದೆ. ಆದ್ದರಿಂದ ಯಕ್ಷಗಾನವನ್ನು ಯಾವುದೇ ಹೊರನಾಡಿನಲ್ಲಿ ಪ್ರದರ್ಶಿಸಿದರೂ ಬರುವ ವೀಕ್ಷಕರಲ್ಲಿ ಬಹುಪಾಲು ಕನ್ನಡಿಗರೋ, ಕರಾವಳಿಗರೋ ಆಗಿರುತ್ತಾರೆ. ಪರಕೀಯ ಪ್ರದೇಶದಲ್ಲಿ ಜನರನ್ನು ನಾವು ಆಕರ್ಷಿಸಿದ್ದು ಕಡಿಮೆ. ವಸ್ತುವಿನಲ್ಲಿ ಸ್ಪಷ್ಟತೆ, ತತ್ವಬದ್ಧತೆಯಿಲ್ಲದಿರುವುದೇ ಇದಕ್ಕೆ ಕಾರಣ. ಅಂತರಾಷ್ಟ್ರೀಯ ಮಟ್ಟದಲ್ಲಿ ಯಕ್ಷಗಾನವನ್ನು ಬೆಳೆಸುವಲ್ಲಿ ಇಂತಹ ಸೀಮಿತ ಮನೋಧರ್ಮದಿಂದ ಏನೂ ಪ್ರಯೋಜಬವಿಲ್ಲ.
- ಕಲೆ ವ್ಯವಸಾಯಮುಖಿಯಾಗಿರಬೇಕೇ? ತತ್ವಮುಖಿಯಾಗಿರಬೇಕೆ? ಈ ಆಯ್ಕೆಯ ಪ್ರಶ್ನೆಯಲ್ಲಿ ಯಕ್ಷಗಾನವು ಆರಿಸಿಕೊಂಡದ್ದು ಮೊದಲನೆಯದನ್ನು. ಹೀಗೆ ವೃತ್ತಿಮುಖಿಯಾಗಿರುವುದರಿಂದಲೇ ಅದರ ಅದೆಷ್ಟೋ ಕಲಾತ್ಮಕ ದೃಷ್ಟಿಗಳು ನಾಶವಾಗಿವೆ. ಜನಸೇರುವುದು, ಜನಾವಲಂಬನೆ ರಂಗಭೂಮಿಯ ತಾತ್ವಿಕ ಯಶಸ್ಸಿಗೆ ಕಾರಣವಾಗುವುದಿಲ್ಲ. ಜೊತೆಗೆ ಯಕ್ಷಗಾನದ ಅಭಿವೃದ್ಧಿ ಕೇವಲ ಆರಾಧನೆಯಿಂದ ಸಾಧ್ಯವಿಲ್ಲ. ಸಮರ್ಥ









ಅಧ್ಯಯನವಿದ್ದರೆ ಮಾತ್ರ ಬೆಳೆಸಲು ಸಾಧ್ಯ. ರಂಗಭೂಮಿಯ ಉನ್ನತಿಗೆ ವಿಶಾಲತೆ, ಉದಾರತೆ ಬೇಕೇ ವಿನಃ ಆರಾಧನೆಯಿಂದ ಆಗುವುದು ಕಷ್ಟ.

- ಕಲಾವಿದನ ನೈಸರ್ಗಿಕ ಅಭಿವ್ಯಕ್ತಿಗೆ ಒಪ್ಪುವ ಮತ್ತು ನೃತ್ಯದ ಸೊಗಸು ಹೆಚ್ಚುವಂತಹ ವೇಷ ಒಪ್ಪುವಂತಿದ್ದರೆ ಒಳ್ಳೆಯದು. ಆದರೆ ಪರಂಪರೆ, ಸಂಪ್ರದಾಯವೆಂದು ವೇಷಭೂಷಣಗಳನ್ನು ಹೇರಿಕೊಳ್ಳುವುದು ಸಮಂಜಸವಲ್ಲ. ವೇಷಭೂಷಣವನ್ನು ಮನುಷ್ಯ ತೊಡಬೇಕೇ ವಿನಃ ವೇಷಭೂಷಣ ಮನುಷ್ಯನನ್ನು ತೊಡುವುದಲ್ಲ.
- ರಾಷ್ಟ್ರೀಯ ಸಾಂವಿಧಾನಿಕ ನೆಲೆಗಟ್ಟಿನಲ್ಲಿ ಪ್ರತ್ಯೇಕತೆಯನ್ನು ಕಾಣಿಸಿಕೊಳ್ಳಬೇಕು. ಕಲೆಗೆ ಇದು ಮುಖ್ಯ ಮತ್ತು ಅವಶ್ಯಕ.
- ಕಲಾವಿದರ ಆಶೋತ್ತರ, ಉದ್ಧಾರಕ್ಕೇ ಅಕಾಡೆಮಿಗಳು ಇರುವುದು ಎಂಬುದು ತಪ್ಪು ಮನೋಭಾವ. ಅದಿರುವುದು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸರ್ಕಾರದ ಮಿತಿಯಲ್ಲಿ, ಚೌಕಟ್ಟಿನಲ್ಲಿ ಅಕಾಡೆಮಿಗಳು ಕೆಲಸ ಮಾಡುತ್ತವೆಯೇ ಹೊರತು, ಅದೇ ಎಲ್ಲವನ್ನೂ ಮಾಡಬೇಕು ಅಂದರೆ ಹೇಗೆ? ಅಷ್ಟಕ್ಕೂ ಅಕಾಡೆಮಿಗಳಿಗಿಂತ ಜನರು ಒಪ್ಪಿಕೊಂಡು ಮಾಡಿದ್ದೇ ಹೆಚ್ಚು. ಸರ್ಕಾರ ಒಪ್ಪಿದರೂ, ಇಲ್ಲದಿದ್ದರೂ ಜನರು ಒಪ್ಪಿ ಸ್ವೀಕರಿಸಿದರೆ ಅದಕ್ಕಿಂತ ಒಳ್ಳೆಯ ಮಾನ್ಯತೆ ಮತ್ತಾವುದಿದೆ?
- ಪರಕೀಯರ ಮುಂದೆ ಕರ್ನಾಟಕದ ಮರ್ಯಾದೆ ಉಳಿಸೋ ರಂಗಪ್ರಕಾರವೆಂಬುದಿದ್ದರೆ ಅದು ಯಕ್ಷಗಾನವೇ ಸರಿ! ಯಕ್ಷಗಾನ ಸ್ವತಂತ್ರ ರಂಗಭೂಮಿಯೆಂಬುದರಲ್ಲಿ ಅನುಮಾನವಿಲ್ಲ. ಜೊತೆಗೆ, ತಾತ್ವಿಕ, ಸಾಮೂಹಿಕ, ಸಾಮಾಜಿಕ ಸವಾಲುಗಳು ಇದೆ. ಈ ವರೆಗೆ ಯಾವುದೇ ಸರ್ಟಿಫಿಕೇಟು ಅಥವಾ ಪರೀಕ್ಷೆ ಇಲ್ಲದೇ ಹೋದದ್ದರಿಂದ ಕಲೆ ಬೆಳೀಲಿಲ್ಲ, ಉಳೀಲಿಲ್ಲ ಅಂದರೆ ತಪ್ಪು. ಕಲಾವಿದರ ವಿವೇಚನೆ, ಸತ್ ಸಂಕಲ್ಪ, ಸಮೂಹದ ಆಲೋಚನೆಯಿಂದ ಕಲೆ ಬೆಳೆದಿದೆ. ಮತ್ತು ಮುಂದೆಯೂ ಬೆಳೆಸಬಹುದು.

****

**ಹ**ಳ್ಳಿಯಲ್ಲಿಯೇ ಹುಟ್ಟಿ, ಹಳ್ಳಿಯಲ್ಲಿಯೇ ಬೆಳೆದು, ಹಳ್ಳಿಗನಾಗಿಯೇ ಬದುಕಿ, ಕೆರೆಮನೆಯೆಂಬ ಪುಟ್ಟ ಹಳ್ಳಿಯನ್ನು ಜಗದ್ವಿಖ್ಯಾತ ಮಾಡಿದ ಯಕ್ಷ ರಂಗ ಕಂಡ ಸರ್ವೋತ್ಕೃಷ್ಟ ಕಲಾವಿದ ಕೆರೆಮನೆ ಶಂಭು ಹೆಗಡೆ. ಕಲೆಯ ಅಭ್ಯುದಯಕ್ಕೆ ದುಡಿದು, ಜಾಗತಿಕವಾಗಿ ಯಕ್ಷಗಾನವನ್ನು ಪರಿಚಯಿಸದ ಯಕ್ಷ ಲೋಕದ ಸವ್ಯಸಾಚಿ.



ಅವರೊಬ್ಬ ನಟ, ಸಂಘಟಕ ಮಾತ್ರವಲ್ಲ ; ಕಲಾವ್ರತಿ, ಕಲಾ ತತ್ವದ ಪರಿಜ್ಞಾನ, ರಂಗ ಸಾಮರ್ಥ್ಯ, ಸೈದ್ಧಾಂತಿಕ, ಬದ್ಧತೆ, ಪ್ರಯೋಗಶೀಲತೆ, ವಿಮರ್ಷಕ ದೃಷ್ಟಿಕೋನಗಳನ್ನು ಹೊಂದಿದ್ದ ಅಪಾರ ಜೀವನ ಪ್ರೀತಿ ಮತ್ತು ಮಮತೆಯ ಸೆಲೆ. ಕಾರ್ಯಶೀಲ ಚಿಂತಕ. ನೃತ್ಯ , ಮಾತು, ಚಲನೆ, ಅಭಿವ್ಯಕ್ತಿ ಎಲ್ಲದರಲ್ಲೂ ಅವರೊಂದು ಪ್ರತಿಮೆ.

ಪರಂಪರೆಯೊಂದಿಗೆ ಹಲವು ಹೊಸ ಸ್ಪರ್ಶಗಳನ್ನಿತ್ತ, ಯಕ್ಷಗಾನದ ಪರಂಪರೆಯ ಚೌಕಟ್ಟಿನಲ್ಲಿ ಹೊಸ ಪ್ರಯೋಗ ಮಾಡಿ ರಂಗದಲ್ಲಿ ಅನೇಕ ಸುಧಾರಣೆ, ಸೀಮೋಲ್ಲಂಘನ ಮಾಡಿದವರು ಶಂಭು ಹೆಗಡೆ. ಕುರಿಯ ವಿಠಲ ಶಾಸ್ತ್ರಿಗಳಂತೆಯೇ ಯಕ್ಷಗಾನಕ್ಕೆ ನಾಟ್ಯದ ಸಮರ್ಥ ಹೊಂದಾಣಿಕೆ ನೀಡಿದವರು. 'ನೃತ್ಯ ಬೇಡ' ಅಂದುಕೊಂಡ ಪಾತ್ರಗಳಿಗೂ ಸಮಯೋಚಿತ ನೃತ್ಯ ಮಾರ್ಗದರ್ಶಿಸಿ 'ರಂಗ ಸೂಕ್ಷ್ಮ'ಗಳನ್ನು ಅಳವಡಿಸಿದವರು. ತಮ್ಮ ಪರಿಸರ, ಪರಂಪರೆಯಿಂದಷ್ಟೇ ಕಲಿತು ಜೋತು ಬೀಳದೆ, ಅವಲಂಬಿತರಾಗದೆ ಕಲಿತದ್ದನ್ನು ರಂಗವಿಜ್ಞಾನದ ಬೆಳಕಿನಲ್ಲಿ ಸಂಯೋಜನೆ ಮಾಡಿದವರು ಅವರ; ಅರ್ಧ ಚಂದ್ರಾಕೃತಿಯ ರಂಗಮಂಚದ ಕಲ್ಪನೆ ಮತ್ತು ಆಯೋಜನೆ ಯಕ್ಷ ಪ್ರದರ್ಶನಕ್ಕೆ ಇಟ್ಟ ಕಳಶ.

ವೃತ್ತಿ ಮೇಳದ ಕಲಾವಿದರಾಗಿ ನಂತರ, ತಂದೆ 1974 ರಲ್ಲಿ ಸ್ಥಾಪಿಸಿದ ಮೇಳವನ್ನು ಪುನಃಸ್ಸಂಘಟನೆ ಮಾಡುವಲ್ಲಿ ಅವರ ಶ್ರಮ ನಿಜಕ್ಕೂ ಇತಿಹಾಸ. ಸ್ಥಾಪಿಸಿದ್ದ ಮೇಳವನ್ನು ಸಂಘಟಿಸಿ ನಿರ್ಮಿಸಿ, ಅಪಾರ ಪ್ರೇಕ್ಷಕವರ್ಗವನ್ನು ಸಂಪಾದಿಸಿಕೊಳ್ಳುತ್ತಾ, ದೇಶ–ಹೊರದೇಶಗಳಲ್ಲೂ ಶುದ್ಧ ಯಕ್ಷಗಾನದ ಪರಿಚಯವನ್ನೀಯುವುದು ಅಷ್ಟು ಸುಲಭದ ಮಾತಲ್ಲ. ಹಾಗಾಗಿಯೇ ಅವರ ಇಡಗುಂಜಿ ಮೇಳ ಯಕ್ಷಗಾನದ ಒಂದು ಚಳುವಳಿ ಇದ್ದಂತೆ.

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಅದೆಷ್ಟೋ ಪ್ರತಿಭಾನ್ವಿತ, ತೆರೆಮರೆಯ ಕಲಾವಿದರಿಗೆ ಪ್ರೋತ್ಸಾಹ ಕೊಟ್ಟು ಬೆಳಕಿಗೆ ತಂದಿದ್ದರು. ವಾದ–ಭಿನ್ನಾಭಿಪ್ರಾಯ ಹೊಂದಿದವರೊಂದಿಗೂ ಸ್ನೇಹಪರರಾಗಿ ಇದ್ದವರು. ಯಕ್ಷಗಾನದ ತಿಟ್ಟುಗಳ ನಡುವಿನ ಕಂಡೂ ಕಾಣದ ವಾದ–ಜಗಳಗಳಿಗೆ ತಮ್ಮದೇ ನಿಟ್ಟಿನಲ್ಲಿ ಉತ್ತರವನಿತ್ತು ಸೌಹಾರ್ದ ಬೆಸೆದವರು. ಇವರ ಪ್ರಸಂಗ ಪಾತ್ರ ಮತ್ತು ಇಡಗುಂಜಿ ಮೇಳದ ಇತಿಹಾಸದ ಬಗ್ಗೆ ಸಂಶೋಧನಾ ಪ್ರಬಂಧಗಳೂ ರಚಿತವಾಗಿವೆ.

'ಕಲಾವಿದನಾದವನಿಗೆ ಎಂಥಹ ಜೀವನ ಇರಬೇಕು' ಎಂದು ಸಾಧಿಸಿ ತೋರಿಸಿದ , ಕಲೆಯ ಎಲ್ಲಾ ವಿಭಾಗಗಳ ಕುರಿತೂ ಚಿಂತನೆ ನಡೆಸಿದ ಸಮತೋಲನ ನಡೆ–ನುಡಿ–ಅಭಿವ್ಯಕ್ತಿಯ ಸಚ್ಚಾರಿತ್ರ್ಯದ ಜೀವ ಅದು. ಅವರಿಗಿದ್ದ ಚಟವೆಂದರೆ ಅದೊಂದೇ– 'ಕಲೆ'.


ಅವರು ಕರುಣಾರಸದ ಸಿದ್ಧಿ ಪುರುಷ. ಉತ್ಕೃಷ್ಟ ಮಟ್ಟದ ವಿಸ್ತಾರವಾದ ಹರಹುವುಳ್ಳ ಅವರ ಚಿಂತನೆ ಪಾತ್ರಗಳಲ್ಲಿ ಸ್ಪಷ್ಟವಾಗುತ್ತಿತ್ತು. ಅನುಕರಿಸಲೇಬೇಕೆನ್ನುವ ಪಾತ್ರಗಳು ಅವು. ಆದರೆ ಅದಷ್ಟು ಸುಲಭವಲ್ಲ. ಸುಭದ್ರಾ ಕಲ್ಯಾಣದ ಕೃಷ್ಣ, ಚತುರ ರಾಜಕಾರಣಿ ಸಂಧಾನ ಕೃಷ್ಣ, ರಾಮ ನಿರ್ಯಾಣದ ರಾಮ, ಸತ್ಯ ಹರಿಶ್ಚಂದ್ರ, ಕರ್ಣಪರ್ವದ ಕರ್ಣ, ಗಧಾಪರ್ವದ ಕೌರವ, ಬಾಹುಕ, ಸಾಲ್ವ, ಅರ್ಜುನ, ಕಾರ್ತವೀರ್ಯ, ಕೀಚಕ, ಮಾಗಧ...ಹೀಗೆ ಪ್ರತೀ ಪಾತ್ರಕ್ಕೂ ತಮ್ಮದೇ ಛಾಪು ಒತ್ತಿ ಎಷ್ಟೋ ಬಾರಿ ವೇಷ ಹಾಕಿ, ಗೆಜ್ಜೆ ಕಟ್ಟಿದವರು ಈ ಬಾರಿ ಮಾತ್ರ ಗೆಜ್ಜೆ ಕಳಚದೇ ಸ್ಥಬ್ದವಾಗಿದ್ದಾರೆ.



ರಥಸಪ್ತಮಿಯಂದು ನಡೆಯುವ ಇಡಗುಂಜಿ ತೇರಿನಲ್ಲಿ ಕೆರೆಮನೆ ಮೇಳದ ಆಟ ಕಳೆದ 5 ದಶಕದಿಂದ ಅವಿಚ್ಛಿನ್ನವಾಗಿ ನಡೆದು ಬರುತ್ತಿದೆ. ಈ ಸಂದರ್ಭದಲ್ಲಿ ಶಂಭು ಹೆಗಡೆಯವರು ತಪ್ಪದೇ ಪಾತ್ರ ವಹಿಸುತ್ತಾರೆ.







ಹಾಗೆ ನೋಡಿದರೆ, ಶಂಭು ಹೆಗಡೆ ಅವರ ಯಕ್ಷ ಬದುಕಿನ ರಂಗಪ್ರವೇಶವಾದದ್ದು ಇಡಗುಂಜಿಯಲ್ಲೇ! ಮೊದಲು ಯಕ್ಷ ಹೆಜ್ಜೆ ಇಟ್ಟು ಬಂದಲ್ಲೇ ಕೊನೆಯ ಹೆಜ್ಜೆ ಹಾಕಿದ್ದಾರೆ.

ಅವರು ಸಾವನ್ನು ಬರಮಾಡಿಕೊಂಡ ರೀತಿಗೆ ಯಕ್ಷಲೋಕವೇ ಅಚ್ಚರಿಪಟ್ಟಿದೆ.

****

**ಅಂ**ದು ರಥಸಪ್ತಮಿ, ದಿನ ಕಳೆದರೆ ಭೀಷ್ಮಾಷ್ಟಮಿ. ಶುಭ ಮುಹೂರ್ತದಲ್ಲಿ ಇಡಗುಂಜಿಯ ಉತ್ಸವ ಬೇರೆ ! ಕಾಕತಾಳೀಯವೋ ಅಥವಾ ಸಾವಿನ ಮುನ್ಸೂಚನೆ ಇತ್ತೋ, ಗೊತ್ತಿಲ್ಲ; ಆದರೆ ಅಂದಿನ 'ಕುಶ–ಲವ' ಪ್ರಸಂಗವನ್ನು ದಾಖಲೆಗಾಗಿ ವೀಡಿಯೋ ರೆಕಾರ್ಡಿಂಗ್ ಮಾಡಲು ಹೇಳಿದ್ದರು. ಈ ಕುರಿತು ಭಾಗವತ ನೆಲ್ಲೂರು ನಾರಾಯಣ ಭಾಗವತ ಅವರಲ್ಲಿ 'ತಮಗೆ ವಯಸ್ಸಾಗಿದೆ, ಇನ್ನೆಷ್ಟು ದಿನ ಕುಣಿತವೋ' ಎಂದು ಹೇಳಿಕೊಂಡಿದ್ದರೂ ಕೂಡಾ ! ದಾಖಲೆ ಉಳಿಯಿತು. ಹೆಗಡೆ ಅವರಿಂದಿಲ್ಲ.

ಪ್ರಸಂಗದಲ್ಲಿ ಕುಶ–ಲವರೊಂದಿಗಿನ ಪದ್ಯದ ಅರ್ಥಗಾರಿಕೆಗೂ ಅವರ ಮಾತು ಸೂಚ್ಯವಾಗಿತ್ತು. 'ನಾನು ಬರುವಾಗಲೂ ವೀರನೇ, ಹೋಗುವಾಗಲೂ ವೀರನೇ' ಎಂದು ಮಾರುತ್ತರ ಕೊಟ್ಟಿದ್ದಾರೆ. ಕೊನೆಗೆ 'ಏಳಿ ಪೋಗುವ ನಾವು ಮುನಿಪರಿದ್ದೆಡೆಗೆ' ಎಂದು ಹೇಳುತ್ತಲೇ ಭಾಗವತರಿಗೆ ಬೇಗ ಮುಗಿಸಲು ಸೂಚನೆ ಕೊಟ್ಟು 'ನಾನು ಬರ್ತೆ' ಎನ್ನುತ್ತಲೇ ರಂಗದಿಂದ ಚೌಕಿಗೆ ಸರಿದಿದ್ದಾರೆ. ಎಷ್ಟೇ ಆಯಾಸವಿದ್ದರೂ ರಂಗಕ್ಕೆ ಬಂದಾಗ ತಮ್ಮನ್ನೇ ಮರೆತು ನಾಟ್ಯ, ಅರ್ಥಗಾರಿಕೆ, ರಂಗ ಚಲನೆಯಲ್ಲಿ ಮಗ್ನವಾಗಿ ಹೋಗುತ್ತಿದ್ದ ಶಂಭು ಹೆಗಡೆ ತಮ್ಮ ವಿದಾಯವನ್ನು ಸೂಚಿಸುತ್ತಲೇ ನೇಪಥ್ಯಕ್ಕೆ ಸರಿದಿದ್ದಾರೆ.

ಕೆಲವು ದಿನಗಳ ಹಿಂದಷ್ಟೇ 'ರಾಮ ನಿರ್ಯಾಣ' ಪ್ರಸಂಗದಲ್ಲಿ ಕಾಲಪುರುಷನಾಗಿ ಅಭಿನಯಿಸಿದ್ದ ಕುಂಬ್ಳೆ ಸುಂದರ ರಾವ್ ಅವರು 'ನಿನ್ನ ಕೆಲಸ ಆಯಿತು, ವೇಷ ಕಳಚುವ ಸಮಯ ಬಂದಿದೆ, ನಿನ್ನ ಅವತಾರದ ಉದ್ದೇಶ ಈಡೇರಿದೆ, ಇನ್ನೂ ಯಾಕೆ ಇಲ್ಲಿದ್ದೀ? ಮರಳಿ ಬಾ' ಎಂದು ಹೇಳಿಕೆ ಕೊಡಿಸಿದ್ದರು. ಅಂದು ಶಂಭು ಹೆಗಡೆ ಅವರದ್ದು ರಾಮನ ಪಾತ್ರ ! ಕಾಲಪುರುಷನ ಪಾತ್ರವಾಡಿದ ಮಾತಿನ ಧ್ವನಿಯನ್ನು ಅಷ್ಟು ಚೆನ್ನಾಗಿ ಅರ್ಥೈಸಿಕೊಂಡು ಕಾಲನ ಕರೆಗೆ ಓಗೊಟ್ಟರೇ?

ಸೀತಾ ವಿಯೋಗ(ಕುಶ–ಲವ ಪ್ರಸಂಗ) ದ 'ರಾಮ'ನಲ್ಲಿ ಅವರಿಗೆ ಒಲವು ಹೆಚ್ಚು. ಕೊನೆಗೆ ಅದೇ ರಾಮನ ಪಾತ್ರದಲ್ಲೇ ವಿಯೋಗ ! 'ರಾಮಾವತಾರ' ಅಲ್ಲಿಗೆ ಮುಗಿದಿದೆ ! ಶೂನ್ಯ ಸೃಷ್ಟಿ.

'ಓ' ಎಂದಿದ್ದಾರೆ ಕಾಲ ಪುರುಷನ ಮಾತಿಗೆ. 'ಏಳಿ ಪೋಗುವ ನಾವು' ಎನ್ನುತ್ತಲೇ ರಂಗದಿಂದ ನಿರ್ಗಮಿಸಿದ್ದಾರೆ.

ಬಣ್ಣ ಹಚ್ಚಿಕೊಂಡೇ ಬಣ್ಣದ ಬದುಕಿಗೆ ವಿದಾಯ !

ಪರಂಧಾಮಕ್ಕೆ ಸಾಗುವ ಹಾದಿಗೆ ರಾಮನ ಪಾತ್ರಕ್ಕೆ ಬಣ್ಣ ಹಚ್ಚಿಕೊಂಡದ್ದು ಕೂಡಾ ಹಾಗೆಯೇ ಇತ್ತು ! ಅವರು ಹಚ್ಚಿದ ಸೂರ್ಯವಂಶದ ತಿಲಕ ಹಣೆಯಲಿತ್ತು !